1995 -96 ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಮಾದಲಬಾರಿಗೆ ನಮ್ಮ ಅರ್ಥಸಚಿವರಾದ ಸನ್ಮಾನ್ಯ ಸಿದ್ಧರಾಮಯ್ಯನವರು ತಮ್ಮ ಒಂದು ಚೊಚ್ಚಲು ಮುಂಗದಪತ್ರವನ್ನು ನಮ್ಮೆಲರ ಮುಂದೆ ಇಟ್ಟಿದ್ದಾರೆ. ಯುಗಾದಿ ಸಂದರ್ಭದಲ್ಲಿ ಈ ಒಂದು ಮುಂಗದಪತ್ರವನ್ನು ಇಟ್ಟಾಗ ಜನರಿಗೆ ಅನುಕೂಲವಾಗುವಂಥ ಕೆಲವು ಸಂಗತಿಗಳು ಇರಬಹುದು, ಹೊಸ ಸರ್ಕರವನ್ನು ಆಯ್ಕೆಮಾಡಿದಂಥ ಜನರಿಗೆ ನೆಮ್ಮದಿ ಸಿಗಬಹುದು, ಅವರು ನೆಮ್ಮದಿ ಮತ್ತು ಗೌರವದಿಂದ ಬದುಕುವುದಕ್ಕೆ ಬೇಕಾದ ಕನಿಷ್ಠ ಸವಲತ್ತುಗಳು ಸಿಕ್ಕಿ ಅವರು ಸಮಾಧಾನದಿಂದ ಇರುತ್ತಾರೆ ಎಂದು ನಾನಾದರೂ ಭಾವಿಸಿದ್ದೆ. ಅದರೆ ಆದು ಅಗಲಿಲ್ಲ. ಕರ್ನಾಟಕದ ಜನತೆಗೆ ಹೊಸ ಸರ್ಕಾರ ಯುಗಾದಿಗೆ ಎಂತಹ ಕೊಡುಗೆಯನ್ನು ನೀಡಿದೆ ಎಂದರೆ ಕಳೆದ ನಲ್ವತ್ತು ವರ್ಷಗಳ ಇತಿಹಾಸದಲ್ಲಿ ಹಿಂದೆಂದೂ ಇಲ್ಲದ ಹಾಗೆ 244 ಕೋಟಿ ರೂಪಾಯಿಗಳ ತೆರೆಗೆಯ ಹೊರೆಯನ್ನು ಹೊರಿಸಿದ್ದಾರೆ. ಇದು ಸಾಲದು ಎಂದು ಈ ಬಜೆಟ್‌ನಲ್ಲಿ 82 ಕೋಟಿ 99 ಲಕ್ಷ ರೂಪಾಯಿಗಳ ಕೊರತೆಯೂ ಸಹ ಇದರಲ್ಲಿದೆ.

ಶ್ರೀ. ವಾಟಾಳ್ ನಾಗರಾಜ್ : ತೆರಿಗೆ ಹಾಕಿದ ವಿಚಾರವನ್ನು ನಗುನಗುತ್ತಾ ಹೇಳುತ್ತಿದ್ದೀರಲ್ಲ?

ಶ್ರೀ ಸಿದ್ಧರಾಮಯ್ಯ : ನಗಬಹುದಾದಂಥ ಕೆಲವು ವಿಷಯಗಳು ಇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಗಬೇಕೆಂದು ತಾವೇ ಹೇಳಿದ್ದೀರಲ್ಲ.

ಅಧ್ಯಕ್ಷರು : ತೆರಿಗೆ ಮತ್ತು ಹೆರಿಗೆ ಎರಡೂ ನೋವಿನ ವಿಚಾರ.

ಶ್ರೀ. ಬಿ.ಎಸ್. ಯಡಿಯೂರಪ್ಪ : ತಾವು ತಮ್ಮ ಕೊಠಡಿಯಲ್ಲಿ ಕರೆದಿದ್ದಾಗ, ನಗುತ್ತಾ ಮಾತನಾಡ ಬೇಕೆಂದು ಹೇಳಿದ್ದೀರಿ. ಆದ್ದರಿಂದ ನಾನು ನಗುತ್ತಾ ಹೇಳುತ್ತಿದ್ದೇನೆ.

ಶ್ರೀ. ವಾಟಾಳ್ ನಾಗರಾಜ್ : ಆಧ್ಯಕ್ಷರ ಅಪ್ಪಣೆ ಮೇರೆಗೆ ನೀವು ನಗುತ್ತಿದ್ದೀರೋ?

ಶ್ರೀ. ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇತ್ತೀಚಿನ ವರ್ಷಗಳಲ್ಲಿ ಅನಿವಾರ್ಯವಾದ ಸಂದರ್ಭಗಳಲ್ಲಿ ಲೇಖಾನುಗಾನವನ್ನು ಪಡೆಯಬೇಕಾಗುತ್ತದೆ. ಆದರೆ ನಾನು ಕಳೆದ ನಾಲ್ಕಾರು ವರ್ಷಗಳಿಂದ ನೋಡುತ್ತಿ

ದ್ದೇನೆ. ಪ್ರತಿಯೊಂದು ಸಂದರ್ಭದಲ್ಲೂ ಸಹ ಲೇಖಾನುದಾನ ಪಡೆಯುವ ಸಂದರ್ಭ ಒದಗಿಬರುತ್ತದೆ. ಅವರು ಹೇಳಬಹುದು ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆ ಬಂತು ಎಂದು. ಅನಿವಾರ್ಯವಾಗಿರುವುದರಿಂದ ಆರು ತಿಂಗಳು ಕಾಲ ಈ ಒಂದು ಲೇಖಾನುದಾನ ತೆಗೆದುಕೊಳ್ಳುತ್ತಿದ್ದೇವೆ ಎಂದು ಅವರು ಹೇಳಬಹುದು.

ಆದರೆ, ಈ ಪದ್ಧತಿ ಸರಿಯಲ್ಲ, ಮೂರು ತಿಂಗಳಿಗಿಂತ ಜಾಸ್ತಿ ಲೇಖಾನುಗಾನ ಪಡೆಯುವುದು ಸರಿಯಾದುದಲ್ಲ. ಹಾಗೆ ಮಾಡಿದರೆ, ಬಜೆಟಿನ ಒಂದು ಪಾವಿತ್ರ್ಯತೆ ಹಾಳಾಗುತ್ತದೆ ಎಂದು ಈ ಸಂದರ್ಭದಲ್ಲಿ ಈ ಸಲಹೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ನಾನು ಇಲ್ಲಿ 12ವರ್ಷಗಳಿಂದ ಶಾಸಕನಾಗಿದ್ದೇನೆ. ಈ ಬಜೆಟ್ ಮುಂದನೆ ಮಾಡಲು ಏನು ಸಮಯವನ್ನು ನಿಗದಿಮಾಡುತ್ತಾರೆ. ಆ ಸಮಯಕ್ಕೆ ಸರಿಯಾಗಿ ಬಜೆಟ್ ಮಂದನೆಯಾಗಬೇಕು. ಈ ಸಲ ಬಜೆಟ್ ಮಂದನೆ ಮಾಡಲು ನಿಗದಿಯಾಗಿದ್ದ ಸಮಯ ಬೆಳಿಗ್ಗೆ 11 ಗಂಟೆಗೆ. ಆದರೆ ಇದು ಮೊದಲಬಾರಿಗೆ ತಡವಾಗಿ ಅಂದರೆ 11-20 ಗಂಟೆಗೆ ಇಲ್ಲಿ ಬಜೆಟನ್ನು ಮಂದನೆ ಮಾಡಿದ್ದಾರೆ. ಬಜೆಟ್ ಮುಂದನೆ ಮಾಡಲು ಒಂದೆರಡು ನಿಮಿಷ ತಡವಾದರೂ ಕೂಡಾ ಅದು ಕಳಂಕವನ್ನು ತಂದ ಹಾಗೆ ಆಗುತ್ತದೆ ಎಂದು ನನ್ನ ಭಾವನೆ. ಇದು ಏಕೆ ಆಯಿತು, ಅಂತಹ ಅನಿವಾರ್ಯ ಪ್ರಸಂಗ ಏನು ಬಂತು? ಮಂತ್ರಿಮಂಡಲದಲ್ಲಿ ಏನಾದರೂ.........

ಶ್ರೀ ಸಿದ್ಧರಾಮಯ್ಯ : ಈ ಸಮಯ, ಗಳಿಗೆ ಬಗ್ಗೆ ನನಗೆ ನಂಬಿಕೆ ಇಲ್ಲ. ಇದು ಮಾನ್ಯ ಅಧ್ಯಕ್ಷರು ಬಂದ ತಕ್ಷಣ ಬಜೆಟ್‌ನ್ನು ಮಂಡಿಸಿದ್ದೇನೆ. ಇದರಲ್ಲಿ ವಿಳಂಬವಾದ ಪ್ರಶ್ನೆ ಇಲ್ಲ.

ಶ್ರೀ ಜೆ. ಎಚ್. ಪಟೇಲ್ : ಅದು ಏಕೆ ಆಯಿತು ಎಂದು ನಾನು ಹೇಳುತ್ತೇನೆ. ಪ್ರಿಂಟಿ ಗ್ ಪ್ರೆಸ್‌ನಲ್ಲಿ ಸ್ವಲ್ಪ ಪವರ್ ಆಫ್ ಆಗಿದ್ದರಿಂದ ಪ್ರಿಂಟ್ ಆಗುವುದಕ್ಕೆ ಸ್ವಲ್ಪ ತಡವಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ : ಇವರಿಗೆ ಪವರ್ ಬಂದು ಜನರಿಗೆ ಪವರ್ ಕೊಡುತ್ತಾರೆ ಎಂದು ನಾವು ತಿಳಿದಿದ್ದೆವು . ಆದರೆ ಇವರಿಗೆ ಪವರ್ ಸಿಕ್ಕಮೇಲೆ ಜನರನ್ನು ಮರೆತೇ ಬಿಟ್ಟರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಲ್ಲದಕ್ಕೂ ನೀವು ಕಾರಣರಾಗುತ್ತೀರಿ. ಬೆಂಗಳೂರಿಗೆ ಕುಡಿಯುವ ನೀರು ಸರಬರಾಜಿನ ವಿಷಯದಲ್ಲಿ, ಬಜೆಟ್ ಮಂಡನೆ ಮಾಡುವ ವಿಷಯದಲ್ಲಿ ಮತ್ತು ಎರಡು ಸಲ ಸದನವನ್ನು ಮುಂದೂಡಬೇಕಾಯಿತು. ಇದಕ್ಕೆ ಏನಾದರೂ ಪರಿಹಾರವನ್ನು ಕಂಡುಹಿಡಿಯಿರಿ.

ಶ್ರೀ ವಾಟಾಳ್ ನಾಗರಾಜ್ :- ಯಡಿಯೂರಪ್ಪನವರೇ, ನೀವು ಭಾಷಣ ಪ್ರಾರಂಭಮಾಡಿದ್ದೀರಿ. ಇವತ್ತು ವಿದ್ಯುಚ್ಛಕ್ತಿ ತೊಂದರೆ 'ಏನೂ ಆಗುವುದಿಲ್ಲವೆಂದು ನೀವು ತಿಳಿದುಕೊಂಡಿದ್ದೀರಿ?

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ನಗುನಗುತ್ತ ಇರುವುದರಿಂದ ಖಂಡಿತ ತೊಂದರೆಯಾಗುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್ :- ನೋಡಿಕೊಳ್ಳುವುದಕ್ಕೆ ನಾನು ಇದ್ದೇನೆ.

ಶ್ರೀ ವಾಟಾಳ ನಾಗರಾಜ :- ಅ ಭರವಸೆಯನ್ನು ನೀವು ಕೊಡುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ :- ಇತ್ತೀಚೆಗೆ ನಾಗರಾಜ ಅವರು ಗಮನಿಸಿಲ್ಲವೆಂದು ಕಾಣುತ್ತದೆ. ಇಲ್ಲಿ ಅವರ ಸನ್ನೆ ಮಾಡಿದರೆ ವಿದ್ಯುಚ್ಛಕ್ತಿ ನಿಂತುಹೋಗುತ್ತದೆ, ಮತ್ತೆ ಸನ್ನೆ ಮಾಡಿದರೆ ವಿದ್ಯುಚ್ಛಕ್ತಿ ಬರುತ್ತದೆ. ನಾನು ಹನ್ನೆರಡು ವರ್ಷಗಳಿಂದ ನೋಡುತ್ತಿದ್ದೇನೆ. ಯಾವತ್ತಾದರೂ ಹತ್ತು-ಹನ್ನೆರಡು ಸೆಕೆಂಡುಗಳಿಗಿಂತ ಹೆಚ್ಚು ಕಾಲ ಕರೆಂಟ್ ಹೋಗಿದ್ದುದು ಉಂಟೆ ? ಇವರು ಯಾವ ಸಮಯದಲ್ಲಿ ಸನ್ನೆ ಮಾಡುತ್ತಾರೆ, ಅಗ ಕರೆಂಟ್ ಹೋಗುತ್ತದೆ ಮತ್ತು ಬರುತ್ತದೆ.

ಶ್ರೀ ವಾಟಾಳ ನಾಗರಾಜ :- ಹಾಗಾದರೆ ಇದೊಂದು ಪಿತೂರಿ ಎನ್ನುತ್ತೀರಾ ?

+ ಶ್ರೀ ಬಿ. ಎಸ್. ಯಡಿಯೂರಪ್ಪ :- ಅದರಿಂದ ನಾನು ಹೇಳುತ್ತಿದ್ದೇನೆ, ಈ ಬಜೆಟ್ ಪುಸ್ತಕದ ಗಾತ್ರ ಕೂಡ ದೊಡ್ಡದಾಗಿದೆ. ಅನಗತ್ಯವಾಗಿ 'ಏಳೆಂಟು ಪುಟಗಳನ್ನು ಕೇಂದ್ರಸರ್ಕಾರವನ್ನು ಟೀಕೆ ಮಾಡುವುದಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಅವರು ' ಏನು ಮಾಡಿದ್ದಾರೆ ಎಂದು ಅಲ್ಲಿ ಅದು ಚರ್ಚೆಯಾಗುತ್ತದೆ. ಅಷ್ಟೇ ಅಲ್ಲ ಕಳೆಗೆ ಐದಾರು ವರ್ಷಗಳಿಂದ 'ಏನು ಹಿಂದಿನ ಸರ್ಕಾರಗಳು ಹೇಳಿಕೊಂಡು ಬಂದಿವೆ, ಅಲ್ಲಿಯ ಅನೇಕ ವಿಷಯಗಳು ಇಲ್ಲಿ ರಿಪೀಟ್ ಅಗಿವೆ. ಅದು ಯಾವ್ಯಾವ ವಿಷಯಗಳು ಎಂದು ನಾನು ನಂತರ ಹೇಳುತ್ತೇನೆ. ಸಾಯಿಲ್ ಅನಾಲಸಿಸ್ ಮಾಡುತ್ತೇವೆ, ಅದಕ್ಕಾಗಿ ಲ್ಯಾಬೋರೇಟರಿ ಮಾಡುತ್ತೇವೆ ಎಂದು ಅನೇಕ ವರ್ಷಗಳಿಂದ ಹೇಳುತ್ತಿದ್ದರು. ರೈತರಿಗೆ ಅದರಿಂದ ತುಂಬ ಅನುಕೂಲ ವಾಗುತ್ತದೆ. ಯಾವಾಗ ಗೊಬ್ಬರ ಉಪಯೋಗಿಸಬೇಕು, ಯಾವಾಗ ಬೆಳೆಯಬೇಕು, ಯಾವಾಗ 'ಏನು ಹಾಕಬೇಕು, ಯಾವರೀತಿ ಹಾಕಬೇಕು ಇದನ್ನೆಲ್ಲಾ ಹೇಳಬಹುದಾಗಿತ್ತು. ಇಂತಹ ಕಾರ್ಯಕ್ರಮಗಳಿಗೆ ಅದ್ಯತೆ ಕೊಡಬೇಕಾಗಿತ್ತು. ಮಾನ್ಯ ವೀರೇಂದ್ರಪಾಟೀಲ್‌ರು ಮುಖ್ಯ ಮಂತ್ರಿಗಳಾಗಿದ್ದಾಗ ಸ್ಟೇಟ್ ಫೈನಾನ್ಸ ಕಮಿಷನ್ ಮಾಡಿ ವರದಿಯನ್ನು ತರಿಸಿಕೊಂಡಿದ್ದರು. ಅದನ್ನು ಟೇಬಲ್ ಮೇಲೆ ಇಡಿ. ಅದರಲ್ಲಿ ಕೆಲವು ಐಡಿಯಾಗಳಿವೆ. ಅದನ್ನು ಉಪಯೋಗ ಮಾಡಿಕೊಳ್ಳುವುದರಿಂದ ಒಳ್ಳೆಯ ರೀತಿಯ ಆಡಳಿತ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಅನುಕೂಲವಾಗುತ್ತದೆ. ಆರ್ಥಿಕ ಇಲಾಖೆಯಲ್ಲಿ ಅತ್ಯಂತ ಪ್ರಮುಖವಾಗಿರತಕ್ಕದ್ದು ಎಂದರೆ ಸೇಲ್ಸ್‌ಟ್ಯಾಕ್ಸ್. ಈ ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿಗೆ 2000 ಕೋಟಿ ರೂಪಾಯಿ ಅದಾಯ ಇದೆ. ಇದರ ಬಗ್ಗೆ ಒಂದು ಮಾತು

ಇಲ್ಲ. ನಾನು ಸಲಹೆ ಕೊಡುತ್ತೇನೆ. ಇದಕ್ಕೆ ಒಂದು ರೀಸರ್ಚ ವಿಂಗ್ ಮಾಡಿ. ನನಗೆ ವಿಶ್ವಾಸ ಇದೆ, ಇದರಲ್ಲಿ ಬಿಗಿ ಮಾಡಿ ಕೃಷ್ಣಾ ನೀರಾವರಿಗೆ ಬೇಕಾಗುವಂಥ ಒಂದು ಸಾವಿರ ಕೋಟಿ ರೂಪಾಯಿಗಳನ್ನುತರುವುದಕ್ಕೆ ಸಾಧ್ಯತೆ ಇದೆ. ಅದರೆ ಈ ದಿಸೆಯಲ್ಲಿ ಪ್ರಯತ್ನ ಅಗಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರ ಭಾಷಣ ಮಾಡುವಾಗ, ಅದರಲ್ಲೂ ಬಜೆಟ್ ಮೇಲೆ ಮಾತನಾಡುವಾಗ ಸದನದಲ್ಲಿ ಮುಖ್ಯ ಕಾರ್ಯದರ್ಶಿಯವರು ಇರಬೇಕು. ಹಣಕಾಸು ಕಾರ್ಯದರ್ಶಿಗಳು ಇರಬೇಕು. ಅವರಿಬ್ಬರೂ ಇಲ್ಲ . ಇಂಥ ಪರಿಸ್ಥಿತಿ ತಮ್ಮ ಕಾಲದಲ್ಲಿ ನಿರ್ಮಾಣ ಆಗುವುದು ಸರಿಯಲ್ಲ. ಇವತ್ತು ವಿರೋಧಪಕ್ಷದ ನಾಯಕರು ಭಾಷಣ ಪ್ರಾರಂಭವಾಗುತ್ತದೆ ಎಂದು ಗೊತ್ತಿದೆ. ಇದು ಪ್ರಮುಖವಾದದು. ಮಾನ್ಯ ಯಡಿಯೂರಪ್ಪನವರು ಗುಮಾನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ಅವರು ಸಲಹೆ ಕೊಟ್ಟಿದ್ದಾರೆ. ಇಂಥ ವಿಶೇಷವಾದ ಸಂದರ್ಭದಲ್ಲಿ ಉನ್ನತ ಅಧಿಕಾರಿಗಳು ಇರಬೇಕು. ಬರುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಬಂದರೆ ಶೊಭೆತರಬಹುದು. ನಮ್ಮ ರಾಜ್ಯದಲ್ಲಿ ನಾವು ಕೊಡುವಷ್ಟು ಹೆಚ್ಚಿನ ತೆರಿಗೆ ಬೇರೆ ಯಾವುದೇ ರಾಜ್ಯದಲ್ಲಿಲ್ಲ. ಇಷ್ಟಾದರೂ ಕೂಡ ರೆವಿನ್ಯೂ ಡಿಫಿಸಿಟ್ ಬಗ್ಗೆ, ಅದನ್ನು ಸರಿಪಡಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಅಗಿಲ್ಲ ಎಂಬುದು ಅಂಕಿಅಂಶಗಳನ್ನು ನೋಡಿದರೆ ಅರ್ಥವಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ಈ ಬಜೆಟ್ ನಲ್ಲಿ ಕೊನೇಪಕ್ಷ ಮಣ್ಣಿನ ಮಕ್ಕಳೆ ತುಂಬಾ ನಿರಿಕ್ಷೆ ಮಾಡುತ್ತಿದ್ದಾರೆ . ಬಜೆಟ್‌ನಲ್ಲಿ ಬರಗಾಲ, ಅತಿವೃಷ್ಟಿ ಮತ್ತು ನೆರೆ ಹಾವಳಿ ಬಗ್ಗೆ ಹೇಳಿದ್ದಾರೆ 500 ಕೋಟಿ ರೂಪಾಯಿಗಳನ್ನು ಪರಿಹಾರಕ್ಕೋಸ್ಕರ ವಿಶ್ವ ಬ್ಯಾಂಕ್‌ನಿಂದ ಕೇಳುತ್ತೇವೆ ಎಂದು ಹೇಳಿದ್ದೀರಿ. ಪವಾರ್‌ಗೆ ಹೊರದೇಶಗಳನ್ನು ತೋರಿಸುವಹಾಗೆ ಬರಗಾಲಕ್ಕೆ ವಿಶ್ವ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರ ಎಂದು ಹೇಳುತ್ತಿ ರಿ. ಹಾಗಾದರೆ ನಿಮ್ಮ ಕರ್ತವ್ಯ ' ಎನೂ ಇಲ್ಲವೇ? ಇದರ ಬಗ್ಗೆ ಒಂದು ಶಬ್ದವೂ ಇಲ್ಲ. 315 ಕಿಲೊಮಿಟರ್ ದೂರ ಕಾರಾವಳಿ ಪ್ರದೇಶ ಇದೆ. ಕರಾವಳಿ ಪ್ರದೇಶವಾದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡಗಳಲ್ಲಿ ಬಿ.ಜೆ.ಪಿ. ಯವರು ಗೆದ್ದರು ಎನ್ನುವ ಕಾರಣದಿಂದಲೋ 'ಏನೋ ಕರಾವಳಿ ಪ್ರದೇಶವನ್ನು ಮರೆತ್ತಿದ್ದಾರೆ. ಮೀನುಗಾರರನ್ನು ಮರೆಯುತ್ತಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರು ಇದ್ದಾಗ ಕರಾವಳಿ ಪ್ರದೇಶದ ಬಗ್ಗೆ ಹೆಚ್ಚು ಹೇಳುತ್ತಿದ್ದರು. ಅದರೆ ಈ ಸರ್ಕಾರ ಇದರಲ್ಲಿ ' ಎನೂ ಹೇಳಿಲ್ಲ. ನನಗೆ ದುಃಖ ತರುವ ಸಂಗತಿ 'ಏನೆಂದರೆ, 5 ಲಕ್ಷ ಜನ ಸರ್ಕಾರ ನೌಕರರಿದ್ದಾರೆ. ಅವರ ಬಹುತೇಕ ಕೆಲಸಗಳು ಅಂದರೆ ಪ್ರೊಮೋಷನ್ಸ್ ಟಾನ್ಸ್‌ಫರ್ಸ್, ಪೋಸ್ಟಿಂಗ್ಸ್ ಇವೇ ಮೂರು ತಿಂಗಳಿಂದ ನಡೆಯುತ್ತಿದೆಯೇ ಹೊರತು ಹಣ ಇಲ್ಲದೆ ಅಭಿವೃದ್ಧಿಕಾರ್ಯಗಳೇ ಅಗಿಲ್ಲ. ನಿಮ್ಮ ಕಾಲದಲ್ಲಾದರೂ ಕೂಡ ಟ್ರಾನ್ಸ್‌ಫರ್ ರೋಗ 'ಎನಿದೆ, ಈ ಪೀಡೆ ' ಎನು ಕಾಡಿಸುತ್ತಿದೆ ಇದರ ಬಗ್ಗೆ ಒಂದು ಬಿಗಿ ನಿಲುವನ್ನು ತೆಗೆದುಕೊಳ್ಳ ಬೇಕು. ಕೊಡಗು ಜಿಲ್ಲೆಯ ಶಾಸಕರು ಪತ್ರ ಬರೆದಿದ್ದರು. ಮೊದಲು ಬೇರೆ ಪಕ್ಷದವರಿದ್ದರು, ಈಗ ಇವರು ಬಂದಿದ್ದಾರೆ.

ಅಧ್ಯಕ್ಷರು :- ಅವರು ಕೊಡಗು ಶಾಸಕರಲ್ಲ, ಸದಾನಂದ ಗೌಡರು ಎಂದು ಪುತ್ತೂರು ಶಾಸಕರು.

ಶ್ರೀ ಬಿ. ಎಸ್. ಯಡಿಯೂರಪ್ಪ :- ಇರಬಹುದು. ಇದೆಲ್ಲಾ ಸೂಕ್ಷ್ಮವಾದ ವಿಷಯಗಳು. ಯಾರೋ ಬಂದಾಗ ತಮಗೆ ಬೇಕಾದವರನ್ನು ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವ ಪದ್ಧತಿ ' ಏನಿದೆ ಇದು ಕೊನೆ ಮಾಡದಿದರೆ ನ್ಯಾಯ ದೊರಕಿಸಿಕೊಟ್ಟಂತಾಗುವುದಿಲ್ಲ. ಜನ ' ಎನು ನೀರೀಕ್ಷೆ ಮಾಡದಿದ್ದರೆ ಅದನ್ನು ಪೂರೈಸಿದಂತಾಗುವುದಿಲ್ಲ. ಇಂದಿನ ಮಾನ್ಯ ಮುಖ್ಯಮಂತ್ರಿಗಳು ಹಿಂದೆ ರಾಮಕೃಷ್ಣ ಹಗಡೆಯವರು ಮುಖ್ಯಮಂತ್ರಿಗಾಳಾಗಿದ್ದಾಗ ನೀರಾವರಿ ಸಚಿವರಾಗಿದ್ದರು. ತಮಗೆ ನೀರಾವರಿ ಬಗ್ಗೆ ತುಂಬಾ ಕಳಕಳಿ ಇತ್ತು. ತಮಗೆ ಕಾರಣಗಳೇನೇ ಇದ್ದರೂ, ಪ್ರಮೂಖವಾದ ಕಾರಣ ನೀರಾವರಿಗೆ ಅಗತ್ಯವಿರುವಷ್ಟು ಹಣ ಕೊಡಲಿಲ್ಲ ಎಂದು ಇಂಥ ಸಂದರ್ಭದಲ್ಲಿ ನಾನು ನೀರಾವರಿ ಮಂತ್ರಿಯಾಗಿ 'ಎತಕ್ಕಿರಬೇಕು ಎಂದು ರಾಜೀನಾಮೆಯನ್ನು ಕೊಟ್ಟ ಧೀಮಂತ ನಾಯಕರು ಎಂದು ಜನ ಅಂದುಕೊಂಡಿದ್ದರು. ಇವತ್ತು ನೀವೇ ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರು. ನಿಮಗೆ ಯಾರೂ ಅಡ್ಡಿ ಮಾಡುವುದಿಲ್ಲ. ಅದರೂ 'ಎತಕ್ಕೆ ಹೆಚ್ಚು ಹಣ ಇಟ್ಟಿಲ್ಲ? ಭಾಷಣಕ್ಕೂ ವಾಸ್ತವ ಸ್ಥಿತಿಗೂ ಹೊಂದಿಕೊಳ್ಳುತ್ತಿಲ್ಲ . ಮೊನ್ನೆ ಭಾಷಣ ಮಾಡುವಾಗ ಸದನದಲ್ಲಿ ಕೊಟ್ಟ ಉತ್ತರದಲ್ಲಿ 'ಎನು ಹೇಳಿದ್ದೀರಿ ? ಕೃಷ್ಣಾ ಯೊಜನೆಯನ್ನು 2000 ನೇ ಇಸವಿಯೊಳಗಾಗಿ ಪೂರೈಸುವ ಉದ್ದೇಶದಿಂದ 1000 ಕೋಟಿ ರೂಪಾಯಿಗೆ ಕಡಿಮೆ ಇಲ್ಲದಂತೆ ಹಣವನ್ನು ಒದಗಿಸಿಲಾಗವುದು ಎಂದು ಹೇಳಿದ್ದೀರಿ. ಮಾರ್ಚ್ 21ನೇ ತಾರೀಖು ಸದನದಲ್ಲಿ ಹೇಳಿರತಕ್ಕದ್ದು. ಅದರೆ ಕೊಟ್ಟಿರುವುದೆಷ್ಟು? ಒಬ್ಬ ಮುಖ್ಯಮಂತ್ರಿ ಹೇಳುವಂಥ ಮಾತಿಗೆ ಬೆಲೆ ಇರಬೇಕಲ್ಲ. ನೀವು ಹೇಳಿದನ್ನ್ನು ಕಾರ್ಯರೂಪಕ್ಕೆ ತರಲಿಲ್ಲ ಎಂದರೆ ಕೃಷ್ಣಾರ್ಪಣ ಅಯಿತು ಎಂದು ತಿಳಿದುಕೊಳ್ಳಬೇಕೇ? ಅದ್ಯತೆ ಯಾವುದು ನಿಮಗೆ ? ಇಂಟರ್‌ನ್ಯಷನಲ್ 'ಎರ್‌ಪೋರ್ಟ್ ಮಾಡುತ್ತೇವೆ, ಬೆಂಗಳೂರು ಮೈಸೂರು ಮಧ್ಯೆ ನಾಲ್ಕು ರಸ್ತೆಗಳನ್ನು ಮಾಡುತ್ತೇವೆ, ಎಂದು ಹೇಳುತ್ತೀರಿ. ನಾನು ಇಂಟರ್‌ನ್ಯಾಷನಲ್ 'ಎರ್‌ಪೋರ್ಟ್' ಮಾಡಬೇಡಿ ಎಂದು ಹೇಳುವುದಿಲ್ಲ. ಹಳ್ಳಿ ರೈತ ತನ್ನ ಹೊಲಕ್ಕೆ ಹೋಗುವುದಕ್ಕೆ ರಸ್ತೆ ಇಲ್ಲ. ಉಸಿರು ಕಟ್ಟುವ ಪರಿಸ್ಥಿತಿಯಲ್ಲಿದ್ದಾನೆ. ಗ್ರಾಮಾಂತರ ಪ್ರದೇಶಗಳ ರಸ್ತೆಗಳೆಲ್ಲಾ ಧೂಳು ತುಂಬಿಕೊಂಡಿವೆ. ಅಸ್ಫಾಲ್ಟಿಂಗ್ ಮಾಡಿಲ್ಲಾ. 20 ಕಿಲೋಮೀಟರ್ ದೂರ ಹೋಗಬೇಕಾದರೆ ಎರಡು ಗಂಟೆಗಳು ಬೇಕಾಗುತ್ತವೆ. ನಗರಪ್ರದೇಶಗಳ ಬಗ್ಗೆ ಯಾವಾಗ ಯೋಚನೆ ಮಾಡಬೇಕು? ಗ್ರಾಮಾಂತರ ಪ್ರದೇಶಗಳಿಗೆ ಮೊದಲು ಆದ್ಯತೆ ಕೊಟ್ಟು ಅದು ಮುಗಿದಮೇಲೆ, ಹೊಟ್ಟೆ ತುಂಬಿದಾಗ ನಗರ ಪ್ರದೇಶಗಳ ಬಗ್ಗೆ ಆದ್ಯತೆಯನ್ನು ಕೊಡಬೇಕು. ನೀವು ತರುವಂಥ ಸಾಲ, ತರುವಂಥ ಭಿಕ್ಷೆ ಎಲ್ಲಾ ಮಣ್ಣಿನ ಮಕ್ಕಳಿಗೆ ನೀರು ಕೊಡುವುದಕ್ಕೆ ಖರ್ಚು ಮಾಡಬೇಕು. ಅವನು ನೆಮ್ಮದಿಯಿಂದ ಬದುಕುವುದಕ್ಕೆ ಬೇಕಾದ ಕೆಲಸಗಳನ್ನು ಮಾಡುವುದಕ್ಕೆ ಸಾಲ ತಂದರೆ ನಮ್ಮ ಪೂರ್ಣ ಸಹಕಾರ ಕೊಡುತ್ತೇವೆ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಕೆಲಸವನ್ನು ಮುಗಿಸುತ್ತೇವೆಂದು ತಾವು ಹೇಳಿದಿರಿ. ಅದಕ್ಕೆ 7 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದ್ದಿರಿ. ಅದರೆ ಬಜೆಟ್ ಭಾಷಣದಲ್ಲಿ 4000

ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಯಾವುದು ಸತ್ಯ, ಯಾವುದು ಅಸತ್ಯ ? ಇವತ್ತು 734 ಟಿ. ಎಂ. ಸಿ. ನೀರಿನಲ್ಲಿ ಎಷ್ಟು ಉಪಯೋಗಿಸಿದ್ದೀರಿ? ಎರಡು ಸಾವಿರ ಇಸವಿಯ ಹೊತ್ತಿಗೆ ಎಷ್ಟು ಉಪಯೋಗಿಸವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಿ. ಈ ದಿಸೆಯಲ್ಲಿ ಯಾಥಾಸ್ಥಿತಿಯ ಒಂದು ಪೇಪರ್ ಕೊಡುವುದಕ್ಕೆ ಸಾಧ್ಯವೆ ? ಈ ಯೋಜನೆ ಬಗ್ಗೆ 'ಏನಾಗಿದೆ ಎಂದು ನಾನು ಹತ್ತು ವರ್ಷಗಳಿಂದ ಕೇಳುತ್ತಿದ್ದೇನೆ. 2000 ಎ.ಡಿ. ಹೊತ್ತಿಗೆ ಇದನ್ನು ಮುಗಿಸುತ್ತೇವೆ, ಅದಕ್ಕಾಗಿ ಒಂದೊಂದು ವರ್ಷಕ್ಕೆ ಇಷ್ಟಿಷ್ಟು ಹಣ ಕೊಡುತ್ತೇವೆ ಎಂದು ಮಾನ್ಯ ಎಸ್. ಎಂ. ಕೃಷ್ಣಾ ಅವರು ನೀರಾವರಿ ಸಚಿವರಾಗಿದ್ದಾಗ ಹೇಳಿದುದ್ದು ಎಲ್ಲಾ ಪತ್ರಿಕೆಗ್ಗಳಲ್ಲಿ ಮುಖಪುಟದಲ್ಲಿ ಬಂತು. ಅದು ಯಾವುದೂ ಕಾರ್ಯರೂಪಕ್ಕೆ ಬರಲಿಲ್ಲ. ಆದರೆ ಇವತ್ತು ನಿಮ್ಮ ಕಾಲದಲ್ಲಾದರೂ ಮಾಡಿ. ಯಾವ ಜನ ನಿಮ್ಮನ್ನು ನಂಬಿ ಒಂದು ಬದಲಾವಣೆಯನ್ನು ತಂದಿದ್ದಾರೋ, ಅಧಿಕಾರಕ್ಕೆ ಬಂದ 100 ದಿವಸದಲ್ಲೇ ರೈತರನ್ನು ಮರೆತುಬಿಟ್ಟರಿ. ಕೃಷ್ಣಾ ನೀರಾವರಿ ಯೋಜನೆಯನ್ನು ಮರೆತುಬಿಟ್ಟರಿ. ಗೌಡರು ಪಟೇಲರು ಹಳ್ಳಿಗೆ ಬರುತ್ತಾರೆಂದು ಜನ ಚಪ್ಪರ ಹಾಕಿಕೊಂಡು ಕಾಯುತ್ತಿದ್ದರು. ಆದರೆ ನೀವು ವಿದೇಶಕ್ಕೆ ಹೋದಿರಿ. ನಿಮಗೆ ಬೇಕಾಗಿದ್ದು ಯಾವುದು ? ಎಲ್ಲವನ್ನೂ ಮರೆತುಬಿಟ್ಟರಿ. ಯಾರು ನಿಮಗೆ ಓಟುಕೊಟ್ಟರು ? ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿ. 100 ದಿವಸದ ಆಡಳಿತದಲ್ಲಿ ಯಡಿಯೂರಪ್ಪನವರೇ ಕೃಷ್ಣಾ ಕಾವೇರಿ ಬೇಸಿನನಲ್ಲಿ ಪ್ರತಿಯೊಂದು ನೀರಾವರಿ ಯೋಜನೆಗಳಿಲೆ ವಿಸಿಟ್ ಮಾಡಿ ಬಂದಿದ್ದೇನೆ, ಸೂಕ್ತ ಆದೇಶ ಕೊಟ್ಟು ಬಂದಿದ್ದೇನೆ ,ತೀವ್ರಗತಿಯಂದ ಕೆಲಸವಾಗುವಂತೆ ನಾನು ಯೋಜನೆ ಮಾಡಿದ್ದೇನೆ ಎಂದು ಹೇಳಬಹುದಾಗಿತ್ತು. ಅಧ್ಯಕ್ಷರೇ, ಒಂದೇ ಮಾತನ್ನು ಕೇಳುತ್ತೇನೆ. ತಾವು ಇಲ್ಲಿ ಹಣಕಾಸು ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಿದ್ದೀರಿ. 1994 -95ರ ಭಜೆಟ್‌ನಲ್ಲಿ ಅಲೋಕೇಷನ್ ಮಾಡಿದ ಹಣದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ 'ಏನು ಖರ್ಚು ಮಾಡಿದ್ದಾರೆ, ಎಷ್ಟು ಬಿಡುಗಡೆ ಮಾಡಿದ್ದರು? ಕಳೆದ 100 ದಿವಸದಲ್ಲಿ ಈ ದೆವಲಪ್ಮಂಟ್ ಅಕ್ಟಿವಿಟೀಸ್‌ಗೆ ನೀವು ಎಷ್ಟು ಬಿಡುಗಡೆ ಮಾಡಿದ್ದೀರಿ, ಎಷ್ಟು ಖರ್ಚು ಮಾಡಿ ದ್ದೀರಿ? ಅಂಕಿ ಅಂಶ ಕೊಡಿ. ತಾವು ಯಾವರೀತಿ ಹಳ್ಳಿಯ ರೈತರುನ್ನು, ಬಡವರನ್ನು, ಕೃಷಿ ಕಾರ್ಮಿಕರನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೀರಿ ಎಂಬುವುದರ ಬಗ್ಗೆ ನಾನು ತಮಗೆ ಅಂಕಿಅಂಶ ಕೊಡುತ್ತೇನೆ. ದಯಮಾಡಿ ಈ ಕಡೆ ವಿಶೇಷವಾದ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಂಧ್ರ ಮತ್ತು ತಮಿಳುನಾಡಿನಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಎಲ್ಲಾ ಕೆಲಸವನ್ನು ಬದಿಗೊತ್ತಿ ಆದ್ಯತೆ ಮೇರೆಗೆ ಪೂರ್ಣ ನೀರನ್ನು ಉಪಯೋಗಿಸಿಕೊಂಡು ಆಗಿದೆ. ಎಕ್ಸಸ್‌ವಾಟರ್ ಅನ್ನು ಕ್ಲೇಮ್ ಮಾಡುತ್ತಿದ್ದಾರೆ. ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿ ಅದಕ್ಕೆ ಕಾಲುವೆ ಮಾಡಿ ನೀರು ಹೊಲಕ್ಕೆ ಕೊಡದೇ ಇದ್ದರೆ ನಮಗೆ ಎಲ್ಲಿ ರೈಟ್ಸ್ ಬರುತ್ತದೆ?

(ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿದ್ದರು.)

ನೇರ ಹರಿದು ಹೊಗತ್ತದೆ. ಹೆಚ್ಚುವರಿ ಪ್ರಾಜೆಕ್ಟ್ ಮಾಡಿಕೊಳ್ಳುತ್ತಿದ್ದಾರೆ. ಇದರಲ್ಲಿ ನಿಮಗೇನೂ ತೊಂದರೆ ? ನೀರಾವರಿ ಸಚಿವರಾಗಿ ನಿಮಗೆ ಅನುಭವ ಇತ್ತು. ಇಂತಹ ಅವಕಾಶಗಳು ಸಿಕ್ಕಿದರೆ ಬಜೆಟ್‌ನಲ್ಲಿ ಸ್ಪಷ್ಟವಾದ ಮಾತನ್ನು ತಾವು ಹೇಳಬೇಕಾಗಿತ್ತು. ನನಗೆ ಆಶ್ಚರ್ಯ. ದುಃಖ ತರುವಂತಹದ್ದು, ಬಜೆಟ್‌ನಲ್ಲಿ ಅಲಾಟ್ ಮಾಡಿದಂತಹ ಹಣವನ್ನು ಸಹ ತಾವು ಖರ್ಚು ಮಾಡಿಲಿಲ್ಲಾ. ತಾವು ನಿನ್ನೆ ಮಾತನಾಡುತ್ತ ಉತ್ತರ ಕೊಟ್ಟಿದ್ದೀರಿ. ಎನು ಹೇಳಿದ್ದಿರಿ. ಪಿಸ್ ವ್ರ್ಕ್ ಕೊಡುತ್ತಾ ಇದ್ದರು. ಅವ್ಯವಹಾರ ನಡೆಯುತ್ತಾ ಇತ್ತು. ಬಿಗಿ ಮಾಡುತ್ತೆನೆ ಎಂದು ಆ ಆಧಿಕಾರಿಯನ್ನು ಮನೆಗೆ ಕಳುಹಿಸಿ. ನಾವುಯಾರು ಅಡ್ಡ ಬರುವುದಿಲ್ಲಾ. 'ಆದರೆ ನೀವು ಮಾಡಿದ್ದೇನು ಎಂದರೆ ಆ ಕೆಲಸಕಾರ್ಯಗಳನ್ನು ಸ್ಟೇ ಮಾಡಿದ್ದೀರಿ. 100 ದಿವಸ ಯಾವ ವರ್ಷ ಜನವರಿ ಫ್ರಬವರಿ ಮಾರ್ಚ್ ತಿಂಗಳಲ್ಲಿ ಹಗಲು ರಾತ್ರಿ ಅಧಿಕಾರಿಗಳು ಕೆಲಸ ಮಾಡಬೇಕಾಗಿತ್ತು. ಇಲ್ಲಿ ಯಾವುದೋ ಒಂದು ಕುಂಟು ನೆಪವನ್ನು ಹೇಳಿಬಹುದು, ನಿಮ್ಮ ಉದ್ದೇಶ ಸರಿ ಇರಬಹುದು, ನೀವು 'ಏನು ಹೇಳಿದ್ದೀರಿ. 400 ಕೋಟಿ ರೂಪಾಯಿಗಳ ಒಂದು ಪೀಸ್‌ವರ್ಕನ್ನು ಕೊಟ್ಟಿದ್ದಾರೆ, ಅದರಲ್ಲಿ ಅವ್ಯವಹಾರ ನಡೆದಿದೆ ಇವತ್ತಿನವರೆಗೂ ಆ ಕೆಲಸ ಅಗಿಲ್ಲಎಂದು. ಅಷ್ಟನ್ನು ಹೇಳಿದರೂ ಅ ಕೆಲಸವನ್ನು ಬಿಡುವುದಕ್ಕೆ ಸಾಧ್ಯವೆ ? ನೀವು ಹೇಳುತ್ತೀರಾ ನಾಳೆ ಏಕೆ ನಾನು ಕೆಲಸವನ್ನು ನಿಲ್ಲಿಸಿದೆ ಎಂದು ಈ 400 ಕೋಟಿ ರೂ. ಗಳು ಕೆಲಸ ಯಾವ್ಯಾವುದು? ಯಾವ್ಯಾವ ಅಧಿಕಾರಿಗಳನ್ನ ಮನೆಗೆ ಕಳುಹಿಸಿದ್ದೀರಿ . ಕೋಟಿಗಟ್ಟಲೆ ಪೀಸ್ ವರ್ಕ್ ಕೊಟ್ಟ ಕೆಲಸ ಮಾಡಿದ್ದು ನಿಮ್ಮ ಗಮನಕ್ಕೆ ಬಂದಿದೆ : ಅದಕ್ಕಾಗಿ ನೀವು ಇದನ್ನು ಹೇಳಿದ್ದೀರಿ. ವಿತಿನ್ 24 ಗಂಟೆಯೊಳಗು ಅಫೀಸರ್ಸನ್ನು ಕರೆದು ಬೇರೆ ಮಾರ್ಗ ಹುಡುಕಿ, ಬೇರೆ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡದೇ, ಹಣಕಾಸಿನ ಪರಿಸ್ಥಿತಿ ಸರಿ ಇರಲಿಲ್ಲ. ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದಕ್ಕೆ ಸಮಯ ಇರಲಿಲ್ಲ. ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಬಹುತೇಕ ದಿವಸಗಳು ವಿದೇಶಕ್ಕೆ ಹೋದಿರಿ. ದೆಹಲಿಗೆ ಹೋದಿರಿ. ಹೀಗಾಗಿ ಅಗಬೇಕಾದ ಆಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತ ಗೊಂಡಿರುವುದು ಕಳೆದ 10 ವರ್ಷಗಳ ಉದಾಹರಣೆಯನ್ನು ತೆಗೆದು ನೋಡುವುದಾದರೇ ಜನವರಿ , ಫೆಬ್ರವರಿ , ಮಾರ್ಚ್ ತಿಂಗಳಲ್ಲಿ ನಾವು ಬಜೆಟ್ಟಿನಲ್ಲಿ ಆಲಾಟ್ ಮಾಡಿರತಕ್ಕ ಹಣವನ್ನು ಅತ್ಯಂತ ಕಡಿಮೆ ಖರ್ಚು ಮಾಡಿರತಕ್ಕ ಯಾವುದಾದರೂ ವರ್ಷ ಇದ್ದರೆ ಅದು ನಿಮ್ಮ ಕಾಲದಲ್ಲಿ. ಅದನ್ನು ನಾವು ಇತಿಹಾಸದಲ್ಲಿ ಬರೆಯಬೇಕಾಗುತ್ತದೆ. ಹೋಗಲಿ 3 ತಿಂಗಳು ಕೆಲಸ ಮಾಡಲಿಲ್ಲ; ಹಣಕಾಸಿನ ಪರಿಸ್ಥಿತಿ ಸರಿ ಇರಲಿಲ್ಲ, ಸರ್ಕಾರ ನೌಕರರಿಗೆ ಸಂಬಳ ಕೊಡು ವುದಕ್ಕೆ ದುಡ್ಡು ಇರಲ್ಲಿಲ. ಆದರೆ ಆ ಕಂಟ್ರಾಕ್ಟ್‌ದಾರರು ಅಲೆಯುತ್ತಿದ್ದಾನಲ್ಲಾ ಕೆಲಸ ಮಾಡಿ, ಹಣವನ್ನಾದರೂ ಇವತ್ತು ಕೊಡುತ್ತೆವೆಂದು. ಯಡಿಯೂರಪ್ಪ, ಯಾವುದು ತಪ್ಪೋ ಯಾವುದು ಸರಿಯೋ, ಕೆಲಸ ಮಾಡಿದ್ದುದು ಸರಿಯಾಗಿದೆ ಎಂದು ಕಂಡು ಬಂದದ್ದನೆಲ್ಲಾ ಬಿಲ್ಲು ಪಾವತಿ ಮಾಡಿದ್ದೇನೆ, ಎಪ್ರಿಲಾ 1 ನೇ ತಾರೀಖಿನಿಂದ ಫ್ರೆಸ್ಸಾಗಿ ಯಾರು ಕೆಲಸ ಮಾಡುತ್ತಾರೆ ಅವರು ಯಾರೂ ತಿಂಗಳು ಗಟ್ಟಲೆ ಹಣಕ್ಕಾಗಿ ಕಾಯಬೇಕಾಗಿಲ್ಲ, ದುಡ್ಡು ಬೇಡ. ಹೇಳುತ್ತಿರಾ ? ಮಾಡಿದಿರಾ ? ಇಲ್ಲಾ. ಅ ದಿಕ್ಕಿನಲ್ಲಿ ನಿಮ್ಮ ಕಡೆಯಿಂದ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಹೊಸದಾಗಿ ಬಂದ ಶಾಸಕರು ಯಾವ ಪಾಪಕ್ಕಾಗಿ ಇಲ್ಲಿಗೆ ಬಂದಿದ್ದಾರೋ ಗೊತ್ತಿಲ್ಲ. ಅಲ್ಲಿಗೆ ಹೋದರೆ ಜನ ಹೂಳಗಡೆ ಸೇರಿಸುವುದಿಲ್ಲ ಕಾಂಗ್ರಸ್ ಸರ್ಕರದಲ್ಲಿ ರಸ್ತೆಗೆ ಕಲ್ಲು

ಹೊಡೆಸಿದ್ದರು. ಅದನ್ನಾದರೂ ಸ್ಪ್ರೆಡ್ ಮಾಡಿಸಲಿಲ್ಲ. ಟಾರ್ ಡ್ರಂ ಬಂದು ಬಿದ್ದಿವೆ. ಅಸ್‌ಫಾಲ್ಟ್ ಮಾಡುತ್ತಿಲ್ಲ. ಈ ರೀತಿ ಜನ ನಮ್ಮನ್ನು ಯಾವ ಭಾಷೆಯಿಂದ ಮಾತನಾಡುತ್ತಿದ್ದಾರೆ, ಯಾವ ರೀತಿ ತಲೆತಗ್ಗಿಸಿ ಕೊಂಡು ಶಾಸಕರು ಒದಾಡತ್ತಿದ್ದಾರೆಂಬುದನ್ನು ಬಹುಶಃ ಅ ಕಡೆ ಈ ಕಡೆ ಎರಡೂ ಕಡೆ ಶಾಸಕರದೂ ಪರಿಸ್ಥಿತಿ ಇರಬಹುದು. ಎಕೆ ಈರೀತಿ ಮಾಡುತ್ತಿದ್ದಾರೊ ಗೊತ್ತಾಗುತ್ತಿಲ್ಲ. ದಯಮಾಡಿ ಇನ್ನಾದರೂ ತಡಮಾಡಬೇಡಿ. ಈ ದಿಕ್ಕಿನಲ್ಲಾದರೂ ವಿಶೇಷವಾಗಿ ಗಮನ ಕೊಡಿ ಅಂತ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಿಮ್ಮ ಅರ್ಥಿಕ ಇಲಾಖೆ. ಅದು ಇನ್ನೂ ಹೆಚ್ಚು ಸಮರ್ಪಕವಾಗಿ ಕೆಲಸಮಾಡಬೇಕು. ನನ್ನ ಸಲಹೆವೆಂದರೆ ವಿಶೇಷವಾಗಿ ಈ ಲೆಕ್ಕ ಪತ್ರ ಅಯವ್ಯಯ, ಅರ್ಥಿಕ ವರ್ಷದ ಕೊನೆಯಲ್ಲೇ ಲೆಕ್ಕ ಪೂರ್ತಿ ಮಾಡಿ ಅದನ್ನು ಸಾರ್ವಜನಿಕ ಲೆಕ್ಕ ಪತ್ರ ಸವಿತಿಯ ಮುಂದೆ ತರುವಂತಹ ವ್ಯವಸ್ಥೆಯಾಗಬೇಕು . 2 ವರ್ಷವಾಗಿದೆ. ತಾವು ಹೇಳಿದ್ದಿರಲ್ಲಾ, ಯಾವುದಾದರೂ ಸಂದರ್ಭದಲ್ಲಿ ಪಬ್ಲಿಕ್ ಅಕೌಂಟ್ಸ್ ಸಮಿತಿಯಲ್ಲಿ ನೋಡುವ ಅವಕಾಶ ಇದೆ ಎಂದು. ಯಾವಾಗ ನೋಡುತ್ತೆವೆ ಎಂದರೆ ತವಗೆ ಗೊತ್ತಿದೆ. ಅಡಿಟ್ ಆದ ಎರಡು ವರ್ಷಗಳ ನಂತರ ಅಲ್ಲಿಗೆ ಬರುತ್ತದೆ. ಅಲ್ಲಿಯವರೆಗೆ ಅದು ಮುಗಿದು ಹೋಗಿರುತ್ತದೆ. ಅದಕ್ಕೋಸ್ಕರ ಇವತ್ತು ನಾನು ಬೇರೆ ಕಡೆ ಅದರ ವಿವರಗಳನ್ನು ತರಿಸಿದ್ದೆನೆ. ತಮಿಳುಮನಾಡಿನಲ್ಲಿ 10 ವರ್ಷದ ಲೆಕ್ಕವನ್ನು ಕಂಪೂಟರೈಸ್ ಮಾಡುತ್ತಾರೆ ಎಂದು ನಾನು ಕೇಳಿದ್ದೆನೆ. ನಿಮಗೆ ಅಂಕಿ ಅಂಶಗಳು ಸಿಕ್ಕಬೇಕು. ಯಾವುದೇ ಪ್ರಶ್ನೆಯನ್ನು ಕೇಳಿದಾಗ ಅದಕ್ಕೆ ಉತ್ತರ ಕೊಡುವುದಕ್ಕೆ ಸಹಾಯವಾಗುತ್ತದೆ. ಅದ್ದರಿಂದ ಇಂತಹಾ ಒಂದು ಕಂಪ್ಯೂಟರ್ ವ್ಯವಸ್ಥೆಯ ಯುಗದಲ್ಲಾದರೂ ಈ ವರ್ಷದಿಂದಲಾದರೂ ಅ ಬಗ್ಗೆ ಪ್ರಯತ್ನ ಮಾಡುತ್ತೆನೆಂದು ಅರ್ಥ ಸಚಿವರು ಹೇಳಿದರೆ, ಬಹುಶಃ ಅದು ಅನುಕೂಲವಾಗಬಹುದೆಂದು ನಾನ್ನಾದರೂ ತಿಳಿದು ಕೊಂಡಿದ್ದೇನೆ. ಪೂರಕ ಅಂದಾಜುಗಳೇನು ಇವೆ. ಇದು ಅರ್ಥಹೀನವಾಗಿದೆ ಇತ್ತೀಚಿನ ವರ್ಷಗಳಲ್ಲಿ 94 - 95ನೇ ಸಾಲಿನ ಪೂರಕ ಅಂದಾಜಿನಲ್ಲಿ ಹೇಳುತ್ತಾರೆ. ಠೇವಣಿಗಳ ಮೇಲೆ ಬಡ್ಡಿ ಕೊಡುವುದಕ್ಕೆ 25 ಕೋಟಿ ಎಂದು ತೊರಿಸಿದ್ದಾರೆ. ಹಾಗದರೆ ಸಾದಿಲ್ವಾರು ವೆಚ್ಚದ ಪಟ್ಟಿಯನ್ನು ಕೊಡುವಾಗ ನಿಮಗೆ ಗೊತ್ತಿರಲಿಲ್ಲವೆ? ಅದಕ್ಕೆ ಬಜೆಟ್ ಅಲೋಕೆಷನ್ ಮಾಡಿಕೊಳ್ಳುವುದು ನಿಮ್ಮ ಕರ್ತವ್ಯವಲ್ಲವೇನು? ಪೂರಕ ಅಂದಾಜಿನಲ್ಲಿ ಇದನ್ನು ಸೇರಿಸುತ್ತಿರ ಅಂದರೆ ಇದಕ್ಕೆ ಅರ್ಥ ಏನು ಇದೆ ? ಪ್ರಾವಿಜನ್ ಇರುವ ಉದ್ದೇಶ ಏನು ಇದೆ.? ಅದಕ್ಕಾಗಿ ನಾನು ಪೂರಕ ಅಂದಾಜಿನ ವಿವರಗಳನ್ನು 10-12 ದಿವಸಗಳ ಮುಂಚೆ ಕೊಡಿ. ನಾವು ಅದನ್ನು ಓದಿಕೂಳ್ಳುವುದಕ್ಕೆ ಸಹಾಯುವಾಗುತ್ತದೆಂದು ಹೇಳಿದರೂ ಇವತ್ತಿನವರೆಗೂ ನಮಗೆ ಕೊಟ್ಟಿಲ್ಲಾ. ನಾವು ನಾಳೆ ನಾಡಿದ್ದು ಪಾಸು ಮಾಡಬೇಕು. ಹೇಗೆ ಪಾಸು ಮಾಡಬೇಕು ? ಅದನ್ನು ಓದಬೇಕಲ್ಲ; ಕೇವಲ ನೆಪ ಮಾತ್ರಕ್ಕೆ ಇಡುತ್ತೇವೆ. ಹೇಗೂ ಪಾಸಾಗಬೇಕು. ಬಹುಮತ ಇದೆ ನಾವು ಪಾಸು ಮಾಡಿಕೊಳ್ಳುತ್ತೇವೆ ಎಂದು ಹೇಳುವುದಾದರೆ ಅದಕ್ಕೆ ನನ್ನ ಅಭ್ಯಂತರ ಇಲ್ಲ. ಅದರೆ ಕೊನೆಯ ಪಕ್ಷ ಪೂರಕ ಅಂದಾಜುಗುವುದಕ್ಕೆ ವಿವರಗಳನ್ನು 10-12 ದಿವಸಗಳ ಮುಂಚೆ ಕೊಟ್ಟು ಅದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ದುಃಖ ತರುವ ಸಂಗತಿ. ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು

ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನು ಎಂದು ಹೇಳಿದರೆ ''ಯೋಜನಾ ಗುರಿಯನ್ನು ತಲುಪುವುದು ಅಸಾಧ್ಯ ಜನವರಿ 17ನೇ ತಾರೀಖು. ಬೆಂಗಳೂರಿನಲ್ಲಿ. ರಾಜ್ಯ ಸರ್ಕಾರ ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಹೆದರಿಸುತ್ತಿರುವುದರಿಂದ 1994- 95ರ ಸಾಲಿನ ನಿಗದಿಪಡಿಸಿದ 3290 ಕೋಟಿ ರೂ.ಗಳು ಯೋಜನಾ ಗುರಿಯನ್ನು ತಲುಪಲು ಸಾಧ್ಯವಾಗದಾಗಿದೆ'' ಎಂದು ಮುಖ್ಯ ಮಂತ್ರಿ ಶ್ರೀ ದೇವೇಗೌಡರು ತಿಳಿಸಿದ್ದಾರೆ. 1994 - 95 ಆರ್ಥಿಕ ವರ್ಷದ ಆರಂಭದಿಂದ ಇಲ್ಲಿಯವರೆಗೆ ರಾಜ್ಯದ ಯೋಜನೆಗಳಿಗೆ ನಿಗದಿಪಡಿಸಿದೆ 3382 ಕೋಟಿ ರೂ. ಗಳ ಯೋಜನಾ ವೆಚ್ಚದ ಬಾಬ್ತು ಕೇವಲ 1760 ಕೋಟಿ ರೂ. ಗಳು ವೆಚ್ಚವಾಗಿದೆ. ಉಳಿದಿರುವ ಇನ್ನೆರಡು ತಿಂಗಳು ಅವಧಿಯಲ್ಲಿ 1680 ಕೋಟಿ ರೂ.ಗಳನ್ನು ವೆಚ್ಚ ಮಾಡಬೇಕಾಗಿದೆ. ಆದರೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಸ್ಥಿತಿಯಲ್ಲಿಲ್ಲ ಎನ್ನತಕ್ಕ ವಿಚಾರದಲ್ಲಿ ಮುಚ್ಚು ಮರೆ ಇಲ್ಲ; ಹೀಗಾಗಿ ಉಳಿದಿರುವ ಗುರಿ ಅಸಾಧ್ಯ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಯೋಜನಾ ವೆಚ್ಚ ಯೋಜನಾ ವೆಚ್ಚ 3380 ಕೋಟಿ ರೂ.ಗಳು ಎಂದು ನಿಮ್ಮ ಅಂಕಿ ಅಂಶಗಳ ಪ್ರಕಾರ ಸ್ಪಷ್ಟವಾಗುತ್ತದೆ. ಸುಮಾರು 800 ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆ. ನೀವು ತಲುಪುವುದಕ್ಕೆ ಆಗುವುದಿಲ್ಲ ಎಂದು ಒಪ್ಪಿಕೋಡಿದ್ದೀರಿ. ಹಾಗಾದರೆ ಈ ರೀತಿಯ ಪತ್ರಿಕಾ ಹೇಳಿಕೆಯನ್ನು ಕೊಡುವುದರಿಂದ ನಿಮ್ಮ ಜವಾಬ್ದಾರಿಯನ್ನು ಏನು ನಿರ್ವಹಿಸಿದ ಹಾಗೆ ಅಯಿತೆ? 100 ದಿವಸಗಳಲ್ಲಿ ಏನೇನೊ ಬಾಕಿ ಬರಬೇಕಾಗಿತ್ತು ಎಂದು ಅದನ್ನು ಶ್ವೇತ ಪತ್ರದಲ್ಲಿ ಹೇಳಲಿಲ್ಲ. ಹಿಂದಿನ ಸರ್ಕಾರದ್ದು 500 ಕೋಟಿ ರೂ.ಗಳ ಬಾಕಿ ಇತ್ತು ಎಂದು ಹೇಳಿ ತೃಪ್ತಿಪಟ್ಟು ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರೋ ಹೊರತು, ಇವತ್ತಿನವರೆಗೂ ಬಾಕಿ ಏನು ಇತ್ತು. ಎಕ್ಸೈಜ ಇರಬಹುದು. ಕಮರ್ಷಿಯಲ್ ಟ್ಯಾಕ್ಸ್ ಇರಬಹುದು., ಅದನ್ನು ವಸೂಲು ಮಾಡಿ ಅಂಕಿ ಅಂಶಗಳನ್ನು ಸರಿ ಮಾಡಿದ್ದರೆ ಅವರ ಕಾಲದಲ್ಲಿ ಬ್ಯಾಲೆನ್ಸ್ ನಿಲ್ ಅಗುತ್ತಾ ಇತ್ತು. ಅದರೆ ಈ ಒಂದು ಜವಾಬ್ದಾರಿ ಸ್ಥಾನದಲ್ಲಿ ಮುಖ್ಯ ಮಂತ್ರಿಗಳು ಯಾವ ಹಣವನ್ನು ಅಲೋಕೇಟ್ ಮಾಡಿದ್ದಾರೋ ಯೋಜನಾ ವೆಚ್ಚ ಎಂದು ಹೇಳಿ, ಅದನ್ನು ತಲುಪುವುದಕ್ಕೆ ಆಗುವುದಿಲ್ಲ ಎಂದು ಪತ್ರಿಕಾ ಹೇಳಿಕೆಯನ್ನು ಕೊಡುವುದಕ್ಕೆ ಬದಲಾಗಿ ಹಣಕಾಸಿನ ಪರಿಸ್ಥಿತಿಯನ್ನು ಸರಿ ಮಾಡುವುದ ಕ್ಕೋಸ್ಕರವಾಗಿ ಎಲ್ಲಿ ಸೋರಿ ಹೋಗುತ್ತದೊ ಅದನ್ನು ಸರಿಪಡಿಸಿ, ಸಂಪನ್ಮೂಲವನ್ನು ಕ್ರೋಢೀಕರಿಸಲು ನಿಮ್ಮಿಂದ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಿದೆ ಈ ರೀ ತಿಯ ಹೇಳಿಕೆಯನ್ನು ಕೊಟ್ಟಿರುವುದು ಬಹುಶಃ ಯಾರಿಗೂ ಗೌರವ ತರುವ ಸಂಗತಿಯಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛಿ ಪಡುತ್ತೇನೆ. ಹಣಕಾಸಿನ ಸಚಿವರು ಇಲ್ಲೇ ಇದ್ದಾರೆ. ಕಮರ್ಷಿಯಲ್ ಟ್ಯಾಕ್ಸ ಡಿಪಾರ್ಟಮೆಂಟಿನಲ್ಲಿ ಒಂದೇ ಕಡೆ 400 ಕೋಟಿ ರೂಪಯಿಗಳು ಬಾಕಿ ಬರಬೇಕಾಗಿತ್ತು. ಅದನ್ನು ವಸೂಲಿ ಮಾಡಿ ದ್ದೀರಾ? ಕಮರ್ಷಿಯಲ್ ಟ್ಯಾಕ್ಸ ಇರಬಹುದು, ಎಕ್ಸೈಜ್ ಇರಬಹುದು, ಎಷ್ಟು ಬರಬೇಕಾಗಿತ್ತು. ಮಾರ್ಚಿಯಲ್ಲಿ ಅಥಾವಾ ಫೆಬ್ರವರಿಯಲ್ಲಿ ಅಷ್ಟನ್ನು ವಸೂಲಿ ಮಾಡಿದ್ದೀರಾ? ಬಿಟ್ಟರೆ ಏಕೆ? ಮುಲಾಜು ಏನು? ಶ್ರೀಮಂತರಜೊತೆ ಏಕೆ ಈ ಹೊಂದಾಣಿಕೆ ? ಜನ ಅನುಮಾನ ಪಡುತ್ತಾರೆ. ಬಿಗಿ ಮಾಡಿ. ಸಾಮಾನ್ಯ ಬಡವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದೀರಿ. ದೊಡ್ಡ ದೊಡ್ಡ ಕೋಟ್ಯಾಧಿಪತಿಗಳ ಜೊತೆ ಹಣ ವಸೂಲು ಮಾಡುವುದಕ್ಕೆ ನಿಮ್ಮ ರೂಲ್ಸ್ ಪ್ರಕಾರ 24 ಗಂಟೆಯಲ್ಲಿ ವಸೂಲು ಮಾಡುವುದಕ್ಕೆ ಅವಕಾಶ ಇದೆ. ಅದೇ ರೀತಿ ಕಾನೂನಿನ ಚೌಕಟ್ಟಿನೊಳಗೆ

ಅಗ್ರಿಮೆಂಟ್ ಮಾಡಿಕೊಂಡಿರುತ್ತಾರೆ. ಮುಲಾಜು ಏತಕ್ಕೆ? ಬಹುಶಃ ಇದನ್ನು ಸರಿಪಡಿಸದೆ, ಈರೀತಿಯ ಹೇಳಿಕೆ ಕೊಟ್ಟಿರುವುದು ದುರಾದೃಷ್ಟವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಅಧ್ಯಕ್ಷರ ಇದೇ ಸಮಯದಲ್ಲಿ ಒಂದೆ ಮಾತನ್ನು ಹೇಳಬೇಕಾಗುತ್ತದೆ. ಹಿಂದಿನವರು ಯಾವ ರೀತಿ ಅಧಿಕಾರವನ್ನು ನಡೆಸಿದರು? ಶ್ರಿಮಾನ್ ವೀರೇಂದ್ರ ಪಾಟೀಲ್‌ರವರು ಮುಖ್ಯ ಮಂತ್ರಿಗಳಾಗಿದ್ದರು. ಅವರು ಸ್ವಲ್ಪ ಫೈನಾನ್ಸ್ ಡಿಸಿಪ್ಲೀನ್ ತರುವುದಕ್ಕೆ ಪ್ರಯತ್ನ ಮಾಡಿದರು. ಸದನದ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಆರೋಗ್ಯ ಸರಿ ಇಲ್ಲದಿರಬಹುದು. 1991ರಲ್ಲಿ ಅವರು ಮುಖ್ಯ ಮಂತ್ರಿಯಾಗಿ ಅಧಿಕಾರವನ್ನು ಬಿಡುವಾಗ ಶ್ರೀ ರಾಜಶೇಖರ ಮೂರ್ತಿಯವರು ಅರ್ಥ ಮಂತ್ರಿಗಳಾಗಿದ್ದರು. 141 ಕೋಟಿ ರೂಪಾಯಿಗಳ ಸರ್‌ಪ್ಲಸ್ ಹಣವನ್ನು ಬಿಟ್ಟು ಹೋದರು. ಈ ರೀತಿ ಆಗುವುದಕ್ಕೆ ಹೇಗೆ ಸಾಧ್ಯ? ಅವರು ಕಾಲದಲ್ಲಿ ಯೋಜನಾ ವೆಚ್ಚ 1990 - 91 ರಲ್ಲಿ 1145 ಕೋಟಿ ರೂ. ಮಾತ್ರ ಎಷ್ಟು ಕಲೆಕ್ಷನ್ ಆಯಿತು. ಯೋಜನಾ ವೆಚ್ಚದ ಬಗ್ಗೆ ಅವರ ಸಾಧನೆ ಏನು? 1326 ಕೋಟಿ. 1145 ಕೋಟಿ ಯೋಜನಾ ವೆಚ್ಚ ಇದ್ದರೆ ಸಾಧನೆ 1326 ಕೋಟಿ. 1991 - 92ರಲ್ಲಿ ಯೋಜನಾ ವೆಚ್ಚ ನಾವು ತೆಗೆದಿಟ್ಟದ್ದು 1510 ಕೋಟಿ ಅಲಾಟ್ ಮಾಡಿದ್ದುದು ಖರ್ಚು ಮಾಡಿದುದ್ದು 1775 ಕೋಟಿ. ಅಂದರೆ ಆಗ ಒಬ್ಬ ಹಿಂದಿನ ಮುಖ್ಯ ಮಂತ್ರಿ, ಒಬ್ಬ ಹಣಕಾಸಿನ ಮಂತ್ರಿ ಬಿಗಿ ನಿಲುವು ತೆಗೆದುಕೊಂಡು ಯಾವುದೇ ಮುಲಾಜಿಗೆ ಒಳಗಾಗದೆ ಈ ಸಾಧನೆಯನ್ನು ಮಾಡಿದರು. ಈ ರಾಜ್ಯದಲ್ಲಿ ಸಂಪನ್ಮೂಲಕ್ಕೆ ಯಾವುದೇ ಕೊರತೆ ಇಲ್ಲ. ಬೇರೆ ಯಾವುದೇ ರಾಜ್ಯಗಳಲ್ಲಿ ಅಷ್ಟು ಇಲ್ಲ. ಆದರೆ ಆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಯಾವುದೇ ಮುಲಾಜಿಗೆ ಸಿಕ್ಕಿಕೊಳ್ಳದೇ ಹಿಂಬಾಗಿಲಿನಲ್ಲಿ ಸೋರಿಹೋಗುವುದನ್ನು ನಿಲ್ಲಿಸಿದರು. ಇವತ್ತು ಅದನ್ನು ಪ್ರಯತ್ನದಲ್ಲಿ ಕೊರತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಎರಡೂ ವರ್ಷಗಳ ನಮ್ಮ ಯೋಜನಾ ವೆಚ್ಚದ ಗುರಿ ಏನಿದೆ? 1990 - 91 ಮತ್ತು 1991 - 92 ರಲ್ಲಿ ಏನಿತ್ತು ಎನುವುದು ಆಮೇಲೆ ಆ ಮಾತು. ಯಾವರೀತಿ ಇದೆಯೆಂದು ಹೇಳುವುದಕ್ಕೆ ಒಂದು ರೀತಿ ಅದು ಆದಮೇಲೆ ನಮಗೆ ಗ್ರಹಣ ಹಿಡಿಯಿತು. ವೀರೇಂದ್ರ ಪಾಟೀಲರ ಆರೋಗ್ಯ ಸರಿಯಿಲ್ಲವೆಂದು ಹೇಳಿ ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ ಮೇಲೆ ಏನಾಯಿತು 1992-1993ರಲ್ಲಿ ಯೋಜನಾ ವೆಚ್ಚವನ್ನು 8158 ಕೋಟಿ ರೂಪಾಯಿ ತೆಗೆದು ಇಟ್ಟಿದ್ದಾರೆ. ಅದರಲ್ಲಿ ಸಾಧನೆ ಎಷ್ಟು 2150 ಕೋಟಿ. 1993-94ನೇ ವೆಚ್ಚವನ್ನು ಸಾಲಿನಲ್ಲಿ 3385 ಕೋಟಿ ರೂಪಾಯಿ ನಲ್ಲಿ ಅದು ಯಾವುದೇ ಕಾರಣಕ್ಕೆ ಅವರೇ ಹೇಳುವ ಪ್ರಕಾರ 2800 ಕೋಟಿ ದಾಟುವುದಿಲ್ಲ ಅಂದರೆ ಸುಮಾರು 800ಕೋಟಿ ಕಡಿಮೆಯಾಗುತ್ತದೆ. ಹಾಗಾಗಿ ಅಭಿವೃದ್ಧಿ ಕಾರ್ಯ ಹೇಗಾಗುತ್ತದೆ? ಮಾನ್ಯ ಸಿದ್ದರಾಮಯ್ಯ ನವರನ್ನು ಮರೆತುಬಿಟ್ಟರೆ ತಪ್ಪಾಗುತ್ತದೆ. ಅವರು ಸತ್ಯಸಂಗತಿಯನ್ನು ಹೇಳಿದ್ದಾರೆ. ಮಂತ್ರಿಗಳಾಗಿ ಅವರು ಮೈಸೂರಿನಲ್ಲಿ ದಿನಾಂಕ 7-1-95ರಲ್ಲಿ ಹಣಕಾಸಿನ ಸಚಿವರಾಗಿ ಜವಾಬ್ದಾರಿ ಸ್ಥಾನದಿಂದ ಈ ಮಾತನ್ನು ಹೇಳಿದ್ದಾರೆ. ರಾಜ್ಯದ ಒಟ್ಟು ವೆಚ್ಚದಲ್ಲಿ ಶೇಕಡ 47 ರಷ್ಟು ಹಣ ಯೋಜನೇತರ ಬಾಬುಗಳಿಗೆ ಖರ್ಚಾಗುತ್ತದೆ. ಉಳಿದ ಹಣ ಯೋಜನೆಯ ಅಭಿವೃದ್ಧಿ ಕೆಲಸಕಾರ್ಯಗಳಿಗೆ ವಿನಿಯೋಗಿಸುವುದಕ್ಕೆ ಇದರಲ್ಲಿ ಅರ್ಧದಷ್ಟು ಉದ್ದೇಶಿ ಫಲಾನುಭವಿಗಳಿಗೆ ಮುಟ್ಟಿದರೆ ಪುಣ್ಯ., ಎಷ್ಟೋ ಹಣ ಮಧ್ಯವರ್ತಿಗಳಿಂದಾಗಿ ಸೋರಿ ಹೋಗುತ್ತಿದೆ., ಇದಕ್ಕೆಲ್ಲ ತಡೆಹಾಕಿದ್ದರೆ

ಮಾತ್ರ ಅಭಿವೃದ್ಧಿ ಕಾರ್ಯಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವೆಂದು ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು ಸಾಧ್ಯವೆಂದು ಹೇಳಿದ್ದಾರೆ. ಇನ್ನು ಮುಂದೆ ಹೇಳುತ್ತಾರೆ, ರಾಜ್ಯದ ನೀರಾವರಿ ಕಾರ್ಯಕ್ರಮಗಳ ಪ್ರಗತಿಯ ಬಗ್ಗೆ ಮಾತಾನಾಡಿದೆ ಅವರೆ 1 ಸಾವಿರ ರೂಪಾಯಿ ಹಣವನ್ನು ಮೀಸಲಿಟ್ಟರೂ. 200 ಕೋಟಿ ರೂಪಾಯಿ ಕೂಡ ಉದ್ದೇಶಿತ ಕಾಮಗಾರಿಗಳಿಗೆ ವೆಚ್ಚವಾಗುವುದಿಲ್ಲವೆನ್ನುವ ಸ್ಪಷ್ಟ ಸ್ಥಿತಿಯನ್ನು ಮುಂದಿಟ್ಟರು. ಕೃಷ್ಣಾ ಕಣವೆ ಯೋಜನೆಗಳಿಗೆ ಮುಂದಿನ ಆರು ವರ್ಷಗಳಲ್ಲಿ 7500 ಕೋಟಿ ರೂಪಾಯಾ ಅಗತ್ಯವಾಗಿದೆ. ಕಾವೇರಿ ಯೋಜನೆಗಳಿಗೆ 1300 ಕೋಟಿ ರೂಪಾಯಿಗಳಾಗುತ್ತದೆ. 2000ದ ಇಸವಿಯ ಹೊತ್ತಿಗೆ ಎರಡೂ ನದಿಗಳ ಪೂರ್ಣ ಫಲವನ್ನು ರಾಜ್ಯ ಬಳಸಿಕೊಳ್ಳಬೇಕಾದರೆ ಹಣ ಒದಗಿಸುವುದು ಅಗತ್ಯವಿದೆಯೆಂದು ಹೇಳಿದ್ದಾರೆ. ಹಣವನ್ನು ಎಲ್ಲಿ ಒದಗಿಸಿದ್ದೀರಿ? ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಈ ಮಾತನ್ನು ಹೇಳಿದ್ದಾರೆ. ಹಣ ಪೋಲಾಗುತ್ತಿದೆ ಲೂಟಿಯಾಗುತ್ತಿದೆಯೆಂದು ಹೇಳಿದ್ದೀರಿ. ಜನ ನಿಮ್ಮನ್ನು ಏಕೆ ಅಧಿಕಾರಕ್ಕೆ ತಂದರು? ಅದು ಆಗುತ್ತಿದೆಯೆ ? ಸರಿಪಡಿಸುತ್ತಾರೆಂದು ತಂದರು ನೀವು ಅಧಿಕಾರಕ್ಕೆ ಬಂದು 100 ದಿವಸಗಳಾಯಿತು. ನೀವು ಅಧಿಕಾರಕ್ಕೆ ಬಂದಮೇಲೆ ಹೇಳುವುದೇನು? ಕಾರ್ಯಕ್ಕೆ ನಾವು ಈಗ ಲೂಟಿಯಾಗುತ್ತಿದ್ದ ಹಣವನ್ನು ತಪ್ಪಿಸಿದ್ದೇವೆ ಹಿಂದಿನ ಕಾಲದಲ್ಲಿ ನೂರಕ್ಕೆ 25 ರೂಪಾಯಿ ಅಭಿವೃದ್ಧಿ ಕಾರ್ಯಕ್ಕೆ ಖರ್ಚಾಗುತ್ತಿರಲಿಲ್ಲ, ನಾವು ಅಧಿಕಾರಕ್ಕೆ ಬಂದಮೇಲೆ ಅದನ್ನು 60ರೂಪಾಯಿ ಎರಿಸಿದ್ದೇವೆ. ಅದರಲ್ಲಿ 40 ರೂಪಾಯಿ ಸೋರಿ ಹೋಗುತ್ತಿರಬಹುದು 60 ರೊಪಾಯಿ ಪ್ರಗತಿಯ ಕಡೆ ಆಯಿತು ಎಂದು ವಿಶ್ವಾಸವನ್ನು ಮೂಡಿಸುವುದು ನಿಮ್ಮಲ್ಲಿ ಇಲ್ಲ. ಏತಕ್ಕೆ ಜನ ನಿಮಗೆ ಅಧಿಕಾರ ಕೊಟ್ಟಿದುದ್ದು? ಈ ರೀತಿ ಒಬ್ಬ ಹಣಕಾಸಿನ ಸಚಿವರು ರಾಜ್ಯದ ಮುಖ್ಯ ಮಂತ್ರಿಗಳು ಹೇಳುವಂತಹ ಮಾತು ಕೇಳಿದಾಗ, ಈ ರಾಜ್ಯದ ಜನ ದಿಗ್ಭ್ರಮೆಗೆ ಒಳಗಾಗುತ್ತಾರೆ. ನಾವು ಇಲ್ಲಿ ಏಕೆ ಬಂದಿದ್ದೇವೆ ? ನಾಲ್ಕು ಮುಕ್ಕಾಲು ಕೋಟಿ ಜನರ ಹಿತ ಕಾಯುವುದಕ್ಕೆ. ದುಡ್ಡು ಯಾರಪ್ಪನ ದುಡ್ಡು? ಸಾಮಾನ್ಯ ಜನ ಕೊಟ್ಟಿರತಕ್ಕ ತೆರಿಗೆ ಹಣ ಅದನ್ನು ವೆಚ್ಚ ಮಾಡುವುದಕ್ಕೆ ಬಂದಿರತಕ್ಕ ನಾವು ನೂರಕ್ಕೆ 75ಭಾಗ ಸೋರಿಹೋಗುತ್ತಿದೆ ಅಂದರೆ ಅದರ ಕಡೆಗೆ ಲಕ್ಷ್ಯವಿಲ್ಲವೇನು? ಸಾವಿರ ಕೋಟಿ ರೂಪಾಯಿಯಲ್ಲಿ 250 ಕೋಟಿ ರೂಪಾಯಿ ತಲಪುವುದಿಲ್ಲವೆಂದು ನೀವು ಹೇಳಬೇಕಾದರೆ ಕಾಯಿದೆಗೆ ಅಂಕುಶದಿಂದ ಚುಚ್ಚಬೇಕಾಗುತ್ತದೆ. ಇಲ್ಲದಿದ್ದರೆ ಯಡಿಯೂರಪ್ಪನವರೇ ನಮ್ಮಿಂದ ಸರಿಪಡಿಸುವುದಕ್ಕಾಗುವುದಿಲ್ಲ ನಾವು ಜಾಗ ಖಾಲಿ ಮಾಡುತ್ತೇವೆಂದು ಹೇಳಬೇಕಾಗುತ್ತದೆ. ಎರಡರಲ್ಲಿ ಒಂದನ್ನು ಮಾಡಬೇಕು. ಯೋಚನೆ ಮಾಡಿ ಇದು ನಮ್ಮಿಂದ ಆಗುವುದಿಲ್ಲ ಎಲ್ಲಾ ದಿಕ್ಕೆಟ್ಟು ಹೋಗಿದೆ, ನನ್ನ ಕೈಯಲ್ಲಿ ಆಗುವುದಿಲ್ಲಾ ಇದಕ್ಕೆ ಏನಾದರೂ ಪರಿಹಾರ ಹುಡುಕೋಣವೆಂದು ಹೇಳಿ. ಸನ್ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಯ ಸಂದರ್ಭದಲ್ಲಿ ಏನು ಹೇಳಿದರು? ನಾನು ಯಾವುದೇ ಕಾರಣಕ್ಕೆ ತೆರಿಗೆ ಹಾಕುವುದಿಲ್ಲ, ಶ್ರೀಮಂತರ ಜೇಬಿಗೆ ಕೈಹಾಕಿಯಾದರೂ ಗ್ರಾಮೀಣ ಜನರನ್ನು ಉಳಿಸುತ್ತೇನೆಂದರೆ. ಈಗ ಅದಕ್ಕೆ ತದ್ವಿರುದ್ಧವಾಗಿದೆ. ಗ್ರಾಮೀಣ ಜನರ ಜೇಬಿಗೆ ಕೃಹಾಕಿ ಶ್ರೀಮಂತರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಬಜೆಟ್‌ನಲ್ಲಿ ಏನಿದೆ? ಕರ್ನಾಟಕ ತೆರಿಗೆಯ ಮಟ್ಟ ಹಣಕಾಸು ಸಚಿವರು ಹೇಳುವ ಪ್ರಕಾರ ಸಾಕಷ್ಟು ಇಡೀ ದೇಶದಲ್ಲಿ ಎಲ್ಲಾ

ಬಾಬುಗಳಲ್ಲಿ ದೊಡ್ಡ ಟ್ಯಾಕ್ಸನ್ನು ನಾವು ಕೊಡುತ್ತಿದ್ದೇವೆ. ನಮ್ಮ ರಾಜ್ಯದ ವಹಿವಾಟು ಕಡಿಮೆ ಬೀಳಿದ ಹ್ವಾಗೆ ಪಕ್ಕದ ರಾಜ್ಯಗಳಿಗೆ ಅದು ಹೋಗಬಾರದು, ಅದಕ್ಕೆ ಏನಾದರೂ ಪ್ರಯತ್ನ ನಡೆದಿದೆಯೆ? ಸೋರಿಕೆಯ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ತೆರಿಗೆಯನ್ನು ಸರಳೀಕರಣಗೊಳಿಸುವುದಾಗಿ ಹೇಳಿದ್ದಾರೆ. ಬಜೆಟ್ ಮಂಡನೆ ಮಾಡುವುದಕ್ಕೆ ಮುಂಚೆ ಏನು ಹೇಳಿದ್ದಾರೆಂದರೆ ತೆರಿಗೆ ಪಕ್ಕದ ರಾಜ್ಯಗಳಿಗಿಂತ ಕಡಿಮೆಯಿದ್ದರೆ ಯಾವುದೇ ಸರಕುಗಳು ಸ್ಥಳಾಂತರವಾಗುವುದಿಲ್ಲ. ನಮ್ಮಲ್ಲಿ ತೆರಿಗೆ ಜಾಸ್ತಿಯಿದ್ದರೆ ಹೊರಗೆ ಹೋಗಲಿಕ್ಕೆ ಅವಕಾಶ ವಾಗುತ್ತದೆ. ಅಪ್ರಮಾಣಿಕತೆಯನ್ನು ತಡೆದರೆ ಸೋರಿಹೋಗುವುದು ಕಡಿಮೆಯಾಗುತ್ತದೆ. ನಮ್ಮಲ್ಲಿ ತೆರಿಗೆ ಜಾಸ್ತಿಯಿದೆ. ಅದರ ಬಗ್ಗೆ ಏನು ಮಾಡಿದ್ದೀರಿ? ಮಾರಾಟ ತೆರಿಗೆಯಲ್ಲಿ ಬಹುಶಃ ನಿಮ್ಮ ಅಂಕಿಅಂಶಗಳ ಪ್ರಕಾರ ಈಗಾಗಲೇ ಅದು ಜಾಸ್ತಿಯಿದ್ದರೂ 90 ಕೋಟಿ ರೂಪಾಯಿಗೆ ಏರಿಸಿದ್ದೀರಿ. ಮರಾಟತೆರಿಗೆಯಲ್ಲಿ 82 ಕೋಟಿ ರೂಪಾಯಿ ಏರಿಸಿದ್ದೀರಿ. ಸ್ಟಾಂಪ್ ಡ್ಯೂಟಿಯಲ್ಲಿ 45 ಕೋಟಿ ರೂಪಾಯಿಗಳಿಗೂ ಮೇಲೆ ಏರಿಸಿದ್ದೀರಿ. ಅದರ ಪರಿಣಾಮ ಮಾರಾಟತೆರಿಗೆ ಹೇಗಿದೆ, ವಿರೇಂದ್ರಪಾಟೀಲರ ಕಾಲದಲ್ಲಿ ಹೊರರಾಜ್ಯಗಳಿಗೆ ಹೋಗಿ ಕದ್ದು ಮಾರಾಟ ಮಾಡು ತ್ತಾರೆಂದು ಯಾವುದೇ ಕಾರಣಕ್ಕೆ ನಮ್ಮ ವಹಿವಾಟು ಬೇರೆ ಕಡೆಗೆ ಹೋಗಬಾರದೆಂದು ಒಂದೇ ಸಮ ಇಟ್ಟಿದ್ದರು. ಅವರ ಕಾಲದಲ್ಲಿ ಯಾವ ಯಾವುದು ಕಡಿಮೆ ಇತ್ತು 1994-95ರಲ್ಲಿ 13 ಪರ್ಸೆಂಟ್ ಇದ್ದದನ್ನು ನೀವು 1995-96ನೇ ಸಾಲಿನಲ್ಲಿ 15 ಪರ್ಸೆಂಟ್‌ಗೆ ಏರಿಸಿದ್ದೀರಿ. ಪಕ್ಕದ ತಮಿಳುನಾಡಿನಲ್ಲಿ 11 ಪರ್ಸೆಂಟ್ ಇದೆ. ಆಂಧ್ರಪ್ರದೇಶದಲ್ಲಿ 9 ಪರ್ಸೆಂಟ್ ಇದೆ. ಕೇರಳದಲ್ಲಿ 12.5 ಪರ್ಸೆಂಟ್ ಇದೆ. ಟಿಂಬರ್ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿದ್ದಾರೆ. ಅದು 1994-95ನೇ ಸಾಲಿನಲ್ಲಿ 13 ಪರ್ಸೆಂಟ್ ಇತ್ತು ನೀವು ಅದನ್ನು 15 ಪರ್ಸೆಂಟ್ ಏರಿಸಿದ್ದೀರಿ. ತಮಿಳು ನಾಡಿನಲ್ಲಿ 8 ಪರ್ಸೆಂಟ್ ಇದೆ, ಆಂಧ್ರಪ್ರದೇಶದಲ್ಲಿ 10 ಪರ್ಸೆಂಟ್ ಇದೆ. ಕೇರಳದಲ್ಲಿ 8 ಪರ್ಸೆಂಟ್ ಇದೆ. ಚಮರ್ದ ವಸ್ತುಗಳ ಮೇಲೆ ಕರ್ನಾಟಕದಲ್ಲಿ ಮೊದಲು 13 ಪರ್ಸೆಂಟ್ ಇತ್ತು, ಈಗ ಅದನ್ನು 12 ಪರ್ಸೆಂಟ್‌ಗೆ ಇಳಿಸಿದ್ದಾರೆ. ತಮಿಳುನಾಡಿನಲ್ಲಿ ಅದು 8 ಪರ್ಸೆಂಟ್ ಇದೆ. ಆಂಧ್ರಪ್ರದೇಶದಲ್ಲಿ 7 ಪರ್ಸೆಂಟ್ ಇದೆ. ಕೇರಳದಲ್ಲಿ 10 ಪರ್ಸೆಂಟ್ ಇದೆ. ಎಲೆಕ್ಟ್ರಿಕ್ ವಸ್ತುಗಳ ಮೇಲೆ ಕಳೆದ ವರ್ಷ 10 ಪರ್ಸೆಂಟ್ ಇದ್ದದ್ದು ಈ ವರ್ಷ 12 ಪರ್ಸೆಂಟ್‌ಗೆ ಏರಿಸಿದ್ದಾರೆ. ಅದು ತಮಿಳುನಾಡಿನಲ್ಲಿ ಅದು 10 ಪರ್ಸೆಂಟ್ ಇದ್ದು ಕೇರಳದಲ್ಲಿ 5 ಪರ್ಸೆಂಟ್ ಇದೆ, ಇದರ ಪರಿಣಾಮ ಏನಾಗುತ್ತದೆ? ವಹಿವಾಟು ಏನಾಗುತ್ತದೆ? ಸರ್ಕಾರಕ್ಕೆ ಗೊತ್ತಿದೆ. ಸರ್ಕಾರದ ಬೊಕ್ಕಸಕ್ಕೆ ಹೊಡೆತ ಬೀಳುತ್ತದೆ. ದಕ್ಷಿಣದ ಬೇರೆ ರಾಜ್ಯಗಳಲ್ಲಿ ಏನು ತೆರಿಗೆ ಇದೆ ಆ ವಿವರವನ್ನು ಪಡೆದು ತೆರಿಗೆ ಹಾಕಲಾಗುವು ದೆಂದು ಹೇಳಿದ್ದೀರಿ. ಅದರ ಬಗ್ಗೆ ಪುಟ 111ರಲ್ಲಿ ತಾವು ತೆರಿಗೆ ಹಣವನ್ನು ಸಮಾನ ಗೊಳಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ಮೇಲ್ಕಂಡ ವಸ್ತುಗಳ ಮೇಲೆ ತೆರಿಗೆ ಎಷ್ಟು ಜಾಸ್ತಿ ಇದೆ ಎನ್ನುವ ಒಂದು ದೊಡ್ಡ ಲಿಸ್ಟ್ ಇದೆ. ನಾನು ಕೇವಲ ಸಿಂಪಲ್ ಆಗಿ ಹೇಳಿದ್ದೇನೆ. ಇದನ್ನೆಲ್ಲಾ ಸರಿಪಡಿಸಬೇಕು ಎನ್ನುವ ಮನಸ್ಸು ಇದ್ದರೆ ಟರ್ನ್‌ಓವರ್‌ನಲ್ಲಿ ನಮ್ಮ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ಬರಬೇಕು ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕು. ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟ ಆಶ್ವಾಸನೆ ಏನು? ನೀರಾವರಿ ಮತ್ತು ವಿದ್ಯುಚ್ಛಕ್ತಿ ಗ್ರಾಮೀಣ ವಲಯಕ್ಕೆ ನಿರುದ್ಯೋಗ ನಿವಾರಣೆ ಮತ್ತು ಮಹಿಳೆಯರ ಕಲ್ಯಾಣ, ಷಡ್ಯೂಲ್ಡ್‌ಕಾಸ್ಟ್, ಷಡ್ಯೂಲ್ಡ್‌ಟ್ರೈಬ್ಸ್

ಜನಾಂಗದವರ ಅಭಿವೃದ್ಧಿಗೆ ಇವರು ದೊಡ್ಡ ಒಂದು ಉದಾರವಾದ ಹೇಳಿಕೆ ಮಾಡುತ್ತಾರೆ. ಜನ ನಿಮಗೆ ಓಟು ಕೊಟ್ಟಿದ್ದಾರೆ, ಏಕೆ ಕೊಟ್ಟಿದ್ದಾರ? ನೀವು ಮಾಡುತ್ತಿರುವ ಕೆಲಸವೇ ಬೇರೆ. ನೀರಾವರಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ? 882 ಕೋಟಿ ರೂಪಾಯಿಗಳಲ್ಲಿ ಕೆರೆ ಹೊಳೆತ್ತುವ ಕೆಲಸದಿಂದ ಹಿಡಿದು ಎಲ್ಲಾ ಸೇರಿಸಿ ಒಟ್ಟು 882ಕೋಟಿ ವಿದ್ಯುಚ್ಛಕ್ತಿಯದು ಬೇರೆ. ಕಾವೇರಿ ಮತ್ತು ಕೃಷ್ಣಾ ಬೇಸಿನ್ ಯೋಜನೆಗಳು ಏನಾಗಿವೆ ಅವುಗಳಿಗೆಲ್ಲ ಸೇರಿ 882 ಕೋಟಿ. ಗ್ರಾಮೀಣವಲಯಕ್ಕೆ ಹಿಂದಿನ ಸರ್ಕಾರ 220 ಕೋಟಿ ಇಟ್ಟಿದ್ದರೆ 211 ಕೋಟಿ ನೀವು ತೆಗೆದು ಇಟ್ಟಿದ್ದೀರಿ. ನಾನು ನಿಮಗೆ ಹೇಳುತ್ತೇನೆ, ಸಾಲಸೋಲ ಮಾಡಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ಗೆ ಹಣ ತೊಡಗಿಸುತ್ತೀರಿ. ನೀವು ಕೃಷ್ಣಾಬೇಸಿನ್ ಯೋಜನೆಗಳನ್ನು 2000ದ ಇಸವಿಯ ಹೊತ್ತಿಗೆ 7000 ಕೋಟಿ ರೂಪಾಯಿ ಖರ್ಚುಮಾಡುವ ದಿಟ್ಟತನ ತೋರಿಸುತ್ತೀರೋ? ಹಾಗೆ ಮಾಡಿದರೆ ನೀವು ಇನ್ನು 5 ವರ್ಷಗಳ ಕಾಲ ಇರುತ್ತೀರಿ. ನೀವು ಅಧಿಕಾರಕ್ಕಾಗಿ ಕಚ್ಚಾಟ ಬಡಿದಾಟ ಮಾಡಿಕೊಂಡು ಅಧಿಕಾರದಲ್ಲಿ ಇರಿಸು ಎಂದು ದೇವರ ಪೂಜೆ ಮಾಡಿಕೊಂಡು ಜನರ ಕಷ್ಟಗಳಿಗೆ ಪರಿಹಾರ ಹುಡುಕುತ್ತೇವೆಂದರೆ ಏನೂ ಆಗುವುದಿಲ್ಲ. ಇವತ್ತು ಮುಂದಾಲೋಚನೆಯಿಂದ ವಿದ್ಯುಚ್ಛಕ್ತಿ ಅಭಿವೃದ್ಧಿಯ ಕಾರ್ಯಕ್ರಮಗಳ ಬಗ್ಗೆ ಅಗತ್ಯವಾದ ಹಣವನ್ನು ಎಲ್ಲಿಯವರೆಗೆ ತೊಡಗಿಸುವುದಿಲ್ಲವೋ ಅಲ್ಲಿಯವರೆಗೆ ಗ್ರಾಮೀಣ ಜನರ ಅಭಿವೃದ್ಧಿಯಾಗುವುದಿಲ್ಲವೆನ್ನುವುದು ನಿಶ್ಚಿತವಾದದ್ದು.

02-00 ಪಿ.ಎಂ

ಗ್ರಾಮೀಣ ಅಭಿವೃದ್ಧಿಗೆ ನೀವು 201 ಕೋಟಿ ರೂಪಾಯಿ ಇಟ್ಟರೆ ಸಾಕೆ? ಮಾನ್ಯ ಪ್ರಕಾಶ್ ಅವರು ಮಾತನಾಡುತ್ತಾ ಕುಡಿಯುವ ನೀರು, ದೀಪ ರಸ್ತೆ, ಎಲ್ಲಾ ಆಗುತ್ತದೆ ಎಲ್ಲ ಅಭಿವೃದ್ಧಿ ಆಗುತ್ತದೆ ಎಂದು ಹೇಳಿದರು. ನನಗೆ ಈ ಮಾತು ಕೇಳಿ ಆಶ್ಚರ್ಯವಾಯಿತು. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಮಾತು ಹೇಳಬೇಕಾಗುತ್ತದೆ. ಅವರು ಮುಖ್ಯ ಮಂತ್ರಿಗಳಾದ ಮೇಲೆ ಹೆಣ್ಣುಮಕ್ಕಳ ಶಾಲೆಗೆ ಹೋಗಿದ್ದರಂತೆ. ಅಲ್ಲಿನ ಪರಿಸ್ಥಿತಿ ನೋಡಿ ಆಶ್ಚರ್ಯವಾಯಿತಂತೆ. ಅಲ್ಲಿ ಲ್ಯಾವೆಟ್ರಿ ಇಲ್ಲ, ಶೌಚಾಲಯ ಇಲ್ಲ. ಇದಕ್ಕೆ ಮುಂದೆ ಅವರು ಹೆಣ್ಣುಮಕ್ಕಳ ಶಾಲೆಗೆ ಹೋಗಿರಲಿಲ್ಲ. ಅಲ್ಲಿಗೆ ಹೋದ ಮೇಲೆ ಅವರಿಗೆ ಅಲ್ಲಿ ಶೌಚಾಲಯ ಇಲ್ಲವೆಂದು ಗೊತ್ತಾಯಿತು. ಆಗ ಅವರು ಹೇಳಿದರು, ಶೌಚಾಲಯ ಕಟ್ಟಿಸುತ್ತೇವೆ ಎಂದು. ಶೌಚಾಲಯ ಕಟ್ಟಿಸಿದರೆ ನೀರು ಬೇಕಲ್ಲ. ಬೋರ್‌ವೆಲ್ ಹಾಕಿಸುತ್ತೀರಾ? ಅದಕ್ಕೆ ಬಜೆಟ್‌ನಲ್ಲಿ ದುಡ್ಡು ತೆಗೆದಿಟ್ಟಿದ್ದೀರಾ? ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡು ಆ ಕೆಲಸವನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಉತ್ತರ ಕೊಡುತ್ತಾರೆ. ನಾವು ಶಾಸನ ಸಭೆಯಲ್ಲಿ ನಿರೀಕ್ಷೆ ಮಾಡುತ್ತೇವೆ, ನೀವು ಏನು ಮಾಡುತ್ತೀರೋ ಮಾಡಿ. ಆಗಲೇ ಹೇಳಿದಂತೆ ಒಟ್ಟು 10859 ಕೋಟಿರೂಪಾಯಿಗಳನ್ನು ಮುಂಗಡ ಪತ್ರದಲ್ಲಿ ಇಟ್ಟು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ಗೆ 3758.28 ಕೋಟಿ ಎಂದು ಹೇಳಿದ್ದೀರಿ. ನಾಳೆ ದಿವಸ ನಿಶ್ಚಿತವಾಗಿ ಪುನಃ ಬಜೆಟ್ ಅಧಿವೇಶನಕ್ಕೆ ಕುಳಿತುಕೊಳ್ಳುತ್ತೇವೆ ನೀವು ಎದೆತಟ್ಟಿ 3758 ಕೋಟಿ ರೂಪಾಯಿ ಏನಿದೆ ಅದನ್ನು ನಿಮ್ಮ ಕಾಲದಲ್ಲಿ ದಾಟಿ ಮುಂದೆ ಹೋಗುತ್ತೇವೆಂದು ಧೈರ್ಯವಾಗಿ ಹೇಳುತ್ತೀರೋ? ಖಂಡಿತ ನಿಮ್ಮಿಂದ ಸಾಧ್ಯವಿಲ್ಲ. ಯಾವುದೇ ಕಾರಣಕ್ಕೆ ಹಿಂದಿನ ಸರ್ಕಾರಕ್ಕಿಂತ ಹತ್ತು ಹೆಜ್ಜೆ ಮುಂದೆ ಹೋಗುವ

ದಿಲ್ಲ. ಇಂಟರ್ ನ್ಯಾಷನಲ್ ಏರ್‌ಪೋರ್ಟ್ ವಿದೇಶಿ ಒಪ್ಪಂದ ಈ ಗಡಿಬಿಡಿಯಲ್ಲಿ ಇರುವುದರಿಂದ ನಿಶ್ಚಿತವಾಗಿ 2800 ಕೋಟಿ ರೂಪಾಯಿಗಳನ್ನು ನೀವು ದಾಟುವುದಿಲ್ಲ. ಅದಕ್ಕೋಸ್ಕರ ಜನರಿಗೆ ಏನೋ ಒಂದು ಆಸೆ ತೋರಿಸಿ ಇಡೀ ದೇಶದಲ್ಲಿ ನಮ್ಮ ರಾಜ್ಯ ಪ್ಲಾನ್ ಎಕ್ಸ್‌ಪೆಂಡಿಚರ್ ಮತ್ತೊಂದರಲ್ಲಿ ಯಾವುದೇ ಸಾಧನೆ ಮಾಡದೆ ಇರುವುದಿಕ್ಕಿಂತ ಈಗಲಾದರೂ ತಾವು ಮನಸ್ಸು ಮಾಡಿದರೆ, ಪ್ರಾಮಾಣಿಕವಾಗಿ ಕಮರ್ಷಿಯಲ್ ಟ್ಯಾಕ್ಸ್ ಒಂದರಲ್ಲೇ ಒಂದು ಸಾವಿರ ಕೋಟಿ ರೂಪಾಯಿ ಜಾಸ್ತಿ ತರುವುದಕ್ಕೆ ಸಾಧ್ಯ ಇದೆ. ನೀವು ಬೇರೆಯವರ ಇಂಟರ್‌ಫಿಯರೆನ್ಸ್ ಇಲ್ಲದೆ ಅಧಿಕಾರಿಗಳನ್ನು ಕರೆದು ಮಾತನಾಡಿ ಅವರಿಗೆ ಯಾವುದೇ ಅಡ್ಡಿ ಆತಂಕ ಇಲ್ಲವೆಂದು ಮನವರಿಕೆ ಮಾಡಿ ಪ್ರತಿ ತಿಂಗಳು ಪ್ರೋಗ್ರೆಸ್ ಕೊಡಬೇಕೆಂದು ನಿರ್ಣಯ ಮಾಡಿದರೆ ನನಗನ್ನಿಸುತ್ತದೆ ನಿಮ್ಮ ಎಕ್ಸೈಜ್‌ನಲ್ಲಿ 500 ಕೋಟಿ ರೂಪಾಯಿ ಜಾಸ್ತಿ ತೆಗೆದುಕೊಳ್ಳಬಹುದು. ಕಮರ್ಷಿಯಲ್ ಟ್ಯಾಕ್ಸ್ ಜಾಸ್ತಿ ತೆಗೆದುಕೊಳ್ಳಬಹುದು. ನೀರಾವರಿಗೆ ವಿದ್ಯುತ್ ಉತ್ಪಾದನೆಗೆ ಗ್ರಾಮೀಣ ಜನರ ಅಭಿವೃದ್ಧಿಗೆ ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಆ ದಿಕ್ಕಿನಲ್ಲಿ ವಿಶೇಷವಾಗಿ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಶ್ವೇತ ಪತ್ರವನ್ನು ಹೊರಡಿಸಿ ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾತನಾಡುತ್ತಾ, ಹಣಕಾಸಿನ ಹೊಣೆಗಾರಿಕೆ ಬಳುವಳಿಯಾಗಿ ಬಂದಿದೆ ಎಂಬ ಮಾತನ್ನು ಹೇಳಿದ್ದೀರಿ. ಅದಕ್ಕಾಗಿ ನಾನು ಹೇಳಿದುದ್ದು ಇವತ್ತು ಶ್ವೇತ ಪತ್ರದಲ್ಲಿ ಆ ತಾರೀಖಿಗೆ ಏನೇನು ಟ್ಯಾಕ್ಸ್, ಕಮರ್ಷಿಯಲ್ ಟ್ಯಾಕ್ಸ್ ವಸೂಲಾಗಬೇಕಾಗಿತ್ತು ಆ ಅಂಕಿಅಂಶವನ್ನು ಕೊಡಲಿಲ್ಲ. ನನ್ನ ಹತ್ತಿರ ಅಂಕಿಅಂಶ ಇದೆ. ಅದನ್ನು ವಸೂಲ್ಮಾಡಿದ್ದರೆ ಯಾವುದೇ ಕಾರಣಕ್ಕೆ ಶ್ವೇತ ಪತ್ರ ಹೊರಡಿಸುವ ಕಾಲದಲ್ಲಿ 527 ಕೋಟಿ ರೂಪಾಯಿ ಬಾಕಿ ಇತ್ತು, ಹಂದರ ಆಯಿತು ಎಂದು ಹೇಳುವಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಇನ್ನೊಂದು ಆಶ್ಚರ್ಯ ಏನೆಂದರೆ ನೀವು ಮುಖ್ಯ ಮಂತ್ರಿ ಆದತಕ್ಷಣ ಹಣಕಾಸಿನ ಸಚಿವರು ರಾಜ್ಯದ ಹಣಕಾಸಿನ ಪರಿಸ್ಥಿತಿ ಏನಿದೆ ಅದರ ಬಗ್ಗೆ ವೈಟ್ ಪೇಪರ್ ಹೊರಡಿಸಬೇಕಾಗಿತ್ತು; ಆದರೆ ತಾವು ಆಗ ಹಣಕಾಸಿನ ಸಚಿವರು ವೈಯಕ್ತಿಕವಾಗಿ ಅದನ್ನು ಹೊರಡಿಸುವುದಕ್ಕೆ ಬರುವುದಿಲ್ಲವೆಂದು ಸರ್ಕಾರಿ ನೌಕರರಿಗೆ ಸಂಬಳ ಕೊಡುವ ಸ್ಥಿತಿಯಲ್ಲಿ ಇಲ್ಲವೆಂದು ಹೇಳಿದ್ದೀರಿ. ಇವತ್ತಿನ ದಿವಸ ಸರ್ಕಾರಿ ನೌಕರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲವೆಂದರೆ ನಿಮ್ಮ ಪರಿಸ್ಥಿತಿ ಹೊರದೇಶದವರಿಗೆ ಗೊತ್ತಾಗುವುದಿಲ್ಲವೆ? ಇವತ್ತು ಏತಕ್ಕೆ ಶ್ವೇತಪತ್ರ ಹೊರಡಿಸಿದಿರಿ? ಅದರ ಅವಶ್ಯಕತೆ ಏನಿತ್ತು? ಮುಂದೆ ಪೂರ್ಣ ಬಜೆಟ್ ಇಡುವಂತ ಕಾಲದಲ್ಲಿ ಅದರಲ್ಲಿ ಇರಬೇಕಾದ ಅಂಕಿ ಅಂಶ ಇಲ್ಲಿ ಇದರಲ್ಲಿ ಇಲ್ಲ. ಹಿಂದಿನ ಸರ್ಕಾರ ಇದ್ದಾಗ ಎಷ್ಟು ವಸೂಲಾಗಿತ್ತು? ಈಗ ನೀವು ಎಷ್ಟು ಹಣ ವಸೂಲ್ಮಾಡಿದ್ದೀರಿ, ಎಷ್ಟು ಖರ್ಚಾಗಿದೆ, ಎಷ್ಟು ಬಿಡುಗಡೆಯಾಗಿದೆ ಎಂಬುದನ್ನು ಏತಕ್ಕೆ ಶ್ವೇತ ಪತ್ರದಲ್ಲಿ ಹೇಳಲಿಲ್ಲ? ದಯವಿಟ್ಟು ನೀವು ಆ ವಿವರಗಳನ್ನೆಲ್ಲ ಕೊಟ್ಟಾಗ ಬಹುಶಃ ನೀವು ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಶ್ವೇತ ಪತ್ರದಲ್ಲಿ ಎಲ್ಲೆಲ್ಲಿ ಏನೇನು ಎಷ್ಟೆಷ್ಟು ಸಾಲ ತಂದಿದ್ದೀರಿ, ಎಷ್ಟೆಷ್ಟು ವಾಪಸ್ಸು ಕೊಟ್ಟಿದ್ದೀರಿ ಎಂಬುದನ್ನೆಲ್ಲ ಹೇಳಬೇಕಾಗಿತ್ತು. ಶ್ವೇತ ಪತ್ರ ಅಂದರೆ ಅದರಲ್ಲ ಎಲ್ಲವನ್ನು ಬಹಿರಂಗ ಮಾಡಬೇಕಾಗಿತ್ತು, ಸತ್ಯ ಸಂಗತಿಯನ್ನು ಮುಚ್ಚುಮರೆ ಇಲ್ಲದೆ ಹೇಳಬೇಕಾಗಿತ್ತು. ಮಾನ್ಯ ವೀರಪ್ಪ ಮೊಯಿಲಿ ಯವರು ಹೇಳಿದರು, ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿ ಇತ್ತು, ನಾನು ಬೇಕಾದರೆ ಶ್ವೇತ ಪತ್ರ ಹೊರಡಿಸುತ್ತೇವೆಂದು ನಿಮ್ಮ ಮಾತು-ನಂಬುತ್ತೇವೆ, ಏನು ಪರಿಸ್ಥಿತಿ ಬಂದಿದೆ ಎಂದರೆ 527

ಕೋಟಿ ರೂಪಾಯಿ ಏನು ಕೊರತೆ ಇತ್ತು ಎಂದು ಹೇಳಿದ್ದೀರಿ ಅದು ಸರಿಯಲ್ಲವೆಂದು ಶ್ವೇತ ಪತ್ರದಲ್ಲಿ ಹೇಳಿದ್ದೀರಿ. ಯಾರೋ ಮೆಚ್ಚುವುದಕ್ಕೆ ಶ್ವೇತ ಪತ್ರ ಬಿಡುಗಡೆ ಮಾಡಿದ್ದೀರಿ ಇದಕ್ಕೆ ಇನ್ನೊಂದು ಶ್ವೇತ ಪತ್ರ ಬಿಡುಗಡೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೀರಿ. ಹೀಗಾದರೆ ಇದರ ಪರ್ಪಸ್ ಸರ್ವೆ ಆಗುವುದಿಲ್ಲ. ಇದರ ಇಂಪಾರ್ಟೆನ್ಸ್ ಹೊರಟು ಹೋಗುತ್ತದೆ. ಮಾನ್ಯ ಅಧ್ಯಕ್ಷರೆ, ಈ ಎಕ್ಸೈಜ್ ಮತ್ತು ವಾಣಿಜ್ಯ ತೆರಿಗೆಯಿಂದ ಎಷ್ಟು ಬಾಕಿ ಬರಬೇಕಾಗಿತ್ತು, ಯಾವ ರೀತಿ ಅವರ ಮುಲಾಜಿನಲ್ಲಿ ಹಿಂದಿನಿಂದ ಉಳಿದುಕೊಂಡು ಬಂದಿದ್ದೀರಿ ಎಂಬುದನ್ನು ನೋಡಿದರೆ, 1992-93ರಲ್ಲಿ ನಮ್ಮ ಲೆಕ್ಕದ ಪ್ರಕಾರ 294 ಕೋಟಿ ರೂಪಾಯಿಗಳನ್ನು ವಾಣಿಜ್ಯ ತೆರಿಗೆಯಿಂದ ವಸೂಲ್ಮಾಡಲಿಲ್ಲ. 1993-94ನೇ ಸಾಲಿನಲ್ಲಿ 436 ಕೋಟಿ ರೂಪಾಯಿ ಬರಬೇಕಾದುದನ್ನು ವಸೂಲ್ಮಾಡಲಿಲ್ಲ. ಒಟ್ಟು 730 ಕೋಟಿ ರೂಪಾಯಿಗಳನ್ನು ಈ ಒಂದು ವಾಣಿಜ್ಯ ತೆರಿಗೆ ಇಲಾಖೆಯಿಂದ ಕಳೆದ ಎರಡು ವರ್ಷಗಳಲ್ಲಿ ವಸೂಲ್ಮಾಡಲಿಲ್ಲ. ಇನ್ನು 1994-95ರಲ್ಲಿ ನೀವು ವಾಣಿಜ್ಯ ತೆರಿಗೆ ಇಲಾಖೆಯಿಂದ ಎಷ್ಟು ಬಾಕಿ ಬರಬೇಕೆಂಬುದನ್ನು ಹೇಳಬೇಕು. ನಮ್ಮಲ್ಲಿ ಆ ಅಂಕಿಅಂಶ ಸಿಗುತ್ತಿಲ್ಲ. 1992-93ರಲ್ಲಿ 176 ಕೋಟಿ ರೂಪಾಯಿ ಬಾಕಿ ಬರಬೇಕು, 93-94ರಲ್ಲಿ 186 ಕೋಟಿ ರೂಪಾಯಿ ಬಾಕಿ ಬರಬೇಕು. ಒಟ್ಟು ಬಾಕಿ 362 ಕೋಟಿ ರೂಪಾಯಿ ಆಯಿತು. ತಾವು 1994-95ರಲ್ಲಿ ಎಕ್ಸೈಜ್‌ನಲ್ಲಿ ಎಷ್ಟು ಬಾಕಿ ಬರಬೇಕೆಂಬ ಅಂಕಿ ಅಂಶವನ್ನು ಕೊಡಬೇಕಾಗುತ್ತದೆ. ನನ್ನ ಪ್ರಕಾರ, ನನಗೆ ಸಿಕ್ಕಿದ ಅಂಕಿಅಂಶಗಳ ಪ್ರಕಾರ ವಾಣಿಜ್ಯ ತೆರಿಗೆ ಇಲಾಖೆಯಿಂದ 400ಕೋಟಿ ರೂಪಾಯಿ ಬರಬೇಕು. ಮಾನ್ಯ ಹಣಕಾಸಿನ ಸಚಿವರು ಹೇಳಿದ ಪ್ರಕಾರ ಅದು 600 ಕೋಟಿ ರೂಪಾಯಿಗಳನ್ನು ದಾಟುತ್ತದೆ. ಅಬ್ಕಾರಿ ತೆರಿಗೆಯಿಂದ ಕನಿಷ್ಠ 250 ಕೋಟಿರೂಪಾಯಿ ಬಾಕಿ ಬರಬೇಕು; ಅದನ್ನು ವಸೂಲ್ಮಾಡಿಲ್ಲ. ಅದನ್ನು ವಸೂಲ್ಮಾಡಿದರೆ ಬಹುಶಃ ಹಣಕಾಸಿ ಪರಿಸ್ಥಿತಿ ಉತ್ತಮಗೊಂಡು ಏಪ್ರಿಲ್ ಒಂದರಿಂದ ಗೌರವದಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಮುಂಗಡ ಪತ್ರದ ಭಾಷಣದ 21ನೇ ಪುಟದ ಪ್ಯಾರಾ 8ರಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ದೊರೆಯಬೇಕಾದ ಪಾಲಿನಿಂದ ನಮ್ಮ ರಾಜ್ಯ ಹೆಚ್ಚು ವಂಚಿತವಾಗಿದೆ ಎಂದು ಹೇಳಿದ್ದೀರಿ. ಮುಂಗಡ ಪತ್ರದ 27ನೇ ಪುಟದಲ್ಲಿ ಕೇಂದ್ರ ಸರ್ಕಾರ ಒದಗಿಸುತ್ತಿದ್ದ ಪ್ರಮುಖ ಸಂಪನ್ಮೂಲಗಳಲ್ಲಿ ಬಹುತೇಕ ಬೇಡಿಕೆಗಳೆಂದರೆ ಸಣ್ಣ ಉಳಿತಾಯ, ಕೇಂದ್ರ ಯೋಜನಾ ನೆರವು, ಮಾರುಕಟ್ಟೆ ಸಾಲ, ಕೇಂದ್ರ ತೆರಿಗೆ ಪಾಲು ಕೆಲವು ವಷರ್ಷಗಳಿಂದ ಸ್ಥಗಿತಗೊಂಡಿದೆ ಅಥವಾ ಸ್ವಲ್ಪ ಮಾತ್ರ ಹೆಚ್ಚಿದೆ ಎಂದು ಹೇಳುತ್ತೀರಿ. ಮಾನ್ಯ ಹಣಕಾಸಿನ ರಸಚಿವರು ಅಂಕಿಅಂಶಗಳನ್ನು ಪರಿಶೀಲನೆ ಮಾಡಬೇಕು. ಕೇಂದ್ರ ಸರ್ಕಾರ ಏತಕ್ಕೆ ಕೊಡುತ್ತದೆ, ನೀವು ಏನು ಹೇಳಿದ್ದೀರಿ?

ಸ್ಥಗಿತಗೊಂಡಿದೆ ಇಲ್ಲ, ಕಡಿಮೆ ಆಗಿದೆ ಎಂದು ಹೇಳಿದ್ದೀರಿ. ನಿಮ್ಮ ಪುಸ್ತಕದ ಪ್ರಕಾರ ನಿಮ್ಮ ಅಂಕಿಅಂಶ ಏನು ಹೇಳುತ್ತದೆ? ವಿವರ ಏನಿದೆ? ವಾಸ್ತವ ಸ್ಥಿತಿ ಏನು?

1988-89ನೇ ಸಾಲಿನಲ್ಲಿ ಆದಾಯ ತೆರಿಗೆಯಿಂದ 194.63 ಕೋಟಿ ರೂಪಾಯಿ ಬಂದಿದೆ.

ಉಪಾಧ್ಯಕ್ಷರು:- ನೀವು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ? ಏಕೆಂದರೆ ಸದನವನ್ನು ಊಟಕ್ಕೆ ಮುಂದುಮಾಡಬೇಕೆಂದಿದ್ದೇವೆ. ಸದನವನ್ನು ಈಗ ಮುಂದಕ್ಕೆ ಹಾಕಿ ಮತ್ತೆ 3 ಗಂಟೆಗೆ ಸೇರೋಣ.

ಸಭೆ 2.10ಕ್ಕೆ ಮುಂದೂಡಲ್ಪಟ್ಟು ಪುನಃ3 ಗಂಟೆಗೆ ಸೇರುವುದಾಗಿ ನಿರ್ಣಯಿಸಲ್ಪಟ್ಟಿತು.

(ಸಭೆಯು 3.18ಕ್ಕೆ ಸಮಾವೇಶಗೊಂಡಿತು, ಶ್ರೀ ಎಂ.ಎಸ್. ಪಾಟೀಲ್ ಉಪಾಧ್ಯಕ್ಷರು, ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ

ಮಾನ್ಯ ಅಧ್ಯಕ್ಷರೆ ಈ ಬಜೆಟ್‌ನಲ್ಲಿ ಸತ್ಯಕ್ಕೆ ಅಪಚಾರ ಎಸಗುವಂತಹ ಕೆಲವು ಮಾತನ್ನು ಆಡಿದ್ದಾರೆ ಎಂದು ಹೇಳಬೇಕಾಗಿದೆ. ಪುಟ 10, ಪ್ಯಾರಾ 27- ಮಹತ್ವಾಕಾಂಕ್ಷೆಯ ಯೋಜನಾ ವೆಚ್ಚಗಳು, ಇಲ್ಲಿ ಈ ರೀತಿಹೇಳಿದ್ದಾರೆ.

''ರಾಜ್ಯ ಯೋಜನೆಗೆ ಹಣ ಒದಗಿಸಲು ದೊರಕುತ್ತಿದ್ದ ಪ್ರಮುಖ ಸಂಪನ್ಮೂಲಗಳಲ್ಲಿ ಬಹುತೇಕ ಬಾಬುಗಳು ಎಂದರೆ ಸಣ್ಣ ಉಳಿತಾಯಗಳ ಸಾಲ, ಕೇಂದ್ರ ಯೋಜನಾ ನೆರವು ಮಾರುಕಟ್ಟೆ ಸಾಲ ಮುಂತಾದ ಕಳೆದ ಕೆಲವು ವರ್ಷಗಳಲ್ಲಿ ಸ್ಥಗಿತಗೊಂಡಿವೆ ಅಥವಾ ಸ್ವಲ್ಪ ಮಾತ್ರ ಹೆಚ್ಚಿವೆ'' ಎನ್ನುವ ಮಾತನ್ನು ಹೇಳಿದ್ದಾರೆ. ಹೀಗಾಗಿ ಹಣಕಾಸಿನ ಪರಿಸ್ಥಿತಿಯಿಂದ ನಮಗೆ ತೊಂದರೆಯಾಗಿದೆಯೆಂದು ಹೇಳಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೆ,

ಇದು ವಾಸ್ತವಿಕ ಸ್ಥಿತಿಯಲ್ಲ. ಅವರೇ ಕೊಟ್ಟಿರುವಂಥ ಅಂಕಿ-ಅಂಶದ ಪ್ರಕಾರ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ಪಾಲು ಪ್ರತಿ ವರ್ಷ ಹೆಚ್ಚಾಗಿದೆ. ಇದರ ವಿವರಗಳನ್ನು ಕೊಡಲು ನಾನು ಇಚ್ಚಿಸುತ್ತೇನೆ. ಆದಾಯ ತೆರಿಗೆಗೆ ಸಂಬಂಧಿಸಿದಂತೆ, 1989-90ರಲ್ಲಿ 194 ಕೋಟಿ 63 ಲಕ್ಷ ಇತ್ತು, ಅದೇ ರೀತಿ 1990-91ರಲ್ಲಿ 203 ಕೋಟಿ 06 ಲಕ್ಷ, 1991-92ರಲ್ಲಿ 251 ಕೋಟಿ 64 ಲಕ್ಷ, 1992-93ರಲ್ಲಿ 289 ಕೋಟಿ 20

ಲಕ್ಷ 1993-94ರಲ್ಲಿ 305 ಕೋಟಿ 39 ಲಕ್ಷವಾಯಿತು. ಅಂದರೆ, 1989-90ರಿಂದ 1993-94ರವರೆಗೆ ನಮಗೆ ಬರಬೇಕಾದ ಆದಾಯ ತೆರಿಗೆಯಲ್ಲಿ ಇಷ್ಟು ಪ್ರಮಾಣದಲ್ಲಿ ಏರಿಕೆಯಾಯಿತು. ಮತ್ತು ಯಾವ ರೀತಿ ನಮಗೆ ಸಂದಾಯವಾಗಿದೆಯೆನ್ನುವ ಅಂಕಿ-ಅಂಶ ಗಳನ್ನೂ ಕೊಡುತ್ತಿದ್ದೇನೆ. ಅಬಕಾರಿ ಸುಂಕಕ್ಕೆ ಸಂಬಂಧಿಸಿದಂತೆ, 1989-90ರಲ್ಲಿ 350 ಕೋಟಿ 56 ಲಕ್ಷ, 1990-91ರಲ್ಲಿ 359 ಕೋಟಿ 29 ಲಕ್ಷ, 1991-92ರಲ್ಲಿ 390 ಕೋಟಿ 25 ಲಕ್ಷ, 1992-93ರಲ್ಲಿ 489 ಕೋಟಿ 20 ಲಕ್ಷ ಮತ್ತು 1993-94ರಲ್ಲಿ 572 ಕೋಟಿ ಲಕ್ಷ ರೂಪಾಯಿಗಳು ಸಂದಾಯವಾಗಿದೆ. ಅಂದರೆ, ಆದಾಯ ತೆರಿಗೆ ಮತ್ತು ಅಬಕಾರಿ ಸುಂಕ ಮತ್ತು ಕೇಂದ್ರ ಸರ್ಕಾದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದಂಥ ಪಾಲು ಹೀಗೆ ವರ್ಷೇ ಹೆಚ್ಚಾಗಿದೆ ಹಾಗೂ ನಮಗೆ ಬರಬೇಕಾದದ್ದು ಬಂದಿದೆಯೆಂದು ಅಂಕಿ-ಅಂಶಗಳ ಸಹಿತ ಅವರು ಹೇಳಿದ್ದಕ್ಕೂ ವಾಸ್ತವಿಕ ಸ್ಥಿತಿಗೂ ಎಷ್ಟು ದೂರವಾಗಿದೆಯೆಂಬ ಮಾತನ್ನು ಆಯವ್ಯಯವನ್ನು ತಯಾರಿಸ ಬೇಕಾದರೆ ಹಣಕಾಸು ಸಚಿವರಾದ ತಾವು ಕೇಂದ್ರ ಸರ್ಕಾರಕ್ಕೆ ಆರೋಪ ಮಾಡಬೇಕಾದರೆ ವಾಸ್ತವಿಕ ಸ್ಥಿತಿಯನ್ನು ಮರೆ ಮಾಚುವುದಕ್ಕೆ ಸಾಧ್ಯವಾಗುವುದಿಲ್ಲ, ಅದು ಅಪಾರ್ಥಕ್ಕೆಡೆಯುಂಟು ಮಾಡುತ್ತದೆ ಮತ್ತು ಜನರಿಗೆ ನಿಮ್ಮ ಆಯ-ವ್ಯಯದ ಬಗ್ಗೆ ಅನುಮಾನ ಬರುವುದಕ್ಕೆ ಅವಕಾಶವಾಗುತ್ತದೆ. ಇದೇ ರೀತಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒದಗಿಸುತ್ತಿರುವ

ಪ್ರಮುಖ ಸಾಲಗಳ ಏರಿಕೆ ಹೇಗಿದೆ ಎಂದರೆ ಅದೂ ಸಹ ಕಡಿಮೆಯಾಗಿದೆಯೆಂದು ಹೇಳಿದ್ದಾರೆ. 1989-90ರಲ್ಲಿ ಕೇಂದ್ರ ಸರ್ಕಾರದಿಂದ ಪಡೆದುಕೊಂಡಿದ್ದ ಸಾಲ 563 ಕೋಟಿ 57 ಲಕ್ಷ - ಸಂದಾಯವಾಗಿದ್ದರೆ, 1990-91ರಲ್ಲಿ 459 ಕೋಟಿ 69 ಲಕ್ಷ, 1991-92ರಲ್ಲಿ 528 ಕೋಟಿ, 1992-93ರಲ್ಲಿ 747 ಕೋಟಿ ಮತ್ತು 1993-94ರಲ್ಲಿ 951 ಕೋಟಿ ರೂಪಾಯಿಗಳು ಸಂದಾಯವಾಗಿದೆ. ಮತ್ತು ಕೇಂದ್ರ ಸರ್ಕಾರದ ಅನುದಾನ 1989-90ರಲ್ಲಿ 265 ಕೋಟಿ ರೂಪಾಯಿಗಳಿದ್ದರೆ 1990-91ರಲ್ಲಿ 377 ಕೋಟಿ, 1991-92ರಲ್ಲಿ ಕೋಟಿ, 1992-93ರಲ್ಲಿ 739 ಕೋಟಿ ಮತ್ತು 1993-94ರಲ್ಲಿ 776 ಕೋಟಿ ರೂಪಾಯಿಗಳ ಅನುದಾನ ಬಂದಿದೆ. ಹಾಗೆಯೇ ಕೇಂದ್ರದಿಂದ ತೆರಿಗೆ ಪಾಲು ನಮಗೆ ಬರಬೇಕಾಗಿರುವಂಥಾದ್ದು 1989-90ರಲ್ಲಿ 636 ಕೋಟಿ ಇದ್ದರೆ, 1990-91ರಲ್ಲಿ 665 ಕೋಟಿ, 1991-92ರಲ್ಲಿ 787 ಕೋಟಿ 1992-93ರಲ್ಲಿ 911 ಕೋಟಿ ಮತ್ತು 1993-94ರಲ್ಲಿ 1038 ಕೋಟಿ ರೂಪಾಯಿಗಳು ಅಂದರೆ, ಈ ಅಂಕಿ-ಅಂಶಗಳನ್ನು ನೋಡಿದಾಗ ಈ ಸಾಲಿನ ಮಹತ್ವದ ಮುಗಂಗಡ ಪತ್ರದ ಭಾಷಣದಲ್ಲಿ ಹೇಳಿ ಧಾಟಿಗಳು ಯಾವ ರೀತಿ ಸದನವನ್ನು ಅಡ್ಡದಾರಿಗೆ ತರುವಂಥ ಪ್ರಯತ್ನ ಮಾಡಿದೆ ಮತ್ತು ರಾಜ್ಯದ ನಾಲ್ಕು ಮುಕ್ಕಾಲು ಕೋಟಿ ಜನರಿಗೆ ಅಪಾರ್ಥ ಕಲ್ಪಿಸುವ, ಸತ್ಯವನ್ನು ಮರೆ ಮಾಚುವಂಥ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಏಕೆಂದರೆ, ಆಯವ್ಯಯ ಪುಸ್ತಕವನ್ನು ಈ ರಾಜ್ಯದ ಜನರು ನೋಡುವುದಿಲ್ಲ, ದೇಶದ ಜನರೂ ನೋಡುವುದಿಲ್ಲ. ಆದರೆ ವಿದೇಶಿಯರು ನೋಡುತ್ತಾರೆ. ಏಕೆಂದರೆ, ಇಲ್ಲಿನ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲವೆಂದರೆ, ಅವರ್‍ಯಾರೂ ಕೂಡ ಬಂಡವಾಳ ಹೂಡಲು ಬರುವುದಿಲ್ಲ. ಇನ್ನೊಂದು ಕಡೆ ಕೇಂದ್ರದಿಂದ ರಾಜ್ಯಕ್ಕೆ ಏನು ಆದಾಯ ಬಂದಿದೆ, ಅದರ ಅಂಕಿ-ಅಂಶವನ್ನು ಮರೆಮಾಚಿ ಸತ್ಯ ಸಂಗತಿಯನ್ನು ತಿಳಿದಿರುವಂಥ ಪ್ರಯತ್ನವನ್ನು ಈಗ ಮಾಡಿದ್ದೀರಿ. ಇದಕ್ಕೆ ತಾವು ಉತ್ತರ ಕೊಡುವಾಗ ಸ್ಪಷ್ಟೀಕರಣ ನೀಡುತ್ತೀರೆಂದು ನಾನು ಭಾವಿಸಿದ್ದೇನೆ. ಇನ್ನು ಬಹಳ ಜನ ಸದಸ್ಯರು ಮಾತನಾಡಬೇಕಾಗಿರುವುದರಿಂದ, ನಾನು ಹೆಚ್ಚು ಸಮಯ ತೆಗೆದುಕೊಳ್ಳದೆ ಆದಷ್ಟು ಬೇಗನೆ ಮುಗಿಸುತ್ತೇನೆ. ಇನ್ನು ನಮ್ಮ ರಾಜ್ಯದ ಒಟ್ಟು ಖರ್ಚಿನಲ್ಲಿ ಶೇಕಡ 26ರಷ್ಟು ಹಣ ಮಾತ್ರ ಅಭಿವೃದ್ಧಿ ಯೋಜನೆಗಳಿಗೆ ವೆಚ್ಚವಾಗುತ್ತಿದ್ದು, ಬಹುಶಃ ಇದು ನಮಗೆ ಎದೆ ನಡುಗಿಸುವಂಥ, ಗಾಬರಿ ತರಿಸುವಂಥ ಸಂಗತಿಯಾಗಿದೆ. ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿರುವುದಕ್ಕೆ ಮೂಲ ಕಾರಣ ಏನು ಎನ್ನುವುದರ ಕಡೆ ನಾವು ಯೋಚನೆ ಮಾಡಬೇಕಾಗಿದೆ. ಸನ್ಮಾನ್ಯ ಹಣಕಾಸು ಸಚಿವರೇ, ಈ ಟ್ರೆಂಡ್ ಏನಿದೆ, ಇದನ್ನು ತಿರುಗು-ಮುರುಗು ಮಾಡುತ್ತೀರಾ? ಅಥವಾ ಇದನ್ನೇನಾದರೂ ಬದಲಾವಣೆ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಾ? ಏಕೆಂದರೆ, 1995-96ರಲ್ಲಿ ರಾಜ್ಯದ ಯೋಜನಾ ವೆಚ್ಚ 3758 ಕೋಟಿ 28 ಲಕ್ಷ ರೂಪಾಯಿಗಳೆಂದರೆ ಇದಕ್ಕಿರುವ ಆರ್ಥಿಕ ಬೆಂಬಲ ತಾವು ಆಯವ್ಯಯದಲ್ಲಿ ಕೊಟ್ಟಿರುವಂಥದ್ದು 2,900 ಕೋಟಿ ರೂಪಾಯಿಗಳು ಮಾತ್ರ, ಉಳಿದ ಹಣವನ್ನು ಎಲ್ಲಿಂದ, ಹೇಗೆ ತರುತ್ತೀರಿ? ಮತ್ತು ತಾವು ಹೇಳಿದ್ದೀರಿ: ಕೇಂದ್ರದ ನೆರವು ಸಿಕ್ಕಿದರೆ, ಮಾರುಕಟ್ಟೆಯಿಂದ ಸಾಲ ಸಿಕ್ಕಿದರೆ, ತೆರಿಗೆ ಅಂದಾಜಿಗಿಂತ ಹೆಚ್ಚು ವಸೂಲಾದರೆ ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆಂಬ ಸಾಮ್ರಾಜ್ಯದಲ್ಲೇ ತಾವು ಮುಳುಗಿದ್ದೀರಿ. ಹಣಕಾಸು ಸಚಿವರೇ, ಇದರಿಂದ ಬಹುಶಃ ತಾವು ಏನು ಗುರಿ ಮುಟ್ಟಬೇಕು, ಅಭಿವೃದ್ಧಿ ಕಾರ್ಯಗಳಾಗಬೇಕೆಂಬ ಕಳಕಳಿ ಏನು ಇಟ್ಟುಕೊಂಡಿದ್ದೀರಿ, ಅದು ಸಾಧ್ಯವಾಗುವುದಿಲ್ಲ. ಕಳೆದ 6-7 ವರ್ಷಗಳ ಅಂಕಿ-ಅಂಶಗಳನ್ನು ನೋಡಿದರೆ, ಬಹುಶಃ ವೀರೇಂದ್ರ ಪಾಟೀಲರು

ಮುಖ್ಯಮಂತ್ರಿಗಳಾಗಿದ್ದ ಅವಧಿ ಬಿಟ್ಟರೆ, ಬೇರೆ ಯಾವುದೇ ಸಂದರ್ಭದಲ್ಲೂ ಪ್ಲಾನ್‌ನಲ್ಲಿ ಏನು ಎಸ್ಟಿಮೇಟ್ ಅನ್ನು ನೀಡಿದ್ದೆವು, ಆ ಗುರಿ ಮುಟ್ಟುವುದಕ್ಕೆ ಆಗಲಿಲ್ಲವೆನ್ನುವ ಸತ್ಯ ಸಂಗತಿಯನ್ನು ತಾವು ಗಮನಿಸುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತೊಂದು ವಿಚಾರವೇನೆಂದರೆ, ಕಳೆದ ಐದು ವರ್ಷಗಳಲ್ಲಿ ಈ ಸಾಲಿನಲ್ಲಿ ತಾವು ಏನು 543 ಕೋಟಿ 85 ಲಕ್ಷ ರೂಪಿಯಗಳ ಹೆಚ್ಚಿನ ತೆರಿಯನ್ನು ಹಾಕಿದ್ದೀರಿ, ಇತಿಹಾಸದಲ್ಲೇ ಇದೊಂದು ದೊಡ್ಡ, ಘೋರ ದಾಖಲೆಯಾಗುತ್ತದೆ. ಏಕೆಂದರೆ 'ನಿಮ್ಮ ಕಾಲದಲ್ಲಿ ಸಿದ್ಧರಾಮಯ್ಯ ಎಂಬುವರು ಹಣಕಾಸು ಸಚಿವರಾಗಿದ್ದರು. ಅವರು ಹಿಂದೆಂದೂ ಹಾಕದಂಥ ಭಾರಿ ಹೊರೆಯನ್ನು ಹೇರಿ ಹೋದರು ಎಂದು ಮುಂದಿನ ಪೀಳಿಗೆ ಯವರು ನೆನೆಸಿಕೊಳ್ಳುವ ರೀತಿ ಇಂತಹ ಕೆಲಸವನ್ನು ನಿಮ್ಮ ಕೈಯಿಂದ ಮಾಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಕೊಟ್ಟಂಥ ಭರವಸೆಗೆ ತದ್ವಿರುದ್ಧವಾಗಿ ತೆರಿಗೆ ಮುಕ್ತ ಬಜೆಟ್ ಎಂದು ಏನು ಹೇಳಿದ್ದೀರಿ, ನೀವು ಒಬ್ಬರು ಹಣಕಾಸು ಸಚಿವರಾಗಿ ಸಾರ್ವಜನಿಕರ ಮುಂದೆ ಹೋದಾಗ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಜನವರಿ 26ನೇ ತಾರೀಖಿನಂದು ತಾವು ಮೈಸೂರಿನಲ್ಲಿ ಏನು ಹೇಳಿದ್ದೀರೆಂದರೆ 'ಕರ್ನಾಟಕವೇ ಹೆಚ್ಚು ಪ್ರಮಾಣದ ತೆರಿಗೆ ವಿಧಿಸಿರುವ ರಾಜ್ಯಗಳಲ್ಲಿ ಒಂದಾಗಿದ್ದು, ಹೊಸ ತೆರಿಗೆಗಳನ್ನು ವಿಧಿಸಲು ಅವಕಾಶವಿಲ್ಲವೆಂದು ರಾಜ್ಯದ ಹಣಕಾಸು ಮತ್ತು ಯೋಜನಾ ಸಚಿವರಾರ ಸಿದ್ಧರಾಮಯ್ಯನವರು ಹೇಳಿದರು. ಸುದ್ದಿಗಾರರ ಜೊತೆ ಮಾತನಾಡುತ್ತಿದ್ದ ಅವರು, ಸಂಪನ್ಮೂಲ ಕ್ರೋಢೀಕರಿಸಲು ತೆರಿಗೆ ವಸೂಲಾತಿಗೆ ಕಟ್ಟುನಿಟ್ಟಿನ ಕ್ರಮ ಕೆಗೊಳ್ಳುವುದೇ ಉಳಿದ ಮಾರ್ಗವಾಗಿದೆಯೆಂದು ಹೇಳಿದರು. ಅಲ್ಲದೆ, ತೆರಿಗೆ ವಿವಿಧ ಬಾಬ್ತುಗಳಲ್ಲಿ ಸುಮಾರು 400 ಕೋಟಿ ರೂಪಾಯಿಗಳಷ್ಟು ತೆರಿಗೆ ಬಾಕಿ ಇದ್ದು, ಅದನ್ನು ವಸೂಲು ಮಾಡುವುದಕ್ಕೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರೆಂದು ವರದಿಯಾಗಿದೆ. ಎಷ್ಟು ತೆರಿಗೆಯನ್ನು ತಾವು ವಸೂಲು ಮಾಡಿದ್ದೀರಿ? ಎಷ್ಟು ಜನ ಅಧಿಕಾರಿಗಳು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದರು? ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ, ಅದೇ ರೀತಿ ಅಬಕಾರಿ ಇಲಾಖೆಯಲ್ಲಿದ್ದಾರೆ. ಹಿಂದಿನ ಸರ್ಕಾರ ವಿವಿಧ ಇಲಾಖೆಗಳಿಗೆ ಅಧಿಕಾರಿಗಳನ್ನು ನೇಮಿಸಿದ್ದರೂ ಸಹ ಅವರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಪ್ರಾಮಾಣಿಕರಾದಂಥ ಅಧಿಕಾರಿಗಳನ್ನು ನಿಮ್ಮ ಸರ್ಕಾರ ಈಗ ಅಧಿಕಾರಕ್ಕೆ ಬಂದಿರುವಂಥ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ಉಳಿಸಿಕೊಳ್ಳುತ್ತೀರೊ ಎನ್ನುವ ಭಯ ಇದೆ ಏಕೆಂದರೆ ನೀವು ಹೋಗುತ್ತಿರುವ ದಾರಿ, ನಡೆದುಕೊಳ್ಳುತ್ತಿರುವ ರೀತಿಯಿಂದ ಎಷ್ಟು ದಿವಸ ಪ್ರಾಮಾಣಿಕ ಅಧಿಕಾರಿಗಳು ಉಳಿದುಕೊಳ್ಳುತ್ತಾರೆ? ಅಥವಾ ಎಷ್ಟು ದಿವಸಗಳಲ್ಲಿ ಅವರುಗಳನ್ನು ಎತ್ತಂಗಡಿ ಮಾಡುತ್ತೀರೋ ಗೊತ್ತಿಲ್ಲ. ಕೊನೆ ಪಕ್ಷ ಅಬಕಾರಿ ಮತ್ತು ವಾಣಿಜ್ಯ ತೆರಿಗೆ ಇಲಾಖೆಯಲ್ಲಿರುವ ಪ್ರಾಮಾಣಿಕ ಅಧಿಕಾರಿಗಳೇನಿದ್ದಾರೆ, ಅವರನ್ನಾದರೂ ಅದಲು-ಬದಲು ಮಾಡದೆ ಅವರಿಗೇ ಅದೇ ಸ್ಥಾನದಲ್ಲಿರಲು ಪೂರ್ಣ ಅವಕಾಶ ಕೊಟ್ಟು ಹೆಚ್ಚಿನ ತೆರಿಗೆ ಸಂಗ್ರಹಿಸುವುದಕ್ಕೆ ಅವರ ಅನುಭವ ಉಪಯೋಗಿಸಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಯಾವ ರೀತಿ ಇವರ ಕಾಲದಲ್ಲಿ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆಂಬ ಅಂಕಿ-ಅಂಶವನ್ನು ತಾವು ನೋಡಬಹುದು. 1990-91ರಲ್ಲಿ 147 ಕೋಟಿ 50 ಲಕ್ಷ ರೂಪಾಯಿಗಳ ಹೆಚ್ಚಿನ ಹೊರೆ ಬಿದ್ದಿದ್ದರೆ, 1991-92ರಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ

10 ಕೋಟಿ 16 ಲಕ್ಷ ರೂಪಾಯಿಗಳಿಗೆ ಇಳಿಯಿತು ಮತ್ತು ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಅಂದರೆ, 1992-93ರಲ್ಲಿ 244 ಕೋಟಿ 84 ಲಕ್ಷ ರೂಪಾಯಿಗಳಾಯಿತು. ಅವರು ಎಲ್ಲದರ ಮೇಲೂ ಪ್ರವೇಶ ತೆರಿಗೆ ವಿಧಿಸಿ ಅವರ ಕಾಲದಲ್ಲಿ ವಸೂಲಾದದ್ದು 244 ಕೋಟಿ ರೂಪಾಯಿಗಳೆಂದರೆ ವಸೂಲಾದದ್ದು 141 ಕೋಟಿ ರೂಪಾಯಿಗಳು ಮಾತ್ರ. ಬಹುಶಃ ತಾವು ಅಂಕಿ-ಅಂಶಗಳನ್ನು ನೋಡಿದರೆ ತಮ್ಮ ಗಮನಕ್ಕೆ ಬರಬಹುದು. 1993-94ನೇ ಸಾಲಿನಲ್ಲಿ 43 ಕೋಟಿ 61 ಲಕ್ಷ ರೂಪಾಯಿಗಳ ಹೆಚ್ಚೆಚ್ಚು ತೆರಿಗೆ ಹಾಕಿದ್ದಾರೆ. ಅದೇ ರೀತಿ 1994-95ರಲ್ಲಿ 6- ಕೋಟಿ 13 ಲಕ್ಷವಾದರೆ, ನಿಮ್ಮ ಕಾಲದಲ್ಲಿ ಅಂದರೆ, 1995-96ನೇ ಸಾಲಿಗೆ 244 ಕೋಟಿ 85 ಲಕ್ಷ ರೂಪಾಯಿಗಳ ತೆರಿಗೆ ಹಾಕಿದ್ದೀರೆಂದರೆ, ತಾವು ಕೊಟ್ಟಿರುವ ಹೇಳಿಕೆಗೂ ನಾನು ಹೇಳುತ್ತಿರುವಂದ್ದಕ್ಕೂ ಬಹಳ ವ್ಯತ್ಯಾಸವಿದೆ. ಯಾವ ಆಧಾರರದ ಮೇಲೆ ತಾವು ಹೇಳಿಕೆ ಮಾಡಿದ್ದೀರಿ? ಇವೂತ್ತು ಯಾವದೋ ಕಾರಣಕ್ಕೆ 'ನಾನು ತೆರಿಗೆ ಮುಕ್ತ ಬಜೆಟ್ ಕೊಡುತ್ತೇನೆ' ಎಂದು ಒಂದು ಕಡೆ ಹೇಳಿ, ಇನ್ನೊಂದು ಕಡೆ ಇತಿಹಾಸದಲ್ಲಿ ಯಾರೂ ಹಾಕದಿರುವಂಥ ಹೆಚ್ಚಿನ ತೆರಿಗೆಯ ಹೊರೆ ಹಾಕುವಂಥ ಒಂದು ಪ್ರಯತ್ನ ಅಂದರೆ ಕಾಂಗ್ರೆಸ್ಸಿನವರು ತಾವು ಇದ್ದ ಐದು ವರ್ಷಗಳ ಆಡಳಿತಾವಧಿಯಲ್ಲಿ ವಿಧಿಸಿದ ಹೆಚ್ಚಿನ ಕರ ಭಾರದ ಒಟ್ಟು ಮೊತ್ತ 375 ಕೋಟಿ ರೂಪಾಯಿಗಳಾಗುತ್ತದೆ. ಆದರೆ ಇವರು (ಜನತಾ ದಳ ಸರ್ಕಾರ) ಪ್ರಥಮ ವರ್ಷದಲ್ಲಿ, ಹಿಂದಿನ ಎಲ್ಲಾ ಸರ್ಕಾರಗಳನ್ನು ಹಿಂದಕ್ಕೆ ಹಾಕಿ ಕೊನೆಯ ಪಕ್ಷ 245 ಕೋಟಿ ರೂಪಾಯಿಗಳ ಹೆಚ್ಚಿನ ತೆರಿಗೆ ವಿಧಿಸಿ ರೆಕಾರ್ಡ್ ಬ್ರೇಕ್ ಮಾಡಿ ಹೊಸ ಇತಿಹಾಸವನ್ನೇ ಸೃಷ್ಟಿಸಿದ್ದೀರಿ. ಆದುದರಿಂದ, ನಿಮಗೆ ಎಷ್ಟರಮಟ್ಟಿಗೆ ಶೋಭೆ ತರುತ್ತದೆ? 'ಹೇಳಿದಂತೆ ನಡೆಯುವ, ನುಡಿಯುವ ಸರ್ಕಾರ ನಮ್ಮದು' ಎಂದು ತಾವೇ ಹೇಳಿರುವಂಥಾದ್ದು. ಎಷ್ಟರಮಟ್ಟಿಗೆ ಇದರಲ್ಲಿ ತಾರತಮ್ಯವಿದೆ ಯೆಂದರೆ, ನೀವು ಹೇಳುವುದಕ್ಕೂ, ನಡೆದುಕೊಳ್ಳುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಮತ್ತೆ ನಮ್ಮ ರಾಜ್ಯಕ್ಕೆ ತಾವು ತಂದಿರುವಂಥ ಸಾಲಕ್ಕೆ ಬಡ್ಡಿಯನ್ನು ಮರುಪಾವತಿ ಮಾಡುತ್ತಿದ್ದೀರಿ. ಎಷ್ಟು ಹಣವನ್ನು ಮರುಡಾವತಿ ಮಾಡುತ್ತಿದ್ದೀರಿ? ಇದನ್ನು ಸಹ ನಾವು ಗಮನಿಸಿದಾಗ ಗಾಬರಿವುಂಟಾಗುತ್ತದೆ. 1980-81ರ ಮುಂಗಡ ಪತ್ರದಲ್ಲಿ ತಿಳಿಸಿರುವಂತೆ ತಂದಂಥ ಸಾಲಕ್ಕೆ ಶೇಕಡ 9.3ರಷ್ಟು ಬಡ್ಡಿಯನ್ನು ಮರುಪಾವತಿ ಮಾಡಿ ಖರ್ಚು ಮಾಡುತ್ತಿದ್ದರು. ಆದರೆ 1994-95ನೇ ಸಾಲಿಗೆ ಬಡ್ಡಿ ಮರುಪಾವತಿ ಪ್ರಮಾಣ ಎಷ್ಟು ಏರಿಕೆಯಾಗಿದೆಯೆಂದರೆ, ಶೇಕಡ 16 ರಷ್ಟಾಗಿದೆ. ರಾಜ್ಯದ ಹೊರಗಡೆಯಿಂದ ತಂದಂಥ ಸಾಲಕ್ಕೆ ಬಡ್ಡಿ ಹಣವಾಗಿ ಮರುಪಾವತಿಗೆ ಎಷ್ಟು ಖರ್ಚು ಮಾಡುತ್ತಿದ್ದೇವೆಂದು ಗಮನಿಸಿ ನೋಡಿದರೆ ಪರಿಸ್ಥಿತಿ ಎಷ್ಟು ಭಯಾನಕವಾಗಿದೆ ಎನ್ನುವುದನ್ನು ಈ ಸದನದ ಮೂಲಕ ನಾಡಿನ ಜನರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಕೆಲಸ ಮಾಡುವ ಅಧಿಕಾರಿಗಳೂ ಸಹ ಇದನ್ನು ಸರಿಪಡಿಸುವುದಕ್ಕೆ ಯಾವ ಕ್ರಮ ಕೈಗೊಳ್ಳ ಬೇಕೆನ್ನುವ ಬಗ್ಗೆ ವಿಶೇಷ ಗಮನ ಕೊಡಬೇಕು. ಅಧ್ಯಕ್ಷರೆ ತಾವು ಬಜೆಟ್‌ನ್ನು ಪರಿಶೀಲನೆ ಮಾಡಲು ಸಮಯದ ಅಭಾವವಿದೆ, ಒಂದು ಕೆಲಸ ಮಾಡಿ, ಕೆಇಬಿ ಸ್ಟೋರ್‌ರಿನ ಇನ್‌ವೆಂಟರಿಯನ್ನು ತೆಗೆದು ನೋಡಿ, ಸುಮಾರು 30-40 ಕೋಟಿ ರೂಪಾಯಿ ಹೋದ ವರ್ಷ, ಅದಕ್ಕಿಂತ ಹಿಂದಿನ ವರ್ಷ ಒಟ್ಟು 140

ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಅದರ ಅಗತ್ಯವಿತ್ತೆ? ಸರ್ಕಾರದ ಬೊಕ್ಕಸವಲ್ಲಿ ಹಣವಿಲ್ಲ ನಾವು ಇದ ಸರಿಯಿಲ್ಲವೆಂದು ಬೊಬ್ಬೆ ಹಾಕಿದೆವು, ಯಾವುದೇ ಇಲಾಖೆಗೆ ಹೋದರು ಅಗಗತ್ಯವಾಗಿ ಅಲ್ಲಿ ಇರತಕ್ಕ ಅಧಿಕಾರಿಯ ಸಂಬಂಧಿಕನ, ರಾಜಕೀಯ ಸಂಬಂಧಿಕನ ಯಾರೋ ಸಣ್ಣ ಕೈಗಾರಿಕೆಯನ್ನಿಟ್ಟು ಕೊಂದಿರುವವರ, ಅದು ಬೇಕೋ ಬೇಡವೋ, ಅದು ಕ್ವಾಲಿಟಿ ಇದೆಯೋ ಇಲ್ಲವೋ ಅದನ್ನು ನೋಡದೆ, ಹತ್ತಾರು ಕೋಟಿ ರೂಪಾಯಿಗಳನ್ನು ಕೊಟ್ಟು, ನೆಟ್ಟು, ಬೋಲ್ಟ್‌ಗಳನ್ನು ಸ್ಟಾಕ್ ಮಾಡಿ ಇಟ್ಟುಕೊಂಡಿದ್ದಾರೆ. ಯಾರನ್ನೋ ಉದ್ಧಾರ ಮಾಡುವುದಕೋಸ್ಕರ ಸರ್ಕಾರದ ಹಣವನ್ನು ಲೂಟಿ ಮಾಡುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ತಾವು ವಿಶೇಷವಾದ ಗಮನ ಕೊಡಬೇಕು. ಕೆಲವು ಇಲಾಖೆಯ ಹೆಸರು ಹೇಳಿದರೆ ತಪ್ಪಾಗುತ್ತದೆ. ಕೆಲವು ಇಲಾಖೆಗಳಲ್ಲಿ ಖಾಲಿ ಇರುವ ಪೋಸ್ಟ್‌ಗಳಿವೆ. ಅದಕ್ಕೆ ಸಂಬಳದ ಶಿರೋನಾಮೆಯಲ್ಲಿ ಪ್ರಾವಿಷನ್ ಮಾಡಿಕೊಂಡು ಅದನ್ನು ಪ್ರಯಾಣದ ವೆಚ್ಚಕ್ಕಾಗಿ ವೆಚ್ಚಮಾಡುತ್ತಿದ್ದಾರೆ. ನಾನು ಅದರ ಬಗ್ಗೆ ಯಾವ್ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಮಾಡಿದ್ದಾರೆ ಮತ್ತು ಇದರ ಬಗ್ಗೆ ತಾವು ಎಷ್ಟು ಗಮನಕೊಟ್ಟಿದ್ದೀರಿ ಎಂಬ ಬಗ್ಗೆ ಮಾಹಿತಿ ಕೊಡುತ್ತೇನೆ. ಇದಕ್ಕಿಂತ ತಾಜಾ ಉದಾಹರಣೆ ಹಣವು ದುರುಪಯೋಗವಾಗುವುದರ ಬಗ್ಗೆ ಇನ್ನೊಂದು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದಕೋಸ್ಕರ ಮಟೀರಿಯಲ್ಸ್ ಮ್ಯಾನೇಜ್ ಮೆಂಟ್ ಸರಿಯಾಗಿ ಆಗಬೇಕಾಗುತ್ತದೆ. ಮೂರ್ನಾಲ್ಕು ವರ್ಗಕ್ಕೆ ಬೇಕಾಗಿರುವ ಬೋಲ್ಟ್‌ಗಳು ಮತ್ತು ನೆಟ್ಟುಗಳನ್ನು ಅನಗತ್ಯವಾದ ವಸ್ತುಗಳನ್ನು ಖರೀದಿ ಮಾಡಿ ಕೋಟ್ಯಾಂತರ ರೂಪಾಯಿಗಳ ವಸ್ತುಗಳನ್ನು ಸ್ಟಾಕ್‌ನಲ್ಲಿ ಇಟ್ಟುಕೊಂಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳ ಸಾಧ್ಯವಾದರೆ ಹಣಕಾಸು ಸಚಿವರಿಂದ ಕೆಇಬಿ ಸ್ಟಾಕ್‌ನ್ನು ತನಿಖೆ ಮಾಡಿಸಿ. 110-120 ಕೋಟಿ ರೂಪಾಯಿಗಳ ವಸ್ತುಗಳನ್ನೆನು ಸ್ಟೋರ್ಸ್‌ಗೆ ತಂದರು ಅದು ಎಲ್ಲಿತ್ತು, ಏನಾಗಿದೆ, ಎಲ್ಲಿಗೆ ಹೋಯಿತು, ಅಥವಾ ನಮ್ಮ ಸ್ಟಾಕ್‌ಗೆ ಬರದೆಯೆ ಅಲ್ಲಿಯೆ ಹೊರಟುಹೋಯಿತೆ ಇದರ ಬಗ್ಗೆ ತನಿಖೆ ಮಾಡಿದರೆ, ಮುಂದೆ ಈ ರೀತಿ ಆಗದಿರುವ ಬಗ್ಗೆ ತಾವು ಎಚ್ಚರಿಕೆ ವಹಿಸಬಹುದೆಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ನೀರಾವರಿ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನೀರಾವರಿಯ ಬಗ್ಗೆ ನಿಮ್ಮ ಆದ್ಯತೆ ಏನು? ಆ ಕಡೆಗೆ ನೀವು ಗಮನವನ್ನು ಕೊಡುತ್ತಿಲ್ಲ ಎನ್ನುವುದರ ಬಗ್ಗೆ ಕಳೆದ 4-5 ವರ್ಷಗಳ ದಾಖಲೆಯನ್ನು ನೋಡಿದಾಗ ನಾವೇನಾದರೂ ಎರಡು ಸಾವಿರ ವರ್ಷದೊಳಗೆ ಬಚಾವತ್ ಆಯೋಗದ ವರದಿಯ ಪ್ರಕಾರ ನಮ್ಮ ಮಣ್ಣಿನ ಮಕ್ಕಳಿಗೆ ನೀರನ್ನು ಕೊಟ್ಟು ಅವರು ಗೌರವದಿಂದ ಬದುಕಬೇಕು, ಅವರು ಆ ರೀತಿ ಬದುಕಿದರೆ ಮಾತ್ರ ಆ ನಿಟ್ಟಿನಲ್ಲಿ ನಾವು ದುಡಿದರೆ ಬಹುಶಃ ನಮ್ಮ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗುತ್ತದೆ. ಎಲ್ಲಿಯವರೆಗೆ ಗ್ರಾಮೀಣ ಪ್ರದೇಶದ 70 ಭಾಗ ಜನರು ಬಡವರಾಗಿರುತ್ತಾರೊ ಅವರಿಗೆ ನೀರಾವರಿಯ ಅನುಕೂಲವನ್ನು ಮಾಡಿಕೊಟ್ಟು ದುಡಿಯತಕ್ಕ ಕೆಲಸವನ್ನು ಮಾಡಬೇಕು. ಗ್ರಾಮೀಣ ಜನರು ನಮ್ಮನ್ನೇನು ಕೇಳಲು ಬರುತ್ತಾರೆ? ನನ್ನ ಹೊಲಕ್ಕೆ ನೀರು ಕೊಡಿ, ನನಗೆ ಉತ್ತಮವಾದ ಬೀಜಗಳನ್ನು ಕೊಡಿ ಎಂದು ಮಾತ್ರ ಕೇಳುತ್ತಾರೆ. ನಾನು ಗೌರವದಿಂದ ದುಡಿದು ನೆಮ್ಮದಿಯಿಂದ ಬದುಕುತ್ತೇನೆಂದು ಹೇಳುತ್ತಾರೆ. ಆ ಕೆರೆಯಲ್ಲಿ ಇದುವರೆಗೂ ಪ್ರಾಮಾಣಿಕ ವಾದ ಪ್ರಯತ್ನ ಆಗಲಿಲ್ಲ. ಅಂಕಿಅಂಶಗಳನ್ನು ನಾವು ಕೊಡುತ್ತೇವೆ. ಆದರೆ ಅದರ ಅಕೌಂಟ ಬಲಿಟಿ ಯಾರಿಗೆ ಇದೆಯೋ, ಯಾರಿಗಿಲ್ಲವೋ ಗೊತ್ತಿಲ್ಲ. ಕೊನೆಗೆ ಇದರ ಬಗ್ಗೆ ಪರಿಶೀಲನೆ

ಮಾಡುತ್ತೇವೆಂದು ಭರವಸೆ ನೀಡಿದಾಗ, ಬಜೆಟ್‌ನಲ್ಲಿ ಕೆಲವು ಸಂಗತಿಗಳನ್ನು ಹೇಳಿದಾಗ, ಅದನ್ನು ಕಾರ್ಯರೂಪಕ್ಕೆ ತರತಕ್ಕ ಶಕ್ತಿ ಇಲ್ಲದಿದ್ದರೆ ಬಹುಶಃ ಪುಸ್ತಕದಲ್ಲಿ ಓದುವುದರಿಂದ ಬಜೆಟ್‌ಗೆ ಬರತಕ್ಕ ಪ್ರಾಶಸ್ತ್ಯ ಹೋಗುತ್ತದೆ. ನೀವು ನಿರಾವರಿಗೆ ಯಾವ ರೀತಿಯಲ್ಲಿ ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ಅಂಕಿಅಂಶವನ್ನು ಹೇಳುವುದಾದರೆ, 1990-91ರಲ್ಲಿ ಭಾರಿ ಮತ್ತು ಸಣ್ಣ ನೀರಾವರಿ ಎಲ್ಲಾವುಗಳನ್ನು ಸೇರಿಸಿಕೊಂಡು 226 ಕೋಟಿ, 1991-92ರಲ್ಲಿ 379.83 ಕೋಟಿ, 1992-93ರಲ್ಲಿ 509 ಕೋಟಿ 96 ಲಕ್ಷ, 1993-94ರಲ್ಲಿ 846 ಕೋಟಿ ಎಂದು ಪ್ರಾವಿಜನ್ ತೋರಿಸಿದಿ ಆದರೆ ಖರ್ಚಾಗಿರತಕ್ಕದ್ದು 694ಕೋಟಿ. 1994-95ರಲ್ಲಿ 9833 ಕೋಟಿ ಎಂದು ದೊಡ್ಡದಾಗಿ ಹೇಳಿದ್ದೀರಿ ಆದರೆ ಉತ್ತರವನ್ನು ಕೊಡಬೇಕಾಗದರೆ ಮಾರ್ಚ್ ಕೊನೆಯೊಳಗೆ ಅದು 700 ಕೋಟಿಗಳನ್ನು ದಾಟುವುದಿಲ್ಲ. ಅಂದರೆ ಯಾವ ರೀತಿ ನೀರಾವರಿ ಯೋಜನೆಗಳಿಗೆ ಅದ್ಯತೆಯನ್ನು ಕೊಡಬೇಕಾಗಿತ್ತೋ, ಆ ರೀತಿ ಅದ್ಯತೆಯನ್ನು ತಾವು ಕೊಡಲಿಲ್ಲ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ಅಧ್ಯಕ್ಷತೆ, ಲೋಕೋಪಯೋಗಿ ಮಂತ್ರಿಗಳು ಒಂದು ಮಾತನ್ನು ಬಜೆಟ್ ಬಗ್ಗೆ ಮಾತನಾಡಿದ್ದಾರೆ ಅದು ಬಹುಶಃ ಪ್ರಿವಿಲೀಜ್ ಆಗಬಹುದು. ಅವರು ಹಣಕಾಸಿನ ವಿಚಾರದ ಬಗ್ಗೆ ಬಜೆಟ್‌ನ ಬಗ್ಗೆ ಮಾತನಾಡುವಾಗ ಈ ರೀತಿ ಸ್ಟೇಟ್ ಮೆಂಟ್ ಮಾಡುವುದಕ್ಕೆ ಬರುವುದಿಲ್ಲ. ಬಹುಶಃ ಆ ರೀತಿ ಪ್ರಿವಿಲೀಜ್ ಮೋಷನ್‌ನ್ನು ತಂದುಕೊಂಡು ಬಂದರೆ ಈ ಸದನದಲ್ಲಿ ಬೇರೆ ಕಾರ್ಯಕ್ರಮಗಳಾವುದು ನಡೆಯುವುದಿಲ್ಲ. ಆ ರೀತಿ ಮುಂದೆ ಆಗದಂತೆ ಹಣಕಾಸಿನ ಸಚಿವರು ಹೆಚ್ಚು ಗಮನ ಕೊಡುತ್ತೀರೆಂದು ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರಿನಲ್ಲಿ ಜನವರಿ 23ರಲ್ಲಿ ಸಕ್ಕರೆ, ಸಿಮೆಂಟ್ ಮತ್ತು ಗ್ರ್ಯಾನೈಟ್ ಮೇಲೆ ಶುಲ್ಕವೆಂದು ಅವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ರಸ್ತೆ ದುರಸ್ತಿ ಮತ್ತು ನಿರ್ವಹಣೆಗೆ ಸಕ್ಕರೆ, ಸಿಮೆಂಟ್ ಗ್ರ್ಯಾನೈಟ್ ಮತ್ತು ಮರಮುಟ್ಟುಗಳ ಉದ್ಯಮಗಳ ಮೇಲೆ ಶುಲ್ಕ ವಿದಿಸುವ ಉದ್ದೇಶವಿದೆ ಎಂದು ಲೋಕೋಪಯೋಗಿ ಸಚಿವರಾದ ಎಸ್. ಶಿವಾನಂದಗೌಜಲಗಿಯವರು ಹೇಳಿದರು, ಈ ವಿಚಾರ ಸಂಪುಟದ ಮುಂದಿದೆ, ಮುಂದಿನ ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ಸುಗ್ರೀವಾಜ್ಞೆ ಅಥವಾ ಶಾಸನವನ್ನು ತರುವುದರ ಮೂಲಕ ಹೊಸ ಶುಲ್ಕದ ಪದ್ಧತಿಯನ್ನು ಜಾರಿಗೆ ತರಲಾಗುವುದೆಂದು ಹೇಳಿದರು. ಮಂತ್ರಿಗಳು ಆ ರೀತಿ ತಿಳಿಸಿದ್ದಾರೆ. ಈ ಶುಲ್ಕದಿಂದ ವಾರ್ಷಿಕ 50 ಕೋಟಿ ಹೆಚ್ಚಿನ ಆದಾಯ ಬರಲಿದೆ ಇಷ್ಟೇ ಪ್ರಮಾಣದ ಹಣವನ್ನು ರಾಜ್ಯ ಸರ್ಕಾರ ನೀಡುವುದು, ಈ ಪ್ರಸ್ತಾವನೆಗೆ ಮುಖ್ಯಮಂತ್ರಿಗಳಾದ ದೇವೇಗೌಡರ ಸಮ್ಮತವಿದೆ ಎಂದು ಹೇಳಿದ್ದಾರೆ. ಅದು ಸರಿಯೆ? ನೀವು ಬಜೆಟ್‌ನ್ನು ಮಾಡುವ ಸಂದರ್ಭದಲ್ಲಿ ಬಹಿರಂಗ ವಾಗಿ ಬಜೆಟ್‌ಗೂ ಮೊದಲು ಈ ರೀತಿ ತೆರಿಗೆಯನ್ನು ಹಾಕುತ್ತೇವೆಂದು ಜನರು ಅಪನಂಬಿಕೆ ಪಡುತ್ತಾರೆ, ಅವರುಗಳೆಲ್ಲರೂ ನಮ್ಮನ್ನು ಭೇಟಿ ಮಾಡಿ ಎನ್ನುವಂತೆ ಈ ರೀತಿ ಹೇಳುವ ಅರ್ಥ? ಅಥವಾ ಇದರ ಪರಿಣಾಮವೇನಾಗಬಹುದು? ಅದು ನಿಮಗೇ ಬಿಟ್ಟಿರತಕ್ಕದ್ದು. ಬಹುಶಃ ಇದು ಎಷ್ಟರಮಟ್ಟಿಗೆ ಸರಿ, ಸರ್ಕಾರ ಈ ರೀತಿ ಹೇಳಿಕೆಯನ್ನು ಕೊಟ್ಟಾಗ ಅದರ ದುಷ್ಪ ರಿಣಾಮ ಏನಾಗಬಹುದು ಎಂಬುದನ್ನು ತಾವು ಗಮನಿಸುತ್ತೀರೆಂದು ಹೇಳಬಯಸುತ್ತೇನೆ. ಮುಖ್ಯಮಂತ್ರಿಗಳು ಯಡಿಯೂರಪ್ಪನವರ ಮೇಲಿನ ಸಿಟ್ಟಿಗೆ ಏನು ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ. ಅದು ನನ್ನಿಂದ ನಿಲ್ಲಬಾರದು. ಬೇರೆಯಾರಿಂದಲಾದರೂ ಹೇಳಸಬೇಕಾ ಗುತ್ತದೆ, ಅವರಿಗೆ ಯಡಿಯೂರಪ್ಪವೆಂದರೆ ವಾಕರಿಕೆ ಇರುವುದರಿಂದ ಬೇರೆಯವರಿಂದ

ಹೇಳಿಸಬೇಕಾಗುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ರೈತರ ಬಗ್ಗೆ ಅವನ ಕಷ್ಟವೇನೆಂದು ತಮಗೆ ಗೊತ್ತಿದೆ, ರೈತರು ಸಾಲ ಮನ್ನಾ ಆಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ, ಅದಕ್ಕಾಗಿ ನೀವು ಇದಲ್ಲಿ ಹಿಂದೆ ಹೋಗುತ್ತಿದ್ದೀರಿ. ಆ ರೀತಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಭರವಸೆ ನೀಡಿದವರು ವಿ.ಪಿ. ಸಿಂಗ್, ರವರು, ನಾವು ಅದರ ಬಗ್ಗೆ ಹೇಳಲಿಲ್ಲ, ಆದರೆ ಆ ಕೆಲಸವಾಗಲಿಲ್ಲ. ಆದರೆ ಕೊನೆಯ ಪಕ್ಷ ಎಲ್ಲರಿಗೂ ನ್ಯಾಯವನ್ನು ಒದಗಿಸುವ ದೃಷ್ಟಿಯಿಂದ ಇವತ್ತು ಬಡ್ಡಿ ಮನ್ನಾ ಯೋಜನೆ ಪ್ರಾಮಾಣಿಕನಾಗಿ ನಿಮ್ಮ ಕಡೆ ಇರತಕ್ಕಂಥ 115 ಜನ ಸದಸ್ಯರಲ್ಲಿ ಸಭೆಯನ್ನು ಕರೆಯಿರಿ, ಅದರಲ್ಲಿ ಹತ್ತು ಜನರು ನಿಮ್ಮ ಪರವಾಗಿ ಕೈ ಎತ್ತುತ್ತಾರೋ ನೋಡೋಣ. ಇವತ್ತು ಅದೇ ರೈತ ಪಿಎಲ್‌ಡಿ ಬ್ಯಾಂಕ್‌ನಿಂದ, ಗ್ರಾಮೀಣ ಬ್ಯಾಂಕ್‌ನಿಂದ, ಗ್ರಾಮೀಣ ಬ್ಯಾಂಕ್‌ನಿಂದ ಗ್ರಾಮೀಣ ಬ್ಯಾಂಕ್‌ನಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲವನ್ನು ತೆಗೆದುಕೊಂಡಿದ್ದಾನೆ. ನಬಾರ್ಡ್‌ಗೆ ಅಡ್ವಾನ್ಸ್ ಕೊಡುವ ದೃಷ್ಟಿ ಯಿಂದ ಕೇವಲ ಸಹಕಾರಿ ಸಂಘಗಳಿಂದ ತೆಗೆದುಕೊಂಡಿರುವ ಸಾಲದ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದರೆ ಅದು ಧರ್ಮವಲ್ಲ. ದೇವರು ನಿಮಗೆ ಒಳ್ಳೆಯದು ಮಾಡುವುದಿಲ್ಲ. ಅವರು ನಿಮ್ಮನ್ನು ನಂಬಿ ಅಧಿಕಾರವನ್ನು ಕೊಟ್ಟಿದ್ದಾರೆ. ಅವರ ಕೋರಿಕೆಯನ್ನು ಈಡೇರಿಸತಕ್ಕದ್ದು ನಿಮ್ಮ ಜವಾಬ್ದಾರಿ. ಚುನಾವಣೆಯ ಸಮಯದಲ್ಲಿ ಒಬ್ಬೊಬ್ಬರು ಒಂದು ರೀತಿಯಾದ ಸ್ಟೇಟ್ ಮೆಂಟ್ ಕೊಟ್ಟಿದ್ದಾರೆ. ಅವರಿಗೆ ಗೊತ್ತಿಲ್ಲ. ಅದ್ದರಿಂದ ಬಡ್ಡಿ ಮನ್ನಾದ ಅವಧಿಯನ್ನು ಜೂನ್‌ವರೆಗೆ ವಿಸ್ತಾರಿಸಿ ಎಲ್ಲರಿಗೂ ಅನುಕೂಲ ಮಾಡಿಕೊಡಬೇಕೆಂದು ಮುಖ್ಯಮಂತ್ರಿ ಗಳಲ್ಲಿ ಕೇಳಿ ಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ ತಮಗೆ ಪರಿಶಿಷ್ಟಜಾತಿ ಮತ್ತು ಪಂಗಡದವರ ಬಗ್ಗೆ ಕಳಕಳಿ ಬಹಳ ಇದೆ. ಆದರೆ ಬಜೆಟ್‌ನಲ್ಲಿ ಅವರಿಗಾಗಿ ಏನು ಮಾಡಿದ್ದೀರಿ? ಮಹಿಳೆಯರಿಗೆ ಮನೆ ಬೆಳಕು 60 ಲಕ್ಷ, ವಿಧವೆಯರಿಗೆ ಸಶಕ್ತಿ 60 ಲಕ್ಷ, ಅಂಗವಿಕಲರಿಗೆ ಆಧಾರ ಮಾಡುವುದಕ್ಕೆ ಒಂದು ಕೋಟಿ, 200 ಸಮೂದಾಯ ನೀರಾವರಿ ಯೋಜನೆ, ಅಧಕ್ಕಾಗಿ ಹತ್ತು ಕೋಟಿ ಇಟ್ಟಿದ್ದೀರಿ, ಹತ್ತು ಅಶ್ರಮ ಶಾಲೆಗಳಿಗಾಗಿ ಒಂದು ಕೋಟಿ ತೊಂಭತ್ತು ಲಕ್ಷ ಮೂರು ವಿದ್ಯಾರ್ಥಿನಿಲಯಕ್ಕಾಗಿ 10 ಕೋಟಿ 50 ಲಕ್ಷ, 25 ಸಾವಿರ ಅಂಬೇಡ್ಕರ್ ಯೋಜನೆ ವಸತಿ ನಿಲಯ 30 ಕೋಟಿಯಾಗಬಹುದು, ಒಟ್ಟು 52 ಕೋಟಿ ರೂಪಾಯಿಗಳಾಗಬಹುದು. ಹಿಂದುಳಿದ ಅಲ್ಪಸಂಖ್ಯಾತರಿಗೆ, ವರ್ಗದ ನಿಗಮಕ್ಕೆ 25-35 ಕೋಟಿ ಇವೆಲ್ಲವನ್ನು ಸೇರಿ ಇವರಿಗಾಗಿ ನೀವು ಒಟ್ಟು ಇಡುತ್ತಿರತಕ್ಕದ್ದು 80 ಕೋಟಿಯಾಗಬಹುದು. ನಮಗೆ ಎದೆ ನಡುಕಬರತಕ್ಕ ಇನ್ನೊಂದು ಅಂಶವನ್ನು ಇಲಾಖೆಯವರು ಒದಗಿಸಿರುವುದನ್ನು ಹೇಳಿದರೆ ತಮಗೆ ಆಶ್ಚರ್ಯವಾಗಬಹುದು. ಇವತ್ತು ಎಸಿ/ಎಸ್ಟಿ ಜನಾಂಗದವರಿಗೆ ವಿಶೇಷ ಘಟಕ ಯೋಜನೆಯಲ್ಲಿ ರಾಜ್ಯ ಸರ್ಕಾರ ತೆಗೆದಿಟ್ಟ ಹಣವನ್ನು ಯಾವ ರೀತಿ ಖರ್ಚು ಮಾಡಿಲ್ಲವೆಂದರೆ, ಆ ಜನಾಂಗದವರ ಹೆಸರಿನ ಹಣವನ್ನು ಖರ್ಚು ಮಾಡುವುದಕ್ಕೆ ಕಳಕಳಿ ಇಲ್ಲವೆಂದು ಹೇಳಬೇಕಾಗುತ್ತದೆ. ಅದು ಹಿಂದಿನ ಸರ್ಕಾರವಿರಲಿ, ಯಾವುದೇ ಸರ್ಕಾರವಿರಲಿ. ಹಿಂದೆ ಅದೇ ಇಲಾಖೆಯಲ್ಲಿ ಸಾಕಷ್ಟು ಕೆಲಸಮಾಡಿ ಅನುಭವವಿರತಕ್ಕ ಮಾನ್ಯ ಖರ್ಗೆಯವರು ಇಲ್ಲಿ ಇದ್ದಾರೆ, ಬಹುಶಃ ಅವರು ಉತ್ತರವನ್ನು ಕೊಡತಕ್ಕ ಸಮಯದಲ್ಲಿ ಏಕೆ ಖರ್ಚು ಮಾಡಲಿಲ್ಲ ಎನ್ನುವ ಬಗ್ಗೆ ಹೇಳಬಹುದು. ಅವರ ಮೇಲೆ ಅರೋಪ ಮಾಡುವುದಕ್ಕೆ ನಾನು ಈ ಮಾತನ್ನು ಹೇಳುತ್ತಿಲ್ಲ. ಅವರಿಂದ ಮಾಹಿತಿ ನಮಗೆ ಬೇಕಷ್ಟೆ. ವಾಸ್ತವಿಕವಾಗಿ ಮಾಡಿರುವ ವಿಚಾರವೇನು. ಕೇಂದ್ರ ಸರ್ಕಾರದ ಪಾಲನ್ನು ಮಾತ್ರ ಖರ್ಚು ಮಾಡಿದ್ದಾರೆ, ರಾಜ್ಯ

ಸರ್ಕಾರದ ಪಾಲನ್ನು ಖರ್ಚು ಮಾಡಿಲ್ಲ. ಎಷ್ಟು ಹಣವನ್ನು ಖರ್ಚ ಮಾಡಲಿಲ್ಲವೆಂದರೆ 1989-90ರಲ್ಲಿ 1710 ಲಕ್ಷ ಖರ್ಚುಮಾಡಿಲ್ಲ. 1990-91ರಲ್ಲಿ 142 ಲಕ್ಷ ಖರ್ಚುಮಾಡಲಿಲ್ಲ. 1991-92ರಲ್ಲಿ 2837 ಲಕ್ಷ ಖರ್ಚುಮಾಡಲಿಲ್ಲ. 1992-93ರಲ್ಲಿ 1552ಲಕ್ಷ, 1993-94ರಲ್ಲಿ 2175 ಲಕ್ಷ ಒಟ್ಟು ಕಳೆದ 5 ವರ್ಷದಲ್ಲಿ 9438 ಲಕ್ಷ ಅಂದರೆ ಸುಮಾರು ಒಂಭತ್ತೂವರೆ ಕೋಟಿ ರೂಪಾಯಿಗಳನ್ನು ಕಳೆದ 5 ವರ್ಷಗಳ ರಾಜ್ಯ ಸರ್ಕಾರ ಎಸಿ/ಎಸ್‌ಟಿ ಜನಾಂಗದವರ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಏನು ಖರ್ಚು ಮಾಡಬೇಕಾಗಿತ್ತೋ ಆ ಹಣವನ್ನು ಮಾಡದೆ ಆ ಜನಾಂಗದವರಿಗೆ ದ್ರೋಹ ಮಾಡಿ, ತಾವು ಎಷ್ಟರಮಟ್ಟಿಗೆ ಇಲ್ಲಿ ಕುಳಿತುಕೊಂಡು ಆ ಜನಾಂಗದವರ ಬಗ್ಗೆ ಮಾತನಾಡುವುದು ಸರಿಯೆನಿಸುತ್ತದೆ? ಮತ್ತೆ ಇವತ್ತು ನಿಮ್ಮ ತೆರಿಗೆಯ ಭಾರ ಯಾವ ಸ್ಥಿತಿಗೆ ಬಂದಿದೆ, ನಾಳೆಯಿಂದ ಖಾಸಗಿ ಬಸ್ಸುಗಳವರು ಅವರ ವ್ಯವಸ್ಥೆಯಲ್ಲಿ ನಿಲ್ಲಿಸಲು ಹೊರಟಿದ್ದಾರೆ. ನಿಮಗೆ ಇದು ಎಷ್ಟರಮಟ್ಟಿಗೆ ಧರ್ಮವೆಂದು ಕಾಣುತ್ತದೆ? ನೀವು ಕ್ವಾರ್‌ಟರಲಿ ಒಂದು ಸೀಟಿಗೆ ಇಲ್ಲಿ 4000 ರೂ. ಇದ್ದದ್ದು ಈಗ 450 ರೂ. ಮಾಡಿದ್ದೀರಿ. ಪಕ್ಕದ ಯಾವುದೇ ರಾಜ್ಯವನ್ನು ನೋಡಿದರೂ ಸದ ಒಂದು ಸೀಟಿಗೆ 280 ರಿಂದ 300 ರೂ. ಗಳಿದೆ. ತಮಗೆ ಅದರ ಬಗ್ಗೆ ನಾನು ತರಿಸಿಕೊಂಡಿರುವ ಮಾಹಿತಿಯನ್ನು ಕೊಡುತ್ತೇನೆ. ಆದರೆ ಇವತ್ತು ಕೆಎಸ್‌ಆರ್‌ಟಿಸಿ ಬಸ್ಸುಗಳಿಗೇನು ಮಾಡಿದ್ದೀರಿ? ಅದು ಬಿಳಿ ಆನೆಯಾಗಿದೆ, ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಮೇಲಿ, ಕೆಳಗೆ ಯಾವ ರೀತಿ ಕುಳಿತುಕೊಳ್ಳುತ್ತಾರೆ ಮತ್ತು ಅದರ ಬಗ್ಗೆ ಲೆಕ್ಕವನ್ನು ಯಾವ ರೀತಿಯಲ್ಲಿ ಕೊಡುತ್ತಾರೆಂಬುದು ತಮಗೆ ಗೊತ್ತಿದೆ. ಡೂಪ್ಲಿಕೇಟ್ ಬಸ್ ಟಿಕೇಟ್ ಗಳನ್ನು ಪ್ರಿಂಟ್ ಮಾಡುತ್ತಿದ್ದಾರೆ, ಆದರೆ ತಾವು ಕೆಎಸ್‌ಆರ್‌ಟಿಸಿ ನವರಿಗೆ ಮಾತ್ರ ತೆರಿಗೆಯನ್ನು 15 ಪರ್‌ಸೆಂಟನಿಂದ 12 ಪರ್‌ಸೆಂಟ್‌ಗೆ ಇಳಿಸಿದ್ದೀರಿ, ಖಾಸಗಿಯವರು ಮಾತ್ರ ಸ್ಪೇರ್ ಪಾರ್ಟ್ಸ್‌ನ್ನು ಜಾಸ್ತಿ ರೇಟ್‌ನ್ನು ಕೊಟ್ಟು ತರಬೇಕು. ನನ್ನ ಪ್ರಕಾರ ಇತರರಿಗಿಂತ ನಮ್ಮಲ್ಲಿರುವುದೇ ಅತ್ಯಂತ ಜಾಸ್ತಿ ತೆರಿಗೆ ಎಂದುಕೊಂಡಿದ್ದೇನೆ.

ಶ್ರೀ ಸಿದ್ಧರಾಮಯ್ಯ - (ಹಣಕಾಸಿನ ಸಚಿವರು)

ಮಾನ್ಯ ಅಧ್ಯಕ್ಷರೆ, ಖಾಸಗಿ ಬಸ್ಸುಗಳಿಗೂ ಕೆ.ಎಸ್. ಆರ್‌ಟಿಸಿ ಬಸ್‌ಗಳಿಗೂಟ್ಯಾಕ್ಸ್ ಹಾಕುವ ರೀತಿಯಲ್ಲಿ ಬೇರೆ ಬೇರೆ ಕ್ರಮ ಇದೆ. ಕೆ.ಎಸ್. ಆರ್.ಟಿ.ಸಿ ಬಸ್ಸ್‌ಗಳಿಗೆ ಅದು ಬರ ತಕ್ಕಂತಹ ಆದಾಯದ ಮೇಲೆ 15 ಪರ್ಸ್‌ಂಟ್ ಹಾಕತಕ್ಕಂತಹ ಪದ್ಧತಿ ಇತ್ತು. ಈಗಲೂ ಇದೆ. ಖಾಸಗೀ ಬಸ್‌ಗಳಿಗೆ ಒಂದು ಸೀಟಿನ ಮೇಲೆ ಇಷ್ಟು ದುಡ್ಡು ಎಂದು ಒಂದು ಕ್ವಾರ್ಟಲಿ ಹಾಕುತ್ತೇವೆ. ಖಾಸಗೀ ಬಸ್ಸುಗಳಲ್ಲಿ ಆದಾಯ ಎಷ್ಟು ಬರುತ್ತದೆ ಎನ್ನುವುದನ್ನು ಲೆಕ್ಕ ಅವರು ಕೊಡುವುದಕ್ಕಾಗುವುದಿಲ್ಲ. ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಆ ಕಾರಣದಿಂದ ಅದಕ್ಕೂ ಇದಕ್ಕೂ ಹೋಲಿಕೆ ಮಾಡುವುದಕ್ಕಾಗುವುದಿಲ್ಲ.ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ವಿದ್ಯಾರ್ಥಿಗಳಿಗೆ ಮತ್ತು ವೃದ್ಧರಿಗೆ ಕಡಿಮೆ ಬೆಲೆಯಲ್ಲಿ ಬಸ್ಸ್ ಪಾಸ್ ಕೊಡುತ್ತೇವೆ, ಖಾಸಗೀ ಬಸ್‌ಗಳಲ್ಲಿ ಅದು ಇಲ್ಲ. ನಾಲ್ಕು ವರ್ಷಗಳು ಆದವು 91 ನೇ ಇಸವಿಯಲ್ಲಿ ಅದು ಕ್ವಾರ್ಟರ್ಲಿ ಟ್ಯಾಕ್ಸ್ ಹೆಚ್ಚು ಮಾಡಿದ್ದೇವೆ. ನಾಲ್ಕು ವರ್ಷದ ನಂತರ ಒಂದು ಸೀಟಿಗೆ ನಾಲ್ಕು ರೂಪಾಯಿ ಹೆಚ್ಚು ಮಾಡಿರತಕ್ಕಂಥಾದ್ದು. ತಮಿಳುನಾಡು ಮತ್ತು ಕೇರಳರಾಜ್ಯಗಳಿಗೆ ಸಮೀಪವಾಗಿರುವಂತಹ

ರೀತಿಯಲ್ಲಿ ಮಾಡಿದ್ದೇವೆ. ಆದ್ದರಿಂದ ಬಹಳ ಹೆಚ್ಚಿಗೆ ಎನ್ನತಕ್ಕಂಥದ್ದು ಸರಿಯಲ್ಲ. ನಿಮಗೆ ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಖಾಸಗೀಬಸ್ಸುಗಳು ಮತ್ತು ಕೆ.ಎಸ್. ಆರ್.ಟಿ.ಸಿ ಬಸ್ಸುಗಳಿಗೆ ಹೋಲಿಕೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರೆ ಇದು ಒಂದು 400 ರಿಂದ 450 ಮಾಡಿದಿರಿ ನಾಳೆಯಿಂದ ನಾವು ನಿಮಗೆ ಒಂದು ದೊಡ್ಡ ಲೀಸ್ಟ್ ಕೊಡುತ್ತೇನೆ. ಇವತ್ತು ನಿಮ್ಮ ಕೆ.ಎಸ್.ಆರ್.ಟಿ.ಸಿ ಬಸ್‌ನಲ್ಲಿ ಓಡಾಡಿದವರಿಗೆ ಏನು ದರ ಇದೆ, ಖಾಸಗೀ ಬಸ್‌ಗಳಲ್ಲಿ ಏನು ದರ ಇದೆ. ಒಂದಲ್ಲ ಒಂದು ಊರಲ್ಲಿ ಖಾರಗೀಬಸ್‌ಗಳಲ್ಲಿ ಕಡಿಮೆ ಇದ್ದು, ಕೆ.ಎಸ್.ಆರ್.ಟಿಸಿ ಬಸ್‌ನಲ್ಲಿ ಜಾಸ್ತಿ ಇಲ್ಲ ಎನ್ನುವ ಒಂದು ಉದಾಹರಣೆಯನ್ನು ನೀವು ಕೊಡಿ. ಏಕೆಂದರೆ ನೀವು ಹಳ್ಳಿಯಿಂದ ಬಂದವರು ಗ್ರಾಮಾಂತರ ಪ್ರದೇಶಗಳಲ್ಲಿ ಆ ರೂಟ್ಸ್‌ನೋಡಿಕೊಂಡು ಬನ್ನಿ ಯಾವುದಾದರೂ ಆ ಹಳ್ಳಿಯಲ್ಲಿ ಓಡಾಡಿಕೊಂಡು ವಾಪಸ್ ಬಂದರೆ ಅವರು ತಂದೆ ಆದಾಯವೆಲ್ಲಾ ಆ ಬಸ್ ರಿಪೇರಿಗೆ ಖರ್ಚಾಗುತ್ತದೆ. ಇದು ಒಂದು ಎರಡನೆಯದು ಪರಿಣಾಮ ಯಾರ ಮೇಲೆ ಆಗಿದೆ ಯಾರು ಸಾಮಾನ್ಯ ಜನ ನಿತ್ಯ ಹೊಟ್ಟೆಪಾಡಿಗೋಸ್ಕರ ಓಡಾಡುತ್ತಾರೋ ಅವರ ಮೇಲೆ ದುಷ್ಪರಿಣಾಮವಾಗುತ್ತದೆ. ಅದಕ್ಕೋಸ್ಕರ ಅದಷ್ಟುಬೇಗ ಹಿಂದಕ್ಕೆ ತಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಏನು ಬಹಳ ದೊಡ್ಡದು ಬರುವುದಿಲ್ಲ. ಈಗ ಪರೀಕ್ಷೆ ಸಮಯ, ವಿದ್ಯಾರ್ಥಿಗಳು ಹೋಗಿ ಬರುವ ಸಂದರ್ಭದಲ್ಲಿ ಸಾಮಾನ್ಯ ಜನ ಓಡಾಟ ಮಾಡುವ ಸಂದರ್ಭದಲ್ಲಿ ದಕ್ಷಿಣ ಕನ್ನಡ, ಶಿವಮೊಗ್ಗ, ಬೇರೆ ಎಲ್ಲಾ ಕಡೆ ಇದಕ್ಕೆ ಸತ್ಯಾಗ್ರಹ ಮಾಡುವಂಥಾದ್ದು, ಮ್ಯಾನೇಜ್‌ಮೆಂಟ್‌ನವರಿಗೆ, ಖಾರಗಿ ಮಾಲೀಕರ ಸಂಘದವರಿಗೆ ಕರಯಿಸಿ ಮಾತನಾಡಿ. ಅದೇ ರೀತಿ ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಯಾರು ವಿದ್ಯಾರ್ಥಿಗಳು ಪ್ರವಾಸ ಹೋಗಬೇಕಾದರೂ, ಮದುವೆ ಮುಂಜಿಗೆ ಬಸ್ ತೆಗೆದುಕೊಂಡು ಹೋಗಬೇಕು ನಿಮಗೆ ತೊಂದರೆ ಏನು? ಇವತ್ತು ಎಲ್ಲಾ ಮಲ್ಟಿ ನ್ಯಾಷನಲ್ ಕಂಪನಿಯವರನ್ನು ಕರೆಸಿಕೊಂಡು ವಿಮಾನ ನಿಲ್ದಾಣ ಮಾಡುವುದಕ್ಕೆ ಹೊರಟ್ಟಿದ್ದೀರಿ ಅಥವಾ ರಸ್ತೆ ಹೊಡೆಸಿದಿರಿ, ಎಲ್ಲಾವನ್ನು ನಿಮ್ಮ ಕಪಿ ಮುಷ್ಠಿಯಲ್ಲಿ ಇಟ್ಟುಕೊಳ್ಳುವಂತಹ ಒಂದು ಪ್ರಯತ್ನ ಏನು ಇದೆ ಅದರಿಂದ ನೀವು ಏನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಬಹುಶಃ ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಆ ಕಡೆ ಗಮನ ಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರು ಮಜಾ ಜನರಿಗೆ ಒಂದು ರೀತಿಯ ತಲೆ ಕಂದಾಯವನ್ನು ಇವರು ಹಾಕಿದ್ದಾರೆ ಪೆಟ್ರೋಲ್ ಅವರಿಗೆ ಮಾತ್ರ 75 ಪೈಸೆ.

ಶ್ರೀ ಎಲ್. ಆರ್:- ಶ್ರೀ ಶಿವರಾಮೇಗೌಡ ಬಸ್ ಓಡಿಸದೆ ಹೋದರೆ ಬಹಳ ತೊಂದರೆಯಾಗುತ್ತದೆ. ಹಣಕಾಸಿನ ಸಚಿವರು ಯಡಿಯೂರಪ್ಪನವರು ಹೇಳಿರತಕ್ಕಂತಹ ಮಾತನ್ನು ಸ್ವಲ್ಪ ಗಮನ ಹರಿಸಿ ಕೇಳಲಿ.

ಶ್ರೀ ಅರಗ ಜ್ಞಾನೇಂದ್ರ:- ನಾಳೆ ಯಿಂದ ಸಂಪೂರ್ಣ ಇದೇ ಅರ್ಧ ರಾಜ್ಯ ಸ್ಥಗಿತ ಆಗಿ ಹೋಗುತ್ತದೆ. ಜನಜೀವನದ ಓಡಾಟ ಸ್ಥಗಿತವಾಗಿ ಹೋಗುತ್ತದೆ. ದಯಮಾಡಿ ಮಾನ್ಯ

ಹಣಕಾಸಿನ ಸಚಿವರು ಅವರ ಜೊತೆ ಮಾತನಾಡಿ ಏನಾದರೂ ಮಾಡಬೇಕು. ಏಕೆಂದರೆ ಯುಗಾದಿ ಹಬ್ಬದ ಪ್ರಯುಕ್ತ ಜನರ ಓಡಾಟ ನಿಂತು ಹೋಗುತ್ತದೆ. ದಯಮಾಡಿ ಖಾಸಗೀ ಬಸ್‌ಗಳ ಮಾಲೀಕರ ಜೊತೆ ಮಾತನಾಡಿ ಏನಾದರೂ ಹೊಂದಿಕೆ ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಅವರು ಈ ತರಹ ಚಳುವಳಿ ಮಾಡುತ್ತೇವೆಂದು ಸರ್ಕಾರಕ್ಕೆ ತಿಳಿಸಿಲ್ಲ. ಸರ್ಕಾರಕ್ಕೆ ತಿಳಿಸದೆ ಅವರು ಹೇಳತಕ್ಕಂತಹ ವಿಚಾರಗಳು ಜನರನ್ನು ತಪ್ಪು ದಾರಿಗೆ ಎಳೆಯತಕ್ಕಂತಹ ರೀತಿಯಲ್ಲಿ ಇವೆ. ತೆರಿಗೆ ಹೆಚ್ಚಾಯಿತು ಎಂದು ಹೇಳುತ್ತಾರೆ. ಬಿಡಿ ಭಾಗಗಳು ಜಾಸ್ತಿ ಆಯಿತು ಎಂದು ಹೇಳುತ್ತರೆ. ತೆರಿಗೆ ಏನೂ ಹೆಚ್ಚು ಕಡಿಮೆ ಆಗಿಲ್ಲ. ಕೊನೆಯ ಹಂತ ತೆರಿಗೆ ತೆಗದು ಮೊದಲನೆಯ ಹಂತಕ್ಕೆ ಹಾಕಿದ್ದೇವೆ. ಬಿಡಿ ಭಾಗಗಳಿಗೆ ಫಸ್ಟ್ ಪಾಯಿಂಟ್ ನಲ್ಲಿ ಮತ್ತು ಲಾಸ್ಟ್ ಪಾಯಿಂಟ್‌ನಲ್ಲಿ, ಲಾಸ್ಟ್ ಪಾಯಿಂಟ್‌ನಲ್ಲಿ ಟ್ಯಾಕ್ಸ್ ತೆಗೆದು ಹಾಕಿ ಮೊದಲನೇ ಪಾಯಿಂಟ್‌ನಲ್ಲಿ ಹಾಕಿದ್ದೇವೆ. ಬಿಡಿ ಭಾಗಗಳಿಗೆ ಹಾಕಿಲ್ಲ. ನಾಲ್ಕು ವರ್ಷಗಳ ಹಿಂದೆ 1:4 ಎಂದು ಮಾಡಿದ್ದು, 91ರಿಂದ ಈಚೆಗೆ ಅದು ಹೆಚ್ಚು ಮಾಡಿಲ್ಲ ಇವತ್ತು ಇನ್‌ಫ್ಲೇಷನ್ ಎಷ್ಟಾಗಿದೆ. ಇದನ್ನು ಗಣನೆಗೆ ತೆಗೆದುಕೊಂಡರೆ, ಅದು ಬಹಳ ದುಬಾರಿ ಆಗಿ ಹೋಗಿದೆ. ಬಸ್ ಮಾಲೀಕರ ಮೇಲೆ ದೊಡ್ಡ ಹೋರೆ ಆಗಿದೆ, ಸರ್ಕಾರ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎನ್ನುವುದು ಸರಿಯಾದ್ದಲ್ಲ. ಅವರು ಬಂದು ಮಾತನಾಡುವುದಕ್ಕೆ ನಮ್ಮದು ಏನೂ ತಕರಾರು ಇಲ್ಲ. ಮಾತನಾಡಬೇಡಿ ಎಂದು ನಾವು ಹೇಳಲಿಲ್ಲ. ಸರ್ಕಾರಕ್ಕೆ ತಿಳಿಸಿಯೂ ಇಲ್ಲ ಅವರ ಪಾಕಿಗೆ ಅವರೇ ಚಳುವಳಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರ ಸರ್ಕಾರ ಇದೆ. ನಾಳೆಯಿಂದ ತಾವು ಬಹುಶಃ ಪತ್ರಿಕೆಯನ್ನು ನಂಬುತ್ತೀರೆಂದು ಕೊಂಡಿದ್ದೇನೆ. ನಾಳೆಯಿಂದ ಖಾಸಗೀಬಸ್ ಸಾರಿಗೆ ಮುಷ್ಕರ ಇದೆ ಎಂದು ಬಂದಿದೆ. ಜನ ತೊಂದರೆಗೆ ಒಳಗಾಗುತ್ತಾರೆ. ಇದನ್ನು ಈಗಲೇ ಎಚ್ಚರಿಕೆಯಿಂದ ಕರೆಯಿಸಿ ಅದರ ಕಷ್ಟ ಸುಖಗಳನ್ನು ಕೇಳಬೇಕಾಗುತ್ತದೆ. ಇದು ಸರ್ಕಾರದ ಧರ್ಮ ಇದೆ. ಅದನ್ನು ನೀವು ಕಸ್‌ವಿನ್ಸ್ ಆಗಿ ಕಡಿಮೆ ಮಾಡುವ ಪ್ರಯತ್ನ ಮಾಡಿ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ ನಾಳೆಯಿಂದ ಸಾರ್ವಜನಿಕರಿಗೆ ಈ ರೀತಿ ತೋಂದರೆಯಾಗುತ್ತದೆ, ಇದರ ಬಗ್ಗೆ ವಿಶೇಷವಾದ ಗಮನ ಕೊಡಬೇಕು, ಸರ್ಕಾರ ಬೇರೆ ಸಂದರ್ಭದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗಿಲ್ಲ, ತಾವು ಅವರನ್ನು ಕರೆಯಿಸಿ ಮಾತನಾಡಿ ಎಂದು ಸಲಹೆಯನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಕೊಡುತ್ತೇನೆ. ಬೆಂಗಳೂರಿನವರು ಏನು ತಪ್ಪು ಮಾಡಿದ್ದದು, ಅವರಿಗೆ ಏಕೆ ಈ ರೀತಿ ತಲೆ ಕಂದಾಯ ಹಾಕಿ 55 ಕೋಟಿ ರೂಪಾಯಿ ಸುಲಿಗೆ ಮಾಡುವಂತಹ ಒಂದು ಹೊಸ ಯೋಜನೆಯನ್ನು ಮಾಡುತ್ತಿದ್ದೀರಿ? ಪೆಟ್ರೋಲ್‌ಗೆ ಒಂದು ಲೀಟರ್‌ಗೆ 75 ಪೈಸೆ ಜಾಸ್ತಿ, ಒಂದು ಲೀಟರ್ ಡೀಸಲ್‌ಗೆ 10 ಪೈಸೆ ಜಾಸ್ತಿ. ಎಲ್ಲಾ ವಸ್ತುಗಳ ಮೇಲೆ ಐದು ಪರ್ಸೆಂಟ್ ಹೆಚ್ಚಿನ ವಾಣಿಜ್ಯ ತೆರಿಗೆ. ನಾನು ಕೇಳುವುದು ರಾಜ ಮಹಾರಾಜರ ಕಾಲದಲ್ಲಿ ಸಿಟ್ಟು ಬಂದಾಗ ಏನೋ ತಪ್ಪು ಮಾಡಿದವರಿಗೆ ಈ ರೀತಿ ತಲೆ ಕಂದಾಯ ಹಾಕುತ್ತಿದ್ದರು. ಈ ತರಹ ಪರಿಸ್ಥಿತಿ ಇದೆ. ತಾವು ನೋಡಿ ಯಾವ ರೀತಿ ತಪ್ಪು ವಿವರಗಳನ್ನು ಕೊಟ್ಟಿದ್ದೀರಿ.

H.N. Nanje Gowda: I do not know. Government should seriously think it over. Suppose somebody goes to the Court, ಬೆಂಗಳೂರಿಗೆ ಸೆಪರೇಟಾಗಿ ಹಾಕಿ 15 ರಿಂದ 18 ಕಿ.ಮಿ ಜ್ಯೂರೀಡಿಕ್ಷನ್ ಹಾಕಿ, ಅದರ ಒಳಗೆ ಪೆಟ್ರೋಲ್ ಹಾಕಿಸಿದರೆ, ಡೀಸಲ್ ಹಾಕಿಸಿದರೆ/ಜಾಸ್ತಿ ದುಡ್ಡು ಕೊಡಬೇಕು. ಅದರ ಆಚೆ ಅಂದರೆ ಕೊಡುವುದಿಲ್ಲ ಅಂತ ಮಾಡಿದಿರಿ attractions of contitution will and the law. discription ರಾಜ್ಯಾಂಗದ ಉಲ್ಲಂಘನೆ ಆಗುತ್ತದೆ ಅನ್ನುವುದು ಅಲ್ಲ. ಜಾಸ್ತಿಯ ಕಂದಾಯ ಹೀಗಿನ ಕಾಲದಲ್ಲಿ ತಪ್ಪು ಮಾಡಿದವರಿಗೆ ಹಾಕುತ್ತಿದ್ದರು. ಸೌಲಭ್ಯಗಳನ್ನೂ ಒದಗಿಸತಕ್ಕಂತಹ ದೃಷ್ಟಿಯಿಂದ ರೀಸನಬಲ್ ಟ್ಯಾಕ್ಸ್‌ಗಳನ್ನು ಹಾಕತಕ್ಕಂಥದ್ದು ಕಾನ್‌ಸ್ಟಿಟ್ಯೂಷನ್ ಉಲ್ಲಂಘನೆ ಆಗುತ್ತದೆಯೊ?

ಶ್ರೀ ಬಿ.ಎಸ್.ಯುಡಿಯೂರಪ್ಪ:- ನಾಳೆಯಿಂದ ಒಬ್ಬ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗೂ ಡಿಸಿಕ್ರಿಮಿನೇಷನ್ ಆಗುತ್ತದೆ ಅನ್ನುವ ಆಧಾರದ ಮೇಲೆ ಕೋರ್ಟಿನವರು ಛೀಮಾರಿ ಹಾಕಿದ ಮೇಲೆ ನೀವು ವಾಪಸ್ ತೆಗೆದುಕೊಳ್ಳುವುದಿದ್ದಲೇ ನಮ್ಮದು ಏನೂ ಅಭ್ಯಂತರವಿಲ್ಲ. ಇನ್ ಅಡ್‌ವಾನ್ಸ್ ನಾನು ಹೇಳುತ್ತಿದ್ದೇನೆ ನೀವು ಹೋಗುತ್ತಿರುವ ದಾರಿ ಸರಿಯಲ್ಲ. ಈ ಚುನಾವಣೆ ಇನ್ನು 4-5 ವರ್ಷಗಳು ಇದೆ ಪರವಾಗಿಲ್ಲ ಎಂದು ಹೇಳಿ ಬೆಂಗಳೂರು ನಗರದ ಜನತೆಯನ್ನು ಈ ರೀತಿ ಗೋಳು ಹೊಯ್ದಿಕೊಳ್ಳಬೇಡಿ, ಬೆಂಗಳೂರು ನಗರದ ಜನರಿಗೆ ಏನು ಕೊಟ್ಟಿದ್ದೀರಿ, ಸರಿಯಾಗಿ ಕುಡಿಯುವುದಕ್ಕೆ ನೀರಿಲ್ಲ, ಸರಿಯಾದ ರಸ್ತೆ ಇಲ್ಲ ಗುಂಡಿಗಳಲ್ಲಿ ಓಡಾಡತಕ್ಕಂತಹ ಪರಿಸ್ಥಿತಿ ಇದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಯಾವುದೇ ಸಲವತ್ತುಗಳನ್ನು ಕೊಡದೆ, 100ಕ್ಕೆ 10 ಜನರಿಗೆ ಉಪಯೋಗವಾಗುತ್ತದೆ ಎಂದು ಹೇಳಿ ಸಾಮಾನ್ಯ ಜನಕ್ಕೆ, ಸೈಕಲ್‌ನಲ್ಲಿ ವಿಧಾನ ಸೌಧಕ್ಕೆ ಬರುವವನು ತೆರಿಗೆ ಕೊಡಬೇಕೆ? ಯಾವುದೋ ಒಂದು ವಾಹನ ಇಟ್ಟುಕೊಂಡು ದಿನಕ್ಕೆ ಒಂದು ಲೀಟರ್ ಪೆಟ್ರೋಲ್ ಹಾಕಿಸಿಕೊಂಡು ಬಂದು ಅವರ ಹೊಟ್ಟೆಪಾಡಿಗೆ ಹೋಗುತ್ತಾನಲ್ಲ, ಅವನು ಏನು ಮಾಡಬೇಕು. ಸಮಗ್ರವಾಗಿ ಸಾಮಾನ್ಯ ಜನಗಳ ಚಿಂತೆ ಮಾಡದೆ ಅದರ ಬದಲು ಎಲ್ಲಿ ಸೋರಿ ಹೋಗುತ್ತಿದೆ ಅಲ್ಲಿ ಟೈಟ್ ಮಾಡಿ. ಬಹುಶಃ ನಮ್ಮ ಬೆಂಗಳೂರಿನಲ್ಲಿ ತಾವು ಲೆಕ್ಕ ಕೊಟ್ಟಿರುವ ಪ್ರಕಾರ ಏಳು ಲಕ್ಷ 71 ಸಾವಿರ ವಾಹನಗಳು ಇವೆ. ಐದು ಲಕ್ಷ ಲೀಟರ್ ಪೆಟ್ರೋಲ್ ಮಾರುತ್ತಿದ್ದಾರೆ ಎಂದು ಇಟ್ಟು ಕೊಳ್ಳೋಣ. ಒಂದು ದಿನಕ್ಕೆ ಎರಡು ಲೀಟರ್ ಪೆಟ್ರೋಲ್ ತೆಗೆದುಕೊಳ್ಳಿ ಎಲ್ಲಾ ಸೇರಿ 10 ಲಕ್ಷ ಲೀಟರ್ ಆಯಿತು. ಒಂದು ದಿನಕ್ಕೆ 10 ಲಕ್ಷ ಲೀಟರ್ ಅಂದರೆ ಒಂದು ತಿಂಗಳಿಗೆ ಅದರಿಂದ ಬರುವ ಹೆಚ್ಚಿನ ಆದಾಯ ಮೂರು ಕೋಟಿಯಾಗುತ್ತದೆ. ಅಲ್ಲಿಗೆ ಒಂದು ವರ್ಷಕ್ಕೆ ಮೂವತ್ತಾರು ಕೋಟಿ ಆಗುತ್ತದೆ. ನೀವು 30 ಕೋಟಿ ಆದಾಯ ಬರುತ್ತದೆ ಎಂದು ತೋರಿಸಿದ್ದೀರಿ. ಅದೇ ರೀತಿ ವಾಣಿಜ್ಯ ತೆರಿಗೆ ಮೇಲೆ 5 ಪರ್ಸಂಟ್ ಸೆಸ್ ಬೇರೆ ಹಾಕಿದ್ದೀರಾ, ದಯಮಾಡಿ ಈ ಒಂದು ಹೊರೆಯನ್ನು ಬಿದ್ದವರ ಮೇಲೆ ಮತ್ತೆ ಹೇರುತ್ತಿದ್ದೀರಿ. ಇದು ಬಹುಶಃ ಸರಿಯಲ್ಲ, ಅದನ್ನು ವಾಪಸ್ ತೆಗೆದುಕೊಳ್ಳಬೇಕು ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಎರಡನೆಯದು ಮೈದ ರವೆ ಮೇಲೆ ಮಾತನ್ನು ಹೇಳುತ್ತೇನೆ. ಎರಡನೆಯದು ಮೈದ ರವೆ ಮೇಲೆ ಮಾರಾಟ ತೆರಿಗೆಯನ್ನು ಹಾಕಿದ್ದೀರಾ, ಬ್ರೆಡ್ಡು, ಬಿಸ್ಕತ್ತು, ಸಾಮಾನ್ಯ ಜನ, ಸಾಮಾನ್ಯ ಮಕ್ಕಳು ಆಸ್ಪತ್ರೆಯಲ್ಲಿ ಉಪಯೋಗ ಮಾಡತಕ್ಕಂಥದ್ದು ಇವತ್ತು ಅಕ್ಕಿಗೆ ಸಬ್ಸಿಡಿ

ಕೊಡುತ್ತೀದ್ದೀರಿ, ಗೋದಿ ಹಿಟ್ಟಿನಲ್ಲಿ ಚಪಾತಿ ಮಾಡುವವರ ಮೇಲೆ ತೆರಿಗೆ ಹಾಕುತ್ತೀರಿ, ಯಾವ ಧರ್ಮ? ಇದು ಯಾವ ನೀತಿ ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಇದನ್ನು ವಾಪಸ್ ತೆಗೆದುಕೊಳ್ಳಬೇಕು ಇಲ್ಲ ಅಂದರೆ ಮಿಲ್‌ಗಳು ಬಾಗಿಲು ಹಾಕತಕ್ಕಂತಹ ಪರಿಸ್ಥಿತಿ ಬರಬಹುದು. ಹಿಂದೆ ದೇಶಪಾಂಡೆಯವರು ಇಲ್ಲಿದ್ದರು, ಈಗ ಆ ಕಡೆ ಇದ್ದಾರೆ. ನಾನು ಇಲ್ಲಿ ಕುಳಿತಿದ್ದೆ ಹಿಂದಿನ ಸರ್ಕಾರ ಅದನ್ನು ಹಾಕುವ ಪ್ರಯತ್ನ ಮಾಡಿದಾಗ ಅವರು ಹೋರಾಟ ಮಾಡಿ ಹಾಕುವುದನ್ನು ವಾಪಸ್ ತೆಗದುಕೊಂಡರು.ತಾವು ರೆಕಾರ್ಡ್ ತೆಗೆಸಿ ನೋಡಿ. ಈಗ ನೀವು ಅದೇ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ, ಇದು ಧರ್ಮಅಲ್ಲ. ಸ್ವಲ್ಪ ಈ ಕಡೆ ತಾವು ಗಮನವನ್ನು ಕೊಡಬೇಕೆಂದು ಹೇಳವುದಕ್ಕೆ ಇಚ್ಚೆ ಪಡುತ್ತೇನೆ. ಬೆಲ್ಲ ತೆಗೆದುಕೊಳ್ಳುವಂತಹ ಬಡವನ ಮೇಲೆ ಕಸ್ಟಮ್ ವಿಧಿಸಿದಿರಿ. 1.5 ಟ್ಯಾಕ್ಸ್ ಇದ್ದುದು ನೀವು ಎರಡು ಪರ್ಸೆಂಟ್‌ಗೆ ಮಾಡಿದ್ದೀರಿ. ದಯ ಮಾಡಿ ಒಂದು ಪರ್ಸೆಂಟ್ ನಾನು ಗೋಕಾಕ್‌ಗೆ ಹೋಗಿದ್ದೆ ವ್ಯಾಪಾರಸ್ತರು ನನಗೆ ಸಿಕ್ಕಿದ್ದರು, ನಮ್ಮಲ್ಲಿ ರತಕ್ಕ ಜಿಲ್ಲ ಗೋಕಾಕ್‌ಗೆ ಬೇರೆ ಕಡೆ ಹೋಗುತ್ತಿದೆ. ದಯಮಾಡಿ ಇದಕ್ಕೋಸ್ಕರ ನೀವು ಒಂದು ಪರ್ಸೆಂಟ್ ಏಕೆಂದರೆ, ಗೋದಿಯಿಂದ ತಯಾರಾಗುವ ಹಿಟ್ಟು, ಮೈದ, ರವೆ ಅವುಗಳೆಲ್ಲದರ ಮೇಲೆ ನಾಲ್ಕು ಪರ್ಸೆಂಟ್ ಹಾಕುತ್ತಿದ್ದೀರಿ; ನಾನು ಈಗಾಗಲೇ ತಮಗೆ ಹೇಳಿಬಿಟ್ಟಿದ್ದೇನೆ, ಜನ ನಮ್ಮನ್ನು ಆ ಕಡೆ ಕೂರಿಸುವುದನ್ನು ಬಿಟ್ಟು ಈ ಕಡೆ ಕೂರಿಸಿ ಬಿಟ್ಟಿದ್ದಾರೆ. ನಾನು ಜನಗಳಿಗೆ ಅವತ್ತೇ ಹೇಳಿದೆ ಏನೇನೋ ಅಸತ್ಯ ಎಲ್ಲ ಹೇಳಿಕೊಂಡು ಅಧಿಕಾರದಲ್ಲಿ ನೀವು ಇವತ್ತು ಕೂಳಿತಿದ್ದೀರಿ.

03-50 ಪಿ.ಎಂ.

ಯಾರು ಸ್ವಾಮಿ ಮಾಡುತ್ತಾರೆ, ಸೆಕೆಂಡ್ ಹ್ಯಾಂಡ್ ವೆಹಿಕಲ್ ಇದೆಯಲ್ಲ ಇದರ ಮೇಲೆ ಇವರು 2 ಪರ್ಸೆಂಟ್ ಹೂಸ ತೆರಿಗೆ ಹಾಕಿದ್ದೀರಿ. ಇನ್ನು ಹುಡುಕಿ ಸ್ವಾಮಿ, ಇನ್ನು ಏನಾದರೂ ಇದಿಯೇ ಎಂದು. ಇದು ನಿಮಗೆ ಗೌರವ ತರುವ ಸಂಗತಿ ಅಲ್ಲ.

ಶ್ರೀ ಸಿದ್ದರಾಮಯ್ಯ :- ಅದು ಮಹಾರಾಷ್ಟ್ರದಲ್ಲಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಇದು ಯಾವ್ಯಾವ ರಾಜ್ಯದಲ್ಲಿ ಇದೆ ಎಂದು ಹುಡುಕಿಕೊಂಡು ಬರುತ್ತಿದ್ದೀರಿ. ಮತ್ತೇ ನೀವು ಇಂಡಿಯಿಂದ ಹೊರತೆಗೆದ ಸಲ್ವೆನ್ ರಿಫೈಂಡ್ ಆಯಿಲ್ ಏನು ಬರುತ್ತದೆ ಅದಕ್ಕೆ ಆರೂ ಮುಕ್ಕಾಲು ಪರ್ಸೆಂಟ್ ತೆರಿಗೆ ಹಾಕುತ್ತಿದ್ದೀರಿ. ಆ ಹಿಂಡಿಯಿಂದ ತೆಗೆದಂತಹ ಎಣ್ಣೆಗೆ.

ಶ್ರೀ ಸಿದ್ಧರಾಮಯ್ಯ:- ಅದು ಆರೂ ಮುಕ್ಕಾಲು ಪರ್ಸೆಂಟ್ ಅಲ್ಲ 6 ಪರ್ಸೆಂಟ್.

ಶ್ರೀ ಬಿ.ಎಸ್. ಯಡಿಯೂರಪ್ಪ:- ರಿಫೈಂಡ್ ಎಣ್ಣೆಗೆ ವಿಧಿಸುವ ಶೇಕಡ 4 ತೆರಿಗೆಯನ್ನು ಮೇಲ್ಕಂಡ ಆಯಿಲ್ ಎಕ್ಸ್‌ಟ್ರಾಕ್ಟ್ 2 ಮುಕ್ಕಾಲು ಪರ್ಸೆಂಟ್ ಒಟ್ಟು ಆರು ಮುಕ್ಕಾಲು ಪರ್ಸೆಂಟ್ ಎಂದು ಹೇಳುತ್ತಿದ್ದೀರಿ. ದಯಮಾಡಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನವನ್ನು ಸರ್ಕಾರ

ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ ಕೊನೆಗೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಅವರು ನಮ್ಮದು ಪಾರದರ್ಶಕ ಸರ್ಕಾರ ಎಂದು ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಾನು ಕೆಲವು ವಿವರಗಳನ್ನು ಕೇಳಿದ್ದೇನೆ. ರಾಷ್ಟ್ರೀಯ ಕ್ರೀಡಾ ಗ್ರಾಮದ ನಿರ್ಮಾಣಕ್ಕೆ ಹುಡ್ಕೋಗೆ ಕೊಟ್ಟಿರುವ ಡಿಸೈನ್ ಪ್ರತಿ ಮತ್ತು ಸ್ಪೆಸಿಫಿಕೇಷನ್ ವಿವರ ನಾನು ಕೇಳಿದ್ದೇನೆ. ಹುಡ್ಕೋಗೆ ಕೊಟ್ಟಿರುವ ಡಿಸೈನ್ ಮತ್ತು ಸ್ಪೆಸಿಫಿಕೇಷನ್ ಆಧಾರದ ಮೇಲೆ ಕರ್ನಾಟಕ ಗೃಹಮಂಡಳಿ ತಯಾರು ಮಾಡಿರುವ ಅಂದಾಜು ವೆಚ್ಚದ ವಿವರನ್ನು ನಾನು ಕೇಳಿದ್ದೇನೆ. ನಾಗಾರ್ಜುನ ಕನ್ಸ್‌ಟ್ರಕ್ಷನ್ ಕಂಪನಿಗೆ ಮತ್ತು ಸಿರ್‌ಸ್ಕೆ ಅಂಡ್ ಕಂಪನಿ ಇಂಜಿನಿಯರಿಂಗ್ ಪ್ರಾಜೆಕ್ಟ್ ಲಿಮಿಟೆಡ್‌ಗೆ 244 ಕೋಟಿ 12 ಲಕ್ಷ ಏನು ನೀವು ವರ್ಕ್ ಎಂಟ್ರಿಕ್ಟ್ ಮಾಡಿದ್ದೀರಿ, ಅದಕ್ಕೆ ಶೇಕಡ 42.71 ಹೆಚ್ಚು ಗುತ್ತಿಗೆ ಕೊಟ್ಟಿದ್ದೀರಿ, ಏಕೆ ಈ ಸಂದರ್ಭ ನಿರ್ಮಾಣವಾಯಿತು ಎನ್ನುವ ಮಾತನ್ನು ನಾನು ಹೇಳಿದ್ದೇನೆ ಮತ್ತು ಇವರಿಗೆ ಮಾತು ಕೊಟ್ಟು, ಬೇರೆ ಅರ್ಜಿಯನ್ನು ತಿರಸ್ಕಾರ ಮಾಡುವುದಕ್ಕೆ ಏನು ಕಾರಣ, ನಿಮ್ಮ ಟೆಕ್ನಿಕಲ್ ಕಮಿಟಿಯಲ್ಲಿ ಏನು ಆಯಿತು ಎಂದು ಕೇಳಿದ್ದೇನೆ. ಇದು ರಾಜ್ಯದ ಮನೆ ಮನೆಯಲ್ಲೂ ಚರ್ಚೆಯಾಗುತ್ತಿದೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಜವಾಬ್ದಾರಿ ಇದೆ. ಇದು ಸಿಕ್ರೇಟ್ ಡಾಕ್ಯುಮೆಂಟ್ ಅಲ್ಲ. ನಾನು ಎಸ್ಟಿಮೇಟ್‌ನ್ನು ಕೇಳಿದ್ದೇನೆ. ಅದು ಸಿಕ್ಕಿದರೆ ಯಾವರೀತಿ ಸುಮಾರು 220 ಕೋಟಿ ರೂಪಾಯಿ ಅವ್ಯವಹಾರಕ್ಕೆ ದಾರಿಯಾಗಿದೆ ಎನ್ನುವುದನ್ನು ಸಾಬೀತು ಮಾಡುತ್ತೇನೆ. ಇಲ್ಲದೆ ಇದ್ದರೆ ನಿಜವಾಗಿಯೂ ಯಡಿಯೂರಪ್ಪನವರೆ, ನಾವು ಸರಿಯಾಗಿದ್ದೇವೆ ಎಂದರೆ ಆ ಎಸ್ಟಿಮೇಟ್‌ನ್ನು ಕೊಡುವುದಕ್ಕೆ ತಾವು ಹಿಂದೆ ಮುಂದೆ ನೋಡುವುದೇ ಬೇಡ. ತಾವು ಏನೋ ಒಂದು ಗೊಂದಲದಲ್ಲಿ ಸಿಕ್ಕಿಕೊಂಡಿದ್ದೀರಿ, ನಿಮ್ಮ ಸರ್ಕಾರ ಮೇಲೆ ನಂಬಿಕೆ ಇಡುವಂಥಾದ್ದು ವಿಶ್ವಾಸ ಇಡುವಂಥಾದ್ದು ಇದೆ. ಕಷ್ಟವಾಗುವಂತಹ, ಉಸಿರು ಕಟ್ಟುವಂತಹ ಸ್ಥಿತಿಗೆ ತಾವು ಬರಬೇಡಿ ಎಂದು ವಿನಂತಿ ಮಾಡುತ್ತಾ, ನಮ್ಮ ಅಧಿಕಾರಿಗಳಿಗೆ ಮತ್ತು ರಾಜ್ಯದ ಜನರಿಗೆ ಒಂದು ಕರೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಶಾಸಕಾಂಗಕ್ಕೆ ಎಷ್ಟು ಬೆಲೆ ಇದೆಯೋ, ಕಾರ್ಯಾಂಗಕ್ಕೂ ಅಷ್ಟೇ ಬೆಲೆ ಇದೆ. ಇವತ್ತು ಅಧಿಕಾರಿಗಳು ಉಸಿರು ಕಟ್ಟುವಂತಹ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಾಮಾಣಿಕವಾದಂತಹ ಅಧಿಕಾರಿಗಳನ್ನು ನೀವು ಎಷ್ಟರಮಟ್ಟಿಗೆ ಇಟ್ಟುಕೊಳ್ಳುತ್ತೀರಿ ಏಪ್ರೀಲ್ ಆದ ಮೇಲೆ ಎಂದು ನನಗೆ ಅನುಮಾನ ಇದೆ. ಇದರಲ್ಲಿ 1993ರಲ್ಲಿ ಅದಂತಹ ವ್ಯಾತ್ಯಾಸ ಆಗಿ ಬುದ್ದಿ ಬಂತು. ಇಲ್ಲ ತಾನು 5 ವರ್ಷ ಇರಬೇಕು ಎಂದು ಇದ್ದರೆ ಯೋಗ್ಯರನ್ನು ಇಟ್ಟುಕೊಳ್ಳಿ. ಆದರೆ ನಾನು ಪ್ರಾಮಾಣಿಕ ಅಧಿಕಾರಿಗಳಿಗೆ ಏನು ಹೇಳುತ್ತೇನೆ ಈ ಸದನದ ಮೂಲಕ ಎಂದರೆ ಸಮಾಜದಲ್ಲಿ ಅವರದೂ ಸಹ ಜವಾಬ್ದಾರಿ ಇದೆ. ಅವರದು ಸ್ವಲ್ಪ ರುಣ ಇದೆ. ಅದುದರಿಂದ ಎಲ್ಲೆಲ್ಲಿ ಕಣ್ಣು ಕಾಣುವ ರೀತಿಯಲ್ಲಿ ಲೂಟಿಯಾಗುತ್ತಿದೆ, ಜನಕ್ಕೆ ಅನ್ನಿಸಿದರೆ, ಆ ರೀತಿಯ ಸಂದರ್ಭ ಬಂದರೆ ಈ ಯಡಿಯೂರಪ್ಪ ನವರಿಗೆ ಕಾನ್‌ಫಿಡೆನ್ಷಿಯಲ್ ಆಗಿ ಸಹಿ ಮಾಡದೇನೆ ಪೋಸ್ಟ್‌ನಲ್ಲಿ ಕಳುಹಿಸಿಕೊಡಿ. ನಿಮ್ಮ ಮುಖ್ಯಮಂತ್ರಿಗಳು ನನ್ನ ಹತ್ತಿರ ಬಂದು ಮಾತನಾಡಬೇಕಾದರೆ ಹೇಳಿದ್ದಾರೆ. ಅಧಿಕಾರಿ ಗಳಿಂದಲೇ ಫೈಲ್ ತಂದು ಕೊಡುತ್ತಿದ್ದರು, ನಾವು ಅಟ್ಯಾಕ್ ಮಾಡುತ್ತಿದ್ದೆವು, ಹೋರಾಟ ಮಾಡುತ್ತಿದ್ದೆವು ನ್ಯಾಯ ಒದಗಿಸಿಕೊಡುತ್ತಿದ್ದೆವು ಎಂದು ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ ಯಾರ ಹೆಸರನ್ನು ಹೇಳುವುದಿಲ್ಲ. ನಿಮ್ಮ ಹೆಸರನ್ನು ಸಹ ನೀವು ಸಹಿ ಮಾಡುವ ಅಗತ್ಯ ಇಲ್ಲ.

ಇಲ್ಲಿ ಅನೇಕ ಪ್ರಕರಣಗಳು ಇವೆ. ವೆಟರ್‌ನರಿ ಆಸ್ಪತ್ರೆಯಲ್ಲಿ ಇತ್ತೀಚೆಗೆ ಪರಚೇಸ್ ಮಾಡಿರುವಂತಹ ಔಷಧದ ವಿವರಗಳನ್ನು ನಾವು ತೆಗೆದುಕೊಂಡರೆ, ಟೆಕ್ನಿಕಲ್ ಕಮಿಟಿಯವರು ಸಾಧ್ಯವಿಲ್ಲ ಎಂದು ಹೇಳಿದ ಮೇಲೂ ಅದನ್ನು ಲ್ಯಾಬೋರೇಟರಿಗೆ ಕಳುಹಿಸಿದ್ದಾರೆ. 4-5 ದಿವಸ ಮುಂಚೆ ಟೆಂಡರ್ ತೆಗದು ಹಳೆಯ ಔಷಧಿಗಳನ್ನು ವ್ಯಾಪಾರ ಮಾಡಿ ಸಾಕಷ್ಟು ಸಪ್ಲೈ ಮಾಡುತ್ತಿರುವವರನ್ನು ಬಿಟ್ಟು, ಈಗ ಬೋರ್ಡ್ ಇಲ್ಲ, ಮತ್ತೊಂದು ಇಲ್ಲ, ಯಾರೋ ಯಾರೋ ಮಾಡುವಂತಹ ಔಷಧಿಗಳನ್ನು ಪರ್‌ಚೇಸ್ ಮಾಡಿ, ಪ್ರೊಟೆಸ್ಟ್ ಮಾಡಿ ಅಲ್ಲಿ ಟೆಕ್ನಿಕಲ್ ಕಮಿಟಿ ಸದಸ್ಯರನ್ನು ಹೊರಗೆ ದಬ್ಬಿದ್ದಾರೆ. ಈ ತರಹದ ಅನೇಕ ಘಟನೆಗಳು ನಡೆಯುತ್ತಿವೆ. ನಾನು ರಾಜ್ಯದ ಜನರಿಗೆ ಜಾಹೀರಾತು ಕೊಡುತ್ತಿದ್ದೇನೆ. ಪ್ರಾಮಾಣಿಕ ಅಧಿಕಾರಿಗಳು ಇಲ್ಲಿ ಬಹಳಷ್ಟು ಜನ ಇದ್ದಾರೆ. ಇಲ್ಲಧೆ ಇದ್ದರೆ ವ್ಯವಸ್ಥೆ ಕುಸಿದು ಹೋಗುತ್ತಿತ್ತು. ಇನ್ನು ಪ್ರಾಮಾಣಿಕರಾಗಿ ಇರುವುದರಿಂದ ವ್ಯವಸ್ಥೆ ಇನ್ನು ಉಳಿದುಕೊಂಡಿದೆ ಅವರಿಗೆ ನಾನು ಕರೆ ಕೊಡುತ್ತೇನೆ, ತಮಗೆ ಈ ಸದನದಲ್ಲಿ ಕಾರ್ಯಕಲಾಪ ನಡೆದದ್ದು ಗೊತ್ತಿದೆ. ಹಿಂದೆಲ್ಲಾ ಏನಾಗಿದೆ ಅದೆಲ್ಲಾ ಗೊತ್ತಿದೆ. ಕಣ್ಣುಮುಚ್ಚಿಕೊಂಡು ಸಹಿ ಮಾಡಬೇಡಿ. ಏಕೆಂದರೆ ಸರ್ಕಾರದಲ್ಲಿ ಇದ್ದಂತಹ ಯಾರೋ ಹಲವಾರು ಇಂತಹ ಸಹಿ ಮಾಡಿದಂತಹ ಉನ್ನತಾಧಿಕಾರಿಗಳು ಸ್ಥಿತಿ ಏನಾಗಿದೆ ಎಂದು ಗೊತ್ತಿದೆ. ಅದು ಇದೇ ಏಪ್ರಿಲ್ ಒಂದರಂದು ಪ್ರಾರಂಭವಾಗುವುದು. ಅದಕ್ಕೋಸ್ಕರ ನಾನು ವಿನಂತಿ ಮಾಡುತ್ತಿದ್ದೇನೆ ತಮ್ಮ ಮೂಲಕ ಅಧಿಕಾರಿಗಳಿಗೆ ವಿನಂತಿ ಮಾಡುತ್ತಿದ್ದೇನೆ ಈ ರೀತಿಯ ಅವ್ಯವಹಾರ ದಾಖಲಾತಿಗಳು ಕಂಡಾಗ ಸಹಿ ಹಾಕದೆ ನನಗೆ ಅದನ್ನು ಕಳುಹಿಸುವ ಕೃಪೆ ಮಾಡಿದರೆ ಒಬ್ಬ ವಿರೋಧ ಪಕ್ಷದ ನಾಯಕನಾಗಿ, ಜನರ ಪ್ರತಿನಿಧಿಯಾಗಿ, ವಿರೋಧ ಪಕ್ಷ ಹೇಗಿರಬೇಕು ಎನ್ನುವುದನ್ನು ಮಾಡಿ ತೋರಿಸುತ್ತೇನೆ. ಎಲ್ಲಿಯಾದರೂ ನನ್ನ ಕಡೆಕೊರತೆಯಾದರೆ ಇಲ್ಲಿರುವಂತಹ 40 ಜನರಿಂದ ಕೊರತೆಯಾದರೆ ಅದನ್ನೂ ಸಹ ಆಡಳಿತ ಪಕ್ಷದವರು ಬಹಿರಂಗ ಮಾಡಲಿ. ಏನಾದರೂ ಮಾಡಿ ಒಂದು ಹೊಸ ದಿಕ್ಕಿನಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಚಿವರ ಹೆಸರು ತರುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ವಿನಾಕಾರಣ ಯಾವುದೇ ದಾಖಲಾತಿಗಳು ಸಿಗದೇ ನಾನು ಆರೋಪ ಮಾಡುವುದಕ್ಕೆ ಸಿದ್ಧನಿಲ್ಲ. ಆದರೆ ಈಗಿರುವಂತಹ ದಾರಿ ಸರಿ ಇಲ್ಲ. ನಮಗೆ ಸಾಕಷ್ಟು ಈಗಾಗಲೇ ಪುರಾವೆಗಳು ಬರುತ್ತಿವೆ. ಜನರು ನಿಮ್ಮನ್ನು ನಂಬಿಕೆಯ ಅಧಿಕಾರ ಕೊಟ್ಟಿರುವಂತೆ ಸಂದರ್ಭದಲ್ಲಿ ಒಂದು ರಾಜಕೀಯ ಸ್ಥಿರತೆ, ವ್ಯಾಪಕ ಭ್ರಷ್ಟಾಚಾರ, ಆರ್ಥಿಕ ದಿವಾಳಿತನದಿಂದ ಜನ ಕಂಗಾಲಾಗಿದ್ದಾರೆ, ಉಸಿರು ಕಟ್ಟುವಂತಹ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ನಾನು ಅವರಿಗೆ ಹೇಳುತ್ತೇನೆ ಜನರಲ್ಲಿರುವ ನಂಬಿಕೆಯನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಾ ಮಾಡಿ ನಾನು ಏನು ಸಲಹೆಗಳನ್ನು ಕೊಟ್ಟಿದ್ದೇವೆ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳುತ್ತಾ, ನನ್ನ ಮಿತ್ರ ಶಾಸಕರು ಹುಬ್ಬಳ್ಳಿಯಲ್ಲಿ ಏನಿದ್ದಾರೆ ಅವರು ಈ ಸದನಕ್ಕೆ ಬರ ಬೇಕಾಗಿದೆ. ನಾನು ತಮ್ಮ ಅಪ್ಪಣೆ ಪಡೆದು ಹುಬ್ಬಳಿಗೆ ಹೋಗುತ್ತಿದ್ದೇನೆ. ಅದಕ್ಕೆ ತಾವು ಅನುಮತಿ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವಾದಂತಹ ಸಿದ್ಧರಾಮಯ್ಯನವರು ತಮ್ಮ ಚೊಚ್ಚಲ 95-96ರ ಆಯವ್ಯಯವನ್ನು ಈ ಸದನದ ಮುಂದೆ

ಇಟ್ಟಿದ್ದಾರೆ. ಇದು ಅವರ ಮೊದಲ ಆಯವ್ಯಯ. ಈ ಸಂದರ್ಭದಲ್ಲಿ ತಮಗೆ ಒಂದು ಅಭೂತಪೂರ್ವವಾದಂತಹ ಅಶಕಾಶ ಸಿಕ್ಕಿದೆ. ಅದನ್ನು ನೀವು ಸದುಪಯೋಗ ಪಡಿಸಿಕೊಳ್ಳಲಿಕ್ಕೆ ತಾವು ಮತ್ತು ತಮ್ಮ ಸರ್ಕಾರ ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತೀರಿ, ಈ ಒಂದು ಆಯವ್ಯಯವನ್ನು ಸದನದ ಮುಂದೆ ಈ ರಾಜ್ಯದ ಮುಂದೆ ಇಟ್ಟಿದ್ದೀರಿ. ಪ್ರಾರಂಭ ಮಾಡುವಾಗಲೆ ತಮ್ಮ ಕಣ್ಣು ಕರ್ನಾಟಕದ ಜನತೆ ಪರವಾಗಿ ಹೋಗಿದ್ದರೆ ನಾವು ಮೆಚ್ಚಬಹುದಿತ್ತು. ನಾವು ಮೊದಲು ನೆಲ ನೋಡಬೇಕು ಆಮೇಲೆ ಆಕಾಶ ನೋಡಬೇಕು. ಆಕಾಶ ಮೊದಲು ನೋಡಿ ನಂತರ ನೆಲ ನೋಡಿದರೆ ಸಮಸ್ಯೆ ಬರುತ್ತದೆ. ನಾನು ನಿಮ್ಮಿಂದ ಏನು ನಿರೀಕ್ಷೆ ಮಾಡಿದ್ದೆ ಎಂದರೆ ನೀವು ನೆಲ ನೋಡುತ್ತೀರಿ ಆಮೇಲೆ ಆಕಾಶ ನೋಡುತ್ತೀರಿ ಎಂದು ತಮ್ಮ ಬಜೆಟ್ ಒಮ್ಮೆಲೆ ದೆಲ್ಲಿಗೆ ಹಾರಿಬಿಟ್ಟಿದೆ. ಡೆಲ್ಲಿಯಿಂದ ಹಳ್ಳಿಗೆ ಅಲ್ಲ, ಹಳ್ಳಿಯಿಂದ ದೆಲ್ಲಿಗೆ ಹೋಗಬೇಕು, ತಾವು ಹಳ್ಳಿ ತಲುಪುವಾಗ ಬಹಳ ತಡವಾಗಬಹುದು. ನಮಗೆ ಒಂದು ಶಂಕೆ, ಏಕಂದರೆ ಗ್ರಾಮಾಂತರ ವಿಚಾರದಲ್ಲಿ ಬಹಳ ಆಸಕ್ತಿ ಇದ್ದವರು ನೀವು. ವೈಯುಕ್ತಿಕವಾಗಿ ಒಳ್ಳೆಯ ಆಶಯ ತಮಗೆ ಇದೆ. ಬಡವರ ಬಗ್ಗೆ, ರೈತರ ಬಗ್ಗೆ ಗ್ರಾಮಾಂತರ ಜೀವನದ ಬಗ್ಗೆ ತಮಗಾಗಲಿ, ಪ್ರಕಾಶರವರಿಗಾಗಲಿ, ಮಾನ್ಯ ಜಾಲಪ್ಪನವರಿಗಾಗಲಿ ಈ ಮೂವರು ಸಹ ಬಹಳ ಆಶಯ ಇರತಕ್ಕಂಥ ಜನ. ಇದನ್ನು ಮೂಲ ಭೂತವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಾವು ಕೆಲವು ಕಟ್ಟುಪಾಡಿಗೆ ಒಳಗಾಗಿದ್ದೀರಿ, ಅಥವಾ ಕೆಲವು ಪೂರ್ವ ಗ್ರಹ ಪೀಡಿತವಾದಂತಹ ಭಾದ್ಯತೆಗಳಿಗೆ ಒಳಗಾಗಿದ್ದೀರಿ. ಇದು ತಮ್ಮನ್ನು ಭಾದಿಸುತ್ತಾ ಇರುತ್ತದೆ. ತಮಗೆ ಈ ವಿಷಯ ಕ್ಲಿಯರ್ ಇರುವುದಿಲ್ಲ. ಸ್ಪಷ್ಟವಾದಂತಹ ಚಿತ್ರವನ್ನು ಕಾಣುವುದಕ್ಕೆ ಆಗುವುದಿಲ್ಲ. ಅದರಿಂದ ಅನಾಹುತವಾಗಬಹುದು. ಕರ್ನಾಟಕದ ಜನತೆಗೆ ಅನಾನನುಕೂಲವಾದರೆ ತಮ್ಮ ಪಕ್ಷಕ್ಕೆ ಅನುಕೂಲವಾಗುವುದಿಲ್ಲ. ಅದರಿಂದ ಅನಾನುಕೂಲವಾಗುತ್ತದೆ. ಹಿಂದೆ ಮಾಡಿದಂತಹ ತಪ್ಪನ್ನು ತಾವು ಪುನ? ಮಾಡಬೇಡಿ. ತಾವು ಅಧಿಕಾರದಲ್ಲಿ ಇರುವಾಗ ಕೇಂದ್ರದಲ್ಲಿ ಏನು ಮಾಡಿದ್ದೀರಿ, ನೀವು ರಾಜ್ಯದಲ್ಲಿ 83ರಿಂದ 87 88 ರವರೆಗೆ ಆರ್ಥಿಕ ವ್ಯವಸ್ಥೆ ಬಗ್ಗೆ ಏನು ಕೆಲವು ತಪ್ಪುಗಳನ್ನು ಮಾಡಿದ್ದೀರಿ ಅದನ್ನು ದಯಮಾಡಿ ಮಾಡಲಿಕ್ಕೆ ಹೋಗಬೇಡಿ ಎಂದು ತಮಗೆ ಸಲಹೆ ಮಾಡುತ್ತೇನೆ. ಇಲ್ಲದೆ ಹೋದರೆ ಜನ ನಿಮ್ಮನ್ನು ಬಲಿ ತೆಗೆದುಕೊಳ್ಳುತ್ತಾರೆ. Personally, I want you to be a good Finance Minister. You should exercise your thinking . I don't think you should operate on somebnody's thinking. ನೀವು ಬೇರೆಯವರ ಅಭಿಪ್ರಾಯವನ್ನು ಕೂಡ ನಿಮ್ಮ ಬಜೆಟ್‌ನಲ್ಲಿ ತುರುಕುವುದಕ್ಕೆ ಪ್ರಯತ್ನ ಮಾಡಿದರೆ, ಯಾವುದೇ ಕ್ಲಾರಿಟಿ ಇರುವುದಿಲ್ಲ. You have to be fed with the information from your officers or your weli wishers. ಅದರೆ ತಮ್ಮ ದೃಷ್ಟಿಕೋನ ಬಹಳ ಸ್ಪಷ್ಟವಾಗಿ ಇರಬೇಕಾಗುತ್ತದೆ. ಯಾವ ತರಹ ಕನ್‌ಫ್ಯೂಷನ್ ಇರಬಾರದು. ತಮ್ಮ ಪಕ್ಷ ಬಂತು, ತಾವು ತಮ್ಮ ಮ್ಯಾನಿಫೆಸ್ಟೋದಲ್ಲಿ ಬೇಕಾದ ಶಬ್ಧಗಳಲ್ಲಿ ಹೇಳಿದ್ದೀರಿ. ತಮ್ಮ ಛಾಪು ಇದರಲ್ಲಿ ಇರಬೇಕಾಗುತ್ತದೆ. ತಾವು ಹಿಂದುಳಿದ ವರ್ಗಕ್ಕೆ ಸೇರಿದವರು. ಮಾನ್ಯ ಮುಖ್ಯಮಂತ್ರಿಯವರು ಅತ್ಯಂತ ಕೆಳಸ್ತರದ ಜನರ ನೋವನ್ನು ತಿಳಿದುಕೊಂಡಿರುವವರು ಎಂದರೆ ಅತಿಶಯೋಕ್ತಿ ಏನು ಇಲ್ಲ. ಆದರೆ ಆಯವ್ಯಯದಲ್ಲಿ ಆ ಛಾಪು ಏನಿರಬೇಕಾಗಿತ್ತು ಅದು ಇದರಲ್ಲಿ ಕಾಣುತ್ತಾ ಇಲ್ಲ? ನನ್ನ ಕನ್ನಡಕದ ದೋಷವೂ ಕಣ್ಣಿನ ದೋಷವೋ ಗೊತ್ತಿಲ್ಲ. ತಾವು ಕೇಂದ್ರ ರಾಷ್ಟ್ರೀಯ

ವ್ಯವಸ್ಥೆಯ ಬಗ್ಗೆ ವಾಖ್ಯಾನ ಮಾಡಿದ್ದೀರಿ. ಕೇಂದ್ರ ಬಜೆಟ್ ವಿಷಯವಾಗಿ ತಾವು 1995-96ರ ಆಯವ್ಯಯದಲ್ಲಿ ಬಹಳ ವಿಸ್ತಾರವಾಗಿ ಭಾಷಣ ಮಾಡಿದ್ದೀರಿ. 10ನೇ ಹಣಕಾಸಿನ ಆಯೋಗದ ವಿಚಾರದಲ್ಲಿ ಕೂಡ ಮುಂದೆ ಹೋಗಿ ರಾಜ್ಯದ ವಿಚಾರದಲ್ಲಿ ನಿಮ್ಮ ಸರ್ಕಾರವಿದ್ದಾಗ ಜಾರಿಗೊಳಿಸಿದ್ದ ಜನಪದ ಕಾರ್ಯಕ್ರಮಗಳನ್ನು ಕೂಡ ಹೇಳಿದ್ದೀರಿ. ಆದರೆ ನಾವು ಹಾಕಿಕೊಂಡಿರುವ ಜನಪರ ಕಾರ್ಯಕ್ರಮಗಳ ಬಗ್ಗೆ ಹೇಳಿದ್ದರೆ ಅದಕ್ಕೆ ಇನ್ನಷ್ಟು ಸ್ಫೂರ್ತಿ ಮತ್ತು ಹೆಚ್ಚು ಪ್ರಯೋಜನ, ವರ್ಚಸ್ಸು ಬರುತ್ತಿತ್ತು. ಇದರ ಬಗ್ಗೆ ಇಲ್ಲಿ ಸ್ಪಷ್ಟವಾಗಿ ಕಾಣುತ್ತಾ ಇಲ್ಲ. ಇದರಲ್ಲಿ ತಾವು ಯಾವ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ? ಯಾವಾಗ ಮಾಡುತ್ತೀರಿ, ಎಂಬುದು ತಿಳಿಸಿಲ್ಲ. ಪ್ರಾಸಂಗಿಕವಾಗಿ ಜನತೆಯ ಅಧಿಕಾರ ವಿಕೇಂದ್ರೀಕರಣ ಎಂದು ಹೇಳುವಾಗ, ಬಹುಶಃ ಜಿಲ್ಲಾ ಪರಿಷತ್ತು, ಗ್ರಾಮೀಣ ಪಂಚಾಯತ್ ವಿಕೇಂದ್ರಿಕರಣ ಕುಸಿದಿದೆ ಎಂದು ಹೇಳುವಾಗ ಈ ವಿಷಯದಲ್ಲಿ ಹಣಕಾಸಿನ ಸಚಿವರು ಸ್ವಲ್ಪ ಜಾಗ್ರತೆಯನ್ನು ವಹಿಸಬೇಕಾಗಿತ್ತು. ಹಣಕಾಸಿನ ವ್ಯವಸ್ಥೆಯಲ್ಲಿ ಏನು ಕುಸಿತವಾಗಿದೆ. ಗ್ರಾಮಾಂತರ ಕಾರ್ಯಕ್ರಮಗಳಲ್ಲಿ ಏನು ಲೋಪವಾಗಿದೆ ಅದನ್ನು ಸ್ಪಷ್ಟವಾಗಿ ತೋರಿಸಬೇಕು. ಅದಕ್ಕೆ ತಾವು ಉತ್ತರ ಕೊಡಬೇಕು. 1983-84ರಲ್ಲಿ ಅದು ಹೇಗೆ ಆಗಿದೆ ಮತ್ತು ರಾಜ್ಯಾಂಗ ತಿದ್ದುಪಡಿಯಲ್ಲಿ ಯಾವ ರೀತಿ ವಿಕೇಂದ್ರಿಕರಣ ಮಾಡಿದ್ದಾರೆ ಎಂಬುದನ್ನು ಅವಲೋಕಿಸಬೇಕು. ಅದನ್ನು ನಾವು ರಾಜಕೀಯವಾಗಿ ಉತ್ತರಿಸಬಹುದು. ಆದರೆ ಆ ವ್ಯವಸ್ಥೆಯ ಬಗ್ಗೆ, ಜನಜೀವನದ ಬಗ್ಗೆ ನಾವು ಕೊಟ್ಟಂತಹ ಆದ್ಯತೆಯ ಬಗ್ಗೆ ಅಂಕಿಸಂಖ್ಯೆಗಳನ್ನು ಮುಂದೆ ಇಟ್ಟುಕೊಂಡು You should have analysed these things.

ಅದನ್ನು ಮಾಡಿದರೆ ಅಂತಹ ಪ್ರಾಮುಖ್ಯವಾದ ವಿಚಾರದ ಬಗ್ಗೆ ನಾವು ಖಂಡಿತವಾಗಿ ಪ್ರಶ್ನಿಸಬೇಕಾಗುತ್ತದೆ. ಅದನ್ನು ಬಾಯಿ ಮಾತಿನಲ್ಲಿ ಹೇಳುವುದಾದರೆ ಕಡತದಲ್ಲಿ ಮಾತ್ರ ಉಳಿತದು ಹೋಗುತ್ತದೆ. ಅದರ ಬಗ್ಗೆ ಸಾಕಷ್ಟು ವಿಚಾರಗಳು ಇವೆ. ಅದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ. ಏಕೆಂದರೆ ಅಶ್ವಾಸನೆಗಳು ಎಷ್ಟು ಇತ್ತು? ಅನುಷ್ಟಾನ ಯಾರು ಮಾಡು ತ್ತಿದ್ದರು? ಯಾರು ಬಾಯಲ್ಲಿ ಹೇಳುತ್ತಿದ್ದರು? ಮೊಯಿಲಿಯವರು 'ಸುಳ್ಳಿನ ಸರದಾರ' ಎಂದು ಹೇಳಿದ್ದಾರೆ. ತಾವು ಏನೂ ಹೇಳಲಿಲ್ಲ. Our people have been more extreement about it. Of course, I don't blame you.

ನಾನು ಮುಂದೆ ಮಾತನಾಡುವಾಗ ಈ ವಿಷಯಕ್ಕೆ ಬರುತ್ತೇನೆ. ಅಶ್ವಾಸನೆಗಳು ಸಾಧನೆ ಗಳು ಯಾವುದು? ಎಷ್ಟು ಅಂತರ? ಇವೆಲ್ಲಾ ಚರ್ಚೆಯಾಗಬೇಕಾಗುತ್ತದೆ. ಮುಂದೆ ನಮಗೆ ಹೇಳಿಕೊಳ್ಳುವ ಜನರು ಸ್ವಲ್ಪ ಕಡಿಮೆ. ನಾವು ಎಷ್ಟೇ ದೊಡ್ಡ ಕೆಲಸ ಮಾಡಿದರೂ ಹೇಳಿ ಕೊಳ್ಳುವವರು ಕಡಿಮೆ ಇರುತ್ತಾರೆ. ನೂರಕ್ಕೆ ಒಂದಂಶ ಮಾಡಿದರೆ ಬಹಳ ಹೆಚ್ಚು ಎಂದು ಹೇಳುವ ಅಷಾಡಭೂತಿತನ ಕೂಡ ಇದೆ. ಅದು ವೈಯಕ್ತಿಕವಾದದಲ್ಲ. ಮಾನ್ಯ ಯಡಿಯೂರಪ್ಪನ ವರು ಒಂದು ಮಾತನ್ನು ಹೇಳಿದರು. ಮಾನ್ಯ ವಿರೇಂದ್ರಪಾಟೀಲ್‌ರವರು ಅಧಿಕಾರದಲ್ಲಿ ಇದ್ದಾಗ ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು. ಈಗ ಅದಕ್ಕೆ ಗ್ರಹ ಹಿಡಿದಿದೆ ಎಂದು ಹೇಳಿದರು. ಆಗ ಮಾನ್ಯ ವೀರೇಂದ್ರ ಪಾಟೀಲರು ಇದ್ದಾಗ ಏಕೆ ಆಯಿತು? ಮಾನ್ಯ ಬಂಗಾರಪ್ಪನವರು, ನಮ್ಮಂತವರು ಇದ್ದಾಗ ಗ್ರಹಣ ಹಿಡಿಯಿತು ಎಂದು......

SRI H.N. NANJE GOWDA: The point is that you cannot put something into Mr. Yediyurappa's mouth. It is not correct to impute Mr. Yediyurappa. He has prasised Mr. Veerendra Patil not because he is a Lingayat, but because his administration was good.

ಶ್ರೀ ವಾಟಾಳ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ಮಾಜಿ ವಿರೋಧಪಕ್ಷದ ನಾಯಕರು ಆಗಿದ್ದಂತಹ ಮಾನ್ಯ ಎಸ್.ಶಿವಪ್ಪನವರು ಇಂದು ನಿಧನರಾಗಿದ್ದಾರೆ ಎಂಬ ವರದಿಯನ್ನು ಕೇಳಿದೆ. ಇದು ಅತ್ಯಂತ ದುಃಖದ ಪ್ರಸಂಗ ಈ ವಿಷಯದ ಬಗ್ಗೆ ತಮಗೆ ಏನಾದರೂ ಮಾಹಿತಿ ಬಂದಿದೆಯೇ? ಈ ವಿಷಯವನ್ನು ಕೇಳಿ ನನಗಂತೂ ತುಂಬಾ ದುಃಖವಾಯಿತು. ಅಂತಹ ಒಬ್ಬ ವ್ಯಕ್ತಿ ನಮಗೆಲ್ಲರಿಗೂ ದಾರಿ ದೀಪವಾಗಿ ಆಶೀರ್ವಾದವನ್ನು ಮಾಡಿ ಈ ಸದನದ ಯಜಮಾನರು ಆಗಿದ್ದಂತಹ ಅವರ ನಿಧನದ ಸುದ್ದಿ ನಮಗೆ ಅತ್ಯಂತ ನೋವು ಮತ್ತು ದುಃಖವನ್ನು ತಂದಿದೆ.

ಉಪಾಧ್ಯಕ್ಷರು:- ನಮಗೆ ಸುದ್ದಿ ಬಂದಿದೆ, ಅದರ ಬಗ್ಗೆ ನಿರ್ಣಯ ತಯಾರಾಗುತ್ತಿದೆ.

ಶ್ರೀವಾಟಾಳ್ ನಾಗರಾಜ್:- ಅವರು ಸತ್ತದ್ದಂತೂ ನಿಜ, ತಾವು ಸದನದ ಕಾರ್ಯ ಕಲಾಪಗಳ ಬಗ್ಗೆ ಏನು ನಿರ್ಣಯವನ್ನು ತೆಗೆದುಕೊಳ್ಳುತ್ತಿರೋ ಅದನ್ನು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ಸದನವನ್ನು ಈಗ ಮುಂದಕ್ಕೆ ಹಾಕುವುದು ಒಳ್ಳೆಯದೆಂದು ನನಗೆ ಅನಿಸುತ್ತಿದೆ. ಏಕೆಂದರೆ ಒಬ್ಬ ದೀಮಂತ ನಾಯಕನಾಗಿ 50 ವರ್ಷಗಳಕಾಲ ರಾಜ್ಯಕ್ಕೆ ಸೇವೆ ಮಾಡಿ, ತ್ಯಾಗ ಮಾಡಿ ಅಪರಾವಾದ ಸೇವೆ ಮಾಡಿ ನಮ್ಮೆಲ್ಲರಿಗೂ ಅವರೂ ದಾರಿ ದೀಪವಾಗಿದ್ದರು. ಆದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ ನನಗಂತೂ ನನ್ನ ಮನಸ್ಸಿಗೆ ವೇದನೆಯಾಗಿದೆ, ನೋವಾಗಿದೆ. ಒಂದು ರೀತಿ ಅವರು ನಮ್ಮ ತಂದೆಯಂತೆ ಪ್ರೇಮ, ಪ್ರೀತಿ ವಿಶ್ವಾಸಗಳನ್ನು ತ್ತೋರಿಸಿದಂಥ ಒಬ್ಬ ವ್ಯಕ್ತಿ ಇದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ನಾನು ಅನೇಕ ಸಂದರ್ಭಗಳಲ್ಲಿ ಅವರ ಮಾರ್ಗದರ್ಶನವನ್ನು ಪಡೆದಿದ್ದೇನೆ. ಮೊನ್ನೆ ಅಂದರೆ ಕಳೆದವಾರ ಹೋಟೆಲ್ ವುಡ್‌ಲ್ಯಾಂಡ್ಸ್‌ನಲ್ಲಿ ಒಂದು ವಿಚಾರಸಂಕಿರಣ ಇತ್ತು ನನ್ನ ಜೊತೆಯಲ್ಲಿ ನಂಜೇಗೌಡರೂ ಇದ್ದರು. ಯಾವಾಗ ಅಂದರೆ ಈ ಶಾಸಕಾಂಗಕ್ಕೆ ಶಕ್ತಿ ಹೋಗಿದೆ ಮತ್ತು ಶಾಸಕರ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ ಎಂದು ಹೇಳಿದಾಗ, ಅವರು ಆ ಸಮ್ಮೇಳನಕ್ಕೆ ಬಂದು ಎಷ್ಟು ಚೆನ್ನಾಗಿ ಮಾತನಾಡಿದರು ಅಂದರೆ ಶಾಸಕರಿಗೆ ಮತ್ತು ಶಾಸಕಾಂಗಕ್ಕೆ ಸಂಪೂರ್ಣವಾದಂಥ ಅಧಿಕಾರ ಕೊಡಬೇಕು ಎಂದು ಹೇಳಿದರು. ಅಂತಹ ಧೀಮಂತ ವ್ಯಕ್ತಿ ನಮ್ಮನ್ನು ಈಗ ಅಗಲಿದ್ದಾರೆ ಎಂಬ ವಿಚಾರ ನನಗೆ ಗೊತ್ತಾಗಿದೆ. ಅಧ್ಯಕ್ಷರೆ ತಮಗೆ ನಾನು ಕಳಕಳಿಯಿಂದ ಮನವಿ ಮಾಡಿ ಕೊಳ್ಳುತ್ತಿದ್ದೇನೆ. ಈ ಸದನವನ್ನು ಮುಂದೂಡಬೇಕು ಮತ್ತು ರಾಜ್ಯಸರ್ಕಾರದ ಸಕಲ ಗೌರವಗಳೊಡನೆ ಅವರ ಸಂಸ್ಕಾರ ಆಗಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ನಾನು ತರುತ್ತೇನೆ. ನಾನು ಅವರಿಗೆ ಬಲಗೈ ಇದ್ದಹಾಗೆ, ಯಾವಾಗಲೂ ಅವರು ನಮ್ಮ ಸ್ವಾಪನ್ನು ಕಂಡರೆ ಅಷ್ಟು ಪ್ರೀತಿಯಿಂದ ನಮ್ಮನ್ನು ಕಾಣುತ್ತಿದ್ದರು. ಇಂತಹ ವ್ಯಕ್ತಿಯನ್ನು ನಾವು ಆಗಲಿದ್ದೇವೆ. ದಯಾಮಾಡಿ ನಾನಂತೂ ತಮಗೆ ಸಲಹೆಯನ್ನು ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ ಒಂದು ವಿಚಾರ ರೂಲ್ಸ್ ಪ್ರಕಾರ ಸದನವನ್ನು ಮುಂದೂಡತಕ್ಕಂಥ ಸಂಪ್ರದಾಯ ಬಂದಿದ್ದರೂ ಸಹ ಸದನ ಒಪ್ಪಿಕೊಂಡರೆ ತಾವು ಖಂಡಿತವಾಗಿಯೂ ಈ ಸಭೆಯನ್ನು ನಾಳೆಗೆ ಮುಂದೂಡಬಹುದು. ಹಾಗೂ ಇದನ್ನೇ ಸಂತಾಪಸೂಚನಾ ಸಭೆ ಎಂದು ಹೇಳಿ ಪರಿವರ್ತನೆಮಾಡಿಕೊಳ್ಳಬಹುದು. ಒಬ್ಬ ಅಗ್ರಗಣ್ಯ ಸಂಸದೀಯ ಪಟು, ಇವತ್ತು ನಮ್ಮನ್ನು ಅಗಲಿದ್ದಾರೆ ಅದ್ದರಿಂದ ಈ ಸಭೆಯ ಅಭಿಪ್ರಾಯ ವನ್ನು ಪಡೆದುಕೊಂಡು ದಯವಿಟ್ಟು ತಾವು ಸಭೆಯನ್ನು ನಾಳೆಯವರೆಗೆ ಮುಂದೂಡಬಹುದು ಮತ್ತು ಇದನ್ನೆ ಸಂತಾಪ ಸೂಚನಾಸಭೆ ಎಂದು ಪರಿವರ್ತನೆ ಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ವಾಟಾಳ್ ನಾಗರಾಜರವರು ಏನು ಪ್ರಸ್ತಾಪ ಮಾಡಿದ್ದಾರೆ ನನಗೂ ಕೂಡ ಈ ಅಭಿಪ್ರಾಯ ಒಳ್ಳೆಯದು ಎಂದು ಅನಿಸುತ್ತಿದೆ. ಅವರು ಈ ಸದನದಲ್ಲಿ ವಿರೋಧಪಕ್ಷದ ನಾಯಕರಾಗಿ ಮತ್ತು ಕೌನ್ಸಿಲ್ ನಲ್ಲಿ ಛೇರ್‌ಮನ್ನರಾಗಿ ಕೆಲಸಗಳನ್ನು ನಿರ್ವಹಿಸಿದ್ದಾರೆ. ಅದ್ದರಿಂದ ನಾವು ಈಗ ಸಭೆಯನ್ನು ಮುಂದೂಡಿ ನಾಳೆ ಬೇಕಾದರೆ ಒಂಭತ್ತು ಗಂಟೆಗೆ ಸೇರಿ ಡಿಪಕಷನ್ ಕಂಟಿನ್ಯೂ ಮಾಡೋಣ ಮಧ್ಯಾಹ್ನದ ಮೇಲೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬಹುದು. ಅದ್ದರಿಂದ ನಾಳೆ ಒಂಭತ್ತು ಗಂಟೆಗೆ ಸೇರೋಣ ಇದಕ್ಕೆ ಸದನದ ಎಲ್ಲಾ ಸದಸ್ಯರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಎಸ್. ಶಿವಪ್ಪನವರು ನಮ್ಮ ಜಿಲ್ಲೆಯವರಾಗಿದ್ದು ಅವರು ಕೇವಲ ರಾಜಕಾರಣಿ ಮಾತ್ರವಲ್ಲದೆ ಅತ್ಯಂತ ಧೀಮಂತ ರಾಜಕಾರಣಿಯಾಗಿ ಈ ಸಭೆಯ ವಿರೋಧಪಕ್ಷದ ನಾಯಕರಾಗಿ ಅತ್ಯಂತಪ್ರಬಲವಾದಂಥ ದಕ್ಷ ವಿರೋಧಪಕ್ಷದ ನಾಯಕರುಗಳಾಗಿದ್ದಂತಹವರು. ಇವತ್ತೂ ಕೂಡ ಅವರ ಹೆಸರನ್ನು ಈ ಷದನದಲ್ಲಿ ಪ್ರಸ್ತಾಪ ಮಾಡತಕ್ಕಂಥ ಪದ್ಧತಿಯನ್ನು ಇಟ್ಟುಕೊಂಡಿದ್ದೇವೆ. ಈ ಧೀಮಂತ ನಾಯಕ ಇವತ್ತು ಕಣ್ಮರೆ ಆಗಿರತಕ್ಕಂಥ ಸಂದರ್ಭ ಅತ್ಯಂತ ದುಃಖಕರವಾದ ವಿಚಾರ. ನಾನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಖರ್ಗೆಯವರು ಏನು ಪ್ರಸ್ತಾಪ ಮಾಡಿದ್ದಾರೆ ಅವರ ಜೊತೆ ನಾನು ಧ್ವನಿಗೂಡಿಸುತ್ತಾ ಸನ್ಮಾನ್ಯ ಎಸ್. ಶಿವಪ್ಪನವರ ಗೌರವಾರ್ಥ ಈ ಸದನವನ್ನು ಮುಂದೂಡಿ, ನಾಳೆ ಬೆಳಿಗ್ಗೆ 9 ಗಂಟೆಗೆ ಸೇರಬಹುದು. ಮಾನ್ಯ ಸದಸ್ಯರುಗಳ ಸಲಹೆ ಪ್ರಕಾರ ನಡೆದುಕೊಳ್ಳುವುದು ಸೂಕ್ತ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಈ ದಿವಸ ನಾನು ಕಛೇರಿಯಲ್ಲಿ ಇರಬೇಕಾದರೆ ಅವರ ಸ್ನೇಹಿತರೊಬ್ಬರು ಬಂದು ಈ ರೀತಿ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾರೆ ಜಯದೇವ ಆಸ್ಪತ್ರೆಯಲ್ಲಿದ್ದಾರೆ ಎಂಬುದನ್ನು ತಿಳಿಸಿದರು. ತಕ್ಷಣ ನಾನು ಅವರಿಗೆ ಏನು ಚಿಕಿತ್ಸೆ ಬೇಕು ಅದಕ್ಕೆ ಎಷ್ಟೇ ವೆಚ್ಚ ತಗಲಲಿ, ಈ ಅಸ್ಪತ್ರೆ ಅಲ್ಲದಿದ್ದರೆ ಬೇರೆ ಆಸ್ಪತ್ರೆಗೆ ಸೇರಿಸಿ, ಔಷಧೀಗಳನ್ನು ಬೇರೆ ಕಡೆಯಿಂದ

ತರಸಬೇಕು ಅವರ ಜೀವ ಅತ್ಯಮೂಲ್ಯವಾದದ್ದು ಅದನ್ನು ಉಳಿಸಿಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಯಾವುದಕ್ಕೂ ಕೂಡ ಹಿಂದಕ್ಕೆ ಹೋಗುವುದು ಬೇಡ ಎಂದು ನಾವು ನಮ್ಮ ಅಭಿಪ್ರಾಯವನ್ನು ತಿಳಿಸಿ ಎಂದು ಹೇಳಿದೆ. ಅವರು ವಾಪಸ್ಸು ಬಂದು ಹೇಳಿದರು ವೈದ್ಯರು ತಮ್ಮ ಎಲ್ಲಾ ಪ್ರಯತ್ನವನ್ನೂ ಮಾಡುತ್ತಿದ್ದಾರೆ, ಅವರ ಒಂದು ಕಿಡ್ನಿ ಸಹ ಬೆಳಿಗ್ಗೆಯೆ ಫೇಲಾಗಿದೆ, ಅವರು ಬಹಳ ಕೆಟ್ಟ ಸ್ಥಿತಿಯಲ್ಲಿದ್ದಾರೆ ಅದರೂ ಕೂಡ ವೈದ್ಯರು ತಮ್ಮ ಎಲ್ಲಾ ಪ್ರಯತ್ನಗಳನ್ನು ಇಲ್ಲಿಯೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ ಎಂಬುದಾಗಿ ತಿಳಿಸಿದರು, ಔಷಧಿಗಳನ್ನು ತರಿಸಿಕೊಟ್ಟಿದ್ದಾರೆ ಎಂಬ ವಿಚಾರವನ್ನು ಕೂಡ ನನಗೆ ತಿಳಿಸಿದರು ಅದರೂ ಅವರು ಮೂರು ಗಂಟೆಗೆ ಅವರು ತೀರಿಕೊಂಡಿದ್ದಾರೆ. ಇನ್ನೂ ಅವರ ಫಾರ್ಥಿವ ಶರೀರ ಜಯದೇವ ಆಸ್ಪತ್ರೆಯಿಂದ ಅವರ ಸದಾಶಿವನಗರದ ಮನೆಗೆ ಹೋಗಿದೆ. ಇವತ್ತು ಇಡೀ ದಿವಸ ಪಾರ್ಥಿವ ಶರೀರ ಬೆಂಗಳೂರಿನಲ್ಲಿ ಇರುತ್ತದೆ ನಾಳೆ ಬೆಳಿಗ್ಗೆ ಅವರ ಪಾರ್ಥಿವ ಶರೀರವನ್ನು ಚನ್ನರಾಯಪಟ್ಟಣಕ್ಕೆ ತೆಗದುಕೊಂಡು ಹೋಗುತ್ತಾರೆ ನಾವು ಅವರ ಅಭಿಮಾನಿಗಳು ಅವರು ಅಗ್ರಗಣ್ಯರೋ ಇಲ್ಲವೋ ಆ ಬಗ್ಗೆ ಚರ್ಚೆಮಾಡುವುದು ಬೇಡ. ಅಗ್ರಗಣ್ಯ ವಿರೋಧಪಕ್ಷದ ನಾಯಕರಾಗಿ ವಿಧಾನಪರಿಷತ್ತಿನ ಸಭಾಪತಿಗಳಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅದರೆ ನಮ್ಮ ಸದನ ಮುಂದೂಡಿದ ಮೇಲೆ ಎಲ್ಲರೂ ಅಲ್ಲಿಗೆ ಹೋಗುತ್ತಾರೆ ಎನ್ನುವುದು ಏನು ಇಲ್ಲ ನಾಳೆ ಶವಸಂಸ್ಕಾರಕ್ಕೆ ಹೋಗುವವರಿಗೆ ಯಾವ ನಿರ್ಬಂಧವೂ ಇರುವುದಿಲ್ಲ. ಇವತ್ತು ಅವರ ಪಾರ್ಥಿವ ಶರೀರ ಅವರ ಮನೆಯಲ್ಲೆ ಇರುತ್ತದೆ ಆದ್ದರಿಂದ ಯಾರಾದರೂ ಹೋಗಿ ಗೌರವ ಸಲ್ಲಿಸತಕ್ಕಂಥವರು ಇದ್ದರೆ ಗೌರವವನ್ನು ಸಲ್ಲಿಸಬಹುದು. ಸದನವನ್ನು ನಾವು ಮುಂದೂಡಬೇಕೆ ಎಂಬುದು ಅವರಿಗೆ ಗೌರವ ತೋರಿಸಬಾರದು ಎಂದು ಕಾರಣಕ್ಕಾಗಲ್ಲ ನಮಗೆ ಇರತಕ್ಕಂಥ ನಿಬಂಧಗಳಿಗಾಗಿ ಅಗತ್ಯವೆ ಎಂಬುದನ್ನು ತಾವು ಇನ್ನೊಮ್ಮೆ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಅವರಿಗೆ ಅಗೌರವವನ್ನು ಸೂಚಿಸಬೇಕು ಎಂದು ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾವು ಸದನವನ್ನು ಮುಂಡೂತಕ್ಕಂಥ ಉದ್ದೇಶ ಈ ರಾಜ್ಯದ ಒಬ್ಬ ಧೀಮಂತ ನಾಯಕ ಅವರಿಗೆ ವಿಶೇಷವಾದಂಥ ಸ್ಥಾನಮಾನ ಎಲ್ಲಾ ಇದೆ. ಹಿಂದೆ ಗುಂಡೂರಾಯರು ತೀರಿಕೊಂಡಾಗಲೂ ಇದೇ ಸದನ ನಡೆಯುತ್ತಾ ಇತ್ತು. ಮೂರು ದಿನಗಳಕಾಲ ಮುಂದಕ್ಕೆ ಹಾಕಿದ್ದು ಉಂಟು. ನಾನು ನಿಮಗೆ ಏನು ಹೇಳುತ್ತೇನೆ ಎಂದರೆ, ನಾಳೆಯಾದರೂ ಸಂತಾಪ ಸೂಚಾನಾ ಸಭೆಯನ್ನು ಮಾಡಲೇಬೇಕು. ಈಗಾಗಲೇ ಅದನ್ನು ಸಂತಾಪಸೂಚನೆ ಎಂದು ಪರಿವರ್ತನೆ ಮಾಡಿ ಯಾರೂಯಾರು ಮಾತನಾಡುತ್ತಾರೋ ಅವರು ಮಾತನಾಡಲಿ ಅದಾದನಂತರ ತಮ್ಮ ಈ ಸದನವನ್ನು ಅವರ ಗೌರವಾರ್ಥವಾಗಿ ಮುಂದಕ್ಕೆ ಹಾಕುವುದು ಒಳ್ಳೆಯದು. ಶಿವಪ್ಪನವರು ಬಹಳಕಾಲ ವಿರೋಧಪಕ್ಷದ ನಾಯಕರಾಗಿದ್ದರು, ಬೇರೆ ಎಲ್ಲರಿಗಿಂತ ಹೆಚ್ಚಾಗಿ ಅವರಿಗೆ ಈ ಸದನ ಅಪಾರವಾದ ಗೌರವವನ್ನು ತೋರಿಸಬೇಕಾದದ್ದು ಅತಿ ಮುಖ್ಯ ಎಂಬ ಮಾತನ್ನು ತಮ್ಮ ಮನವಿಗೆ ಬಿಡುತ್ತಿದ್ದೇವೆ. ತಾವು ಯೋಚನೆ ಮಾಡಿ ತಿಳಿಸಬೇಕು.

ಶ್ರೀ ಕೆ.ಎಸ್. ನಾಗೇಗೌಡ:- ನಿಯಮದ ಒಳಗಡೆ ಅಶಕಾಶ ಏನು ಇದೆ ಅಂದರೆ ಈ ನಿರ್ಬಂಧ ಏನು ಇದೆ ಅದನ್ನು ತೆಗೆಯುವುದಕ್ಕೆ ರೂಲ್ಸ್ ಒಳಗಡೆ ಅವಕಾಶ ಇದೆ

ವಿರೋಧಪಕ್ಷದವರು ಎಲ್ಲರೂ ಒಪ್ಪಿದ್ದಾರೆ ಅದ್ದರಿಂದ ಸದನವನ್ನು ಮುಂದೂಡತಕ್ಕಂಥದ್ದು ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯಿಲಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಪ್ಪನವರ ಆರೋಗ್ಯ ಪರಿಸ್ಥಿತಿಯನ್ನು ನೋಡಲು ಇವತ್ತು ಬೆಳಿಗ್ಗೆ 11 ಗಂಟೆಗೆ ಅಲ್ಲಿಗೆ ಹೋಗಿದ್ದೆವು, ಅವರು ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಇದ್ದರು ಆ ಬಗ್ಗೆ ವೈದ್ಯರು ಕೂಡ ಅಭಿಪ್ರಾಯಕೊಟ್ಟರು ಬಹಳ ಸಮಸ್ಯೆ ಇದೆ, ಬಹುಷಃ ಪ್ರಾಣ ಉಳಿಯುವುದು ಕಷ್ಟ ಎಂದು ಹೇಳಿದರು ಈಗ ಇಲ್ಲಿ ಏನಾಗಿದೆ ಅಂದರೆ ಈ ಪ್ರಶ್ನೆಯನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಎತ್ತಿದ್ದಾರೆ ಶಿವಪ್ಪನವರು ಬಹಳ ಉನ್ನತವಾದಂಥ ಹುದ್ದೆಯಲ್ಲಿದ್ದವರು. ಅವರು ತೀರಿಕೊಂಡ ವಿಚಾರ ನನ್ನ ಗಮನಕ್ಕೆ ಬಂದಕೂಡಲೆ ಸಂತಾಪಸೂಚನೆಯನ್ನು ನಾಳೆಗೆ ಮುಂದೂಡುವಂಥದ್ದು ಸರಿಯಲ್ಲ ಇವತ್ತೆ ಸಂತಾಪಸೂಚನೆಯನ್ನು ಮಾಡುವುದಿದ್ದರೆ ಚೆನ್ನಾಗಿರುತ್ತಿತ್ತು ಮತ್ತು ಅದನ್ನು ನೀವು ಮಾಡಬಹುದು ನಾಳೆ ಬೇಕಾದರೆ ಬಜೆಟ್ ಮೇಲಿನ ಭಾಷಣವನ್ನು ಮುಂದುವರಿಸಬಹುದು. ಈ ಸುದ್ಧಿ ನಮಗೆ ಬಂದಕೂಡಲೆ ಮಾಡುವುದರಲ್ಲಿ ಹೆಚ್ಚು ಅರ್ಥ ಇದೆ. ಪ್ರಾಮಾಣಿಕತೆ ಇದೆ, ಅವರು ವಿರೋಧಪಕ್ಷದ ನಾಯಕರು ಅಂಥ ಅಲ್ಲ ಸಭಾಪತಿಗಳು ಆಗಿದ್ದರು, ಈ ಎರಡೂ ವಿಚಾರಗಳನ್ನು ಇವತ್ತು ಪರಿಗಣನೆ ಮಾಡಿದರೆ ನಾಳೆ ಬೇಕಾದರೆ 9 ಗಂಟೆಗೆ ಸೇರಿ ಇದನ್ನು ಮುಂದುವರಿಸಬಹುದು. ಅದ್ದರಿಂದ ಸಂತಾಪ ಸೂಚನೆಯನ್ನು ನಾಳೆಗೆ ಮುಂದೂಡುವುದರಲ್ಲಿ ಅರ್ಥ ಇಲ್ಲ, ಅದನ್ನು ಇವತ್ತೆ ಮುಗಿಸಬೇಕು. ಅವರು ಅತ್ಯಂತ ಹಿರಿಯರು ಹೀಗಿರುವಾಗ ನಾನು ಇಲ್ಲಿ ನಿಂತು ಭಾಷಣ ಮಾಡಲಿಕ್ಕೆ. ಅಷ್ಟು ಅಸಕ್ತಿ ಬರುತ್ತಿಲ್ಲ. ವೈಯಕ್ತಿಕವಾಗಿ ನನಗೂ ಕೂಡ ಆ ರೀತಿ ಆಗುತ್ತಿದೆ. ಆದುದರಿಂದ ಈ ವಿಚಾರ ತಿಳಿದ ಮೇಲೆ ನಾನು ಬೆಳಿಗ್ಗೆ ಫ್ರೆಷ್ ಆಗಿ 11.30 ಗಂಟೆಗೆ ಅವರನ್ನು ನೋಡಿಕೊಂಡು ಬಂದಿದ್ದೇನೆ. ದಯವಿಟ್ಟು ಈಗ ಸಭೆಯನ್ನು ಮುಂದೂಡಿ. ನಾವು ನಾಳೆ 9.00 ಗಂಟೆಗೆ ಸಭೆ ಸೇರೋಣ ಬೇಕಾದರೆ. ನಾಳೆ ನಾವು ಲಂಚ್ ಅವರಿಗೆ ಸಭೆಯನ್ನು ಮುಂದೂಡುವುದು ಬೇಡ. ನಾಳೆ ಮತ್ತು ನಾಡಿದ್ದು ಚರ್ಚೆ ನಡೆದರೆ ನಂತರ ಸರ್ಕಾರದವರು ಅದರ ಮೇಲೆ ಉತ್ತರ ಕೊಡಬಹುದು.

ಶ್ರೀ ಹೆಚ್. ಎನ್. ನಂಜೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಸಭೆ ಈಗ ಸಂತಾನ ಸೂಚಕ ನಿರ್ಣಯವನ್ನು ಚರ್ಚೆ ಮಾಡುತ್ತಿದೆ ಎಂದು ನನ್ನ ಭಾವನೆಯಾಗಿದೆ. ವಾಸ್ತವವಾಗಿ ಅಧ್ಯಕ್ಷರು ಅಂತಹ ಒಂದು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಬೇಕಾಗಿತ್ತು ಸಭಾನಾಯಕರು ಅದನ್ನು ಅನುಮೋದಿಸಿ ಮಾತನಾಡಬೇಕಾಗಿತ್ತು. ಪದ್ಧತಿ ಪ್ರಕಾರ ಸಭೆ ನಡೆಯುವ ಕಾಲದಲ್ಲಿ ವಿಷಯ ಗೊತ್ತಾದ ತಕ್ಷಣ ಪ್ರಿಸಿಡೆಂಟ್ ಇಲ್ಲದಿದ್ದರೂ ಸಭೆಯನ್ನು ನಡೆಸುವಂಥದ್ದು ಇರುತ್ತಿರಲಿಲ್ಲ. ಕೆಲವೊಮ್ಮೆ ಏನಾಗುತ್ತದೆ ಎಂದರೆ ಇಲ್ಲಿ ಮಾಜಿ ಸದಸ್ಯರು ಎಂಬ ಪ್ರಶ್ನೆ ಬರುವುದಿಲ್ಲ. ಮಾಜಿ ಸದಸ್ಯರು ಗೌರವಾನ್ವಿತರಾಗಿದ್ದು ನಿಧನ ಹೊಂದಿದ ಸಂದರ್ಭದಲ್ಲಿ ಸಭೆಯನ್ನು ಎರಡು ಮೂರು ದಿನಗಳ ಕಾಲ ಮುಂದೂಡಿದ ಉದಾಹರಣೆಗಳಿವೆ. ಶ್ರೀಮಾನ ಗುಂಡೂರಾವ್ ಅವರು ನಿಧನ ಆದಾಗ ಸದನವನ್ನು ಮುಂದೂಡಿಸಿದ್ದರು. ಶ್ರೀಮಾನ ಶಿವಪ್ಪನವರು ಈ ಸಭೆಯಲ್ಲಿ ಕೆಲವರಿಗೆ ಶ್ರೀಮಾನ ದೇವೇಗೌಡರಿಗೆ ಇರಬಹುದು ನನಗೆ ಇರಬಹುದು

ವಾಟಾಳ್‌ರಿಗೆ ಇರಬಹುದು. ನಮಗೆಲ್ಲಾ ಗುರುವಿನ ರೀತಿಯಲ್ಲಿದ್ದರು. ನನಗೂ ಸಹ ಹೊಸದರಲ್ಲಿ ಟ್ರೈನಿಂಗ್ ಕೊಟ್ಟಿದ್ದರು. ವಿರೋಧ ಪಕ್ಷ ಜವಾಬ್ದಾರಿ ಏನಿದೆ ಎನ್ನುವುದನ್ನು ಜನಕ್ಕೆ ಸಮಾಜಕ್ಕೆ ತೋರಿಸಿಕೊಡುವ ಕಾರ್ಯವನ್ನು ಅವರು ಯಶಸ್ವಿಯಾಗಿ ನಿರ್ವಹಣೆ ಮಾಡಿದರು. ಅವರು ನಿಧನ ಹೊಂದಿದ್ದಾರೆ ಎನ್ನುವುದನ್ನು ನನಗೆ ನಂಬಲಿಕ್ಕಾಗುತ್ತಿಲ್ಲ. ಅಷ್ಟೇಕೆ ಚುರುಕಾಗಿ ಮತ್ತು ಪಾದರಸ ಇದ್ದ ಹಾಗೆ ಎಲ್ಲರಿಗೂ ತಿಳುವಳಿಕೆ ನೀಡುತ್ತಿದ್ದರು ಹಾಗೆ ಅವರು ಮಾರ್ಗದರ್ಶಕರಾಗಿದ್ದರು. ಮೊದಲಿನಿಂದ ಕೊನೆಯವರೆಗೆ ಮಾರ್ಗದರ್ಶನ ಮಾಡುತ್ತಿದ್ದರು. ಅವರ ನಿಧನದಿಂದ ತುಂಬಲಾರದ ನಷ್ಟವಾಗಿದೆ. ನನಗಂತೂ ವೈಯಕ್ತಿಕವಾಗಿ ನಷ್ಟವಾಗಿದೆ. ನಾನುವಿದ್ಯಾರ್ಥಿ ಆಗಿದ್ದಾಗಿನಿಂದಲೂ ಅವರನ್ನು ಬಲ್ಲೆ. ಸಿಂಡಿಕೇಟ್ ಸದಸ್ಯರಾಗಿದ್ದರು ವಿರೋಧ ಪಕ್ಷದ ನಾಯಕರಾಗಿದ್ದರು ಆಮೇಲೆ ಸಭಾಪತಿಗಳಾಗಿದ್ದರು. ನನಗೆ ನನ್ನ ಮನೆಯಲ್ಲಿ ಒಬ್ಬ ಹಿರಿಯರನ್ನು ಕಳೆದುಕೊಂಡು ಅನುಭವವಾಗುತ್ತಿದೆ. ಅವರ ಆತ್ಮಕ್ಕೆ ಭಗವಂತನು ನೆಮ್ಮದಿ ನೀಡಲೆಂದು ನಾನು ಹಾರೈಸುತ್ತೇನೆ. ಈ ಸಭೆಯನ್ನು ತಾವು ಮೃತರ ಗೌರವಾರ್ಥ ಮುಂದಕ್ಕೆ ಹಾಕುವುದು ಒಳ್ಳೆಯದು.

04.20 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ ಎಸ್. ಶಿವಪ್ಪನವರು ಈ ರಾಜ್ಯದ ಹಿರಿಯ ರಾಜಕಾರಣಿಗಳ ಪೈಕಿ ಒಬ್ಬರಾಗಿದ್ದರು. ಬಹಳ ಎತ್ತರಕ್ಕೆ ಬೆಳೆದಂತಹ ವ್ಯಕ್ತಿ. 1962ರಿಂದ 1969ರವರೆಗೆ ಇದೇ ಸದನದಲ್ಲಿ ನಾವಿಬ್ಬರೂ ಒಂದುಗೂಡಿ ಕೆಲಸ ಮಾಡಿದಂತಹ ದಿನಗಳು ನನಗೆ ಜ್ಞಾಪಕಕ್ಕೆ ಬರುತ್ತವೆ. ನಮಗಿಂತ ಹತ್ತು ವರ್ಷ ಮುಂಚೆ ಅವರು 1952ರಲ್ಲಿ ಮೊದಲ ಬಾರಿಗೆ ಈ ಸಭೆಗೆ ಬರಲಿಕ್ಕೆ ಸಾಧ್ಯವಾಗಲಿಲ್ಲ. ಬಹುಶಃ ಈ ರಾಜ್ಯದ ಎಲ್ಲಾ ಮುಖಂಡರುಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಕೆಲಸಮಾಡಿದ್ದಾರೆಂದು ಭಾವಿಸಿದರೆ ತಪ್ಪಾಗಲಾರದು. ಅದು ಉತ್ಪ್ರೇಕ್ಷೆ ಕೂಡ ಅಲ್ಲ. ಸುಮಾರು ಎಂಟೂವರೆ ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಸುಮಾರು 15 ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿ ವಿಧಾನ ಪರಿಷತ್ತಿನಲ್ಲಿ ಸುಮಾರು 10 ವರ್ಷ ಕೆಲಸ ಮಾಡಿ ವಿಧಾನ ಪರಿಷತ್ತಿನ ಸಭಾಪತಿಗಳಾಗಿಯೂ ಕೂಡ ಕೆಲಸ ಮಾಡಿ ಈ ರಾಜ್ಯಕ್ಕೆ ತಮ್ಮದೇ ಅದಂತಹ ಒಂದು ಕೊಡುಗೆಯನ್ನು ಸಲ್ಲಿಸಿದ್ದಾರೆ. ಈಗ್ಗೆ ಮೂರು ದಿವಸದ ಹಿಂದೆ ಅವರ ಆರೋಗ್ಯ ತೀವ್ರವಾಗಿ ಹದಗೆಟ್ಟಿತ್ತು. ನಿನ್ನೇರಾತ್ರಿ ನಾನು ಶಿವಪ್ಪನವರನ್ನು ಕೊನೆಯದಾಗಿ ಭೇಟಿ ಮಾಡಿದ್ದೆ. ಅವರು ಅತ್ಯಂತ ಚಿಂತಜನಕವಾದಂತಹ ಸ್ಥಿತಿಯಲ್ಲಿರುವ ಒಂದು ದೃಶ್ಯವನ್ನು ನೋಡಿದಾಗ ಅದು ನನ್ನ ಮನಸ್ಸಿನ ಮೇಲೆ ಭೀಕರವಾದ ಪರಿಣಾಮ ಬೀರಿತು. ಅವರ ಕುಟುಂಬದವರೊಡನೆ ಸುಮಾರು ಅರ್ಧ - ಮುಕ್ಕಾಲು ಗಂಟೆ ಕಾಲ ಕಳೆದೆ. ಈಗ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಹಾಗೂ ಅವರ ಕುಟುಂಬ ವರ್ಗದವರಿಗೆ ಈ ಮರಣದಿಂದ ಉಂಟಾಗಿರತಕ್ಕ ತೀವ್ರತರವಾದ ನಷ್ಟವನ್ನು ತುಂಬಿಕೊಳ್ಳತಕ್ಕ ಸರ್ವಶಕ್ತಿಯನ್ನು ಭಗವಂತನು ನೀಡಲೆಂದು ನಾನು ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಶ್ರೀ ಎಸ್. ಶಿವಪ್ಪನವರು 1945ರಿಂದ 1950ರವರೆಗೆ ಪ್ರಜಾಪ್ರತಿನಿಧಿ ಸಭಾ ಸದಸ್ಯರಾಗಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರು. 1952 ರಿಂದ 1956ರವರೆಗೆ ವಿಧಾನ ಪರಿಷತ್ತಿನಲ್ಲಿ ಮತ್ತು 1962ರಿಂದ 1971ರವರೆಗೆ ವಿಧಾನ ಸಭೇಯ ಸದಸ್ಯರಾಗಿದ್ದರು ಮತ್ತು 1967ರಿಂದ 71ರವರೆಗೆ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. 1974ರಿಂದ 1980 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಇದರಲ್ಲಿ 1979ರಿಂದ 1980ರವರೆಗೆ ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಕೆಲಸ ಮಾಡಿದ್ದಾರೆ. ಬಹುಶಃ 1969ರಲ್ಲಿ ಸಂಸ್ಥಾ ಕಾಂಗ್ರೆಸ್ ಅನಿರೀಕ್ಷಿತವಾಗಿ ವಿಭಾಗವಾಗದೇ ಹೋಗಿದ್ದರೆ 1972ರಲ್ಲಿ ನಡೆಯಬಹುದಾಗಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಇವರೇ ರಾಜ್ಯದ ಮುಖ್ಯಮಂತ್ರಿಗಳು ಆಗುವಂತ ಸನ್ನಿವೇಶ ಇತ್ತು. ಒಬ್ಬ ಧೀಮಂತ ನಾಯಕರಾಗಿದ್ದರು. ಉತ್ಸಾಹ, ಲವಲವಿಕೆ ಅವರಲ್ಲಿತ್ತು. ಪ್ರಜಾ ಸೋಷಲಿಸ್ಟ್ ಪಾರ್ಟಿಯನ್ನು ಸಂಘಟಿಸುವುದರಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸದ್ದರು. ಮಾನ್ಯ ಸದಸ್ಯರಾದ ನಂಜೇಗೌಡರು ಪ್ರಸ್ತಾಪ ಮಾಡಿರುವಂತೆ ಬಹಳ ಸಕ್ರಿಯವಾದ ಕೆಲಸ ಮಾಡಿಕೊಂಡು ಬಂದಂತಹ ಒಬ್ಬ ವ್ಯಕ್ತಿ. ಕಾಂತರಾಜ ಪುರ ಶಿವಪ್ಪನವರು ಎಂದು ಬಹಳ ಹೆಸರುವಾಸಿಯಾಗಿದ್ದರು. ನನಗೆ ತಿಳಿದ ಮಟ್ಟಿಗೆ ಆಗಿನ ಕಾಲದಲ್ಲಿ ಒಂದು ಶ್ರೀಮಂತ ಕುಟುಂಬದಿಂದ ಬಂದು ತಮ್ಮನ್ನು ರಾಜಕೀಯ ಚಟುವಟಿಕೆಗಳಿಗೆ ವಿನಿಯೋಗಿಸಿಕೊಂಡರು. ಸಾರ್ವಜನಿಕ ಬದುಕಿನಲ್ಲಿ ಮಾರ್ಗದರ್ಶಕರಾಗಿ ಇರತಕ್ಕಂತಹ ಯೋಗ್ಯತೆ ಇದ್ದಂತಹ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ರಾಜ್ಯದ ಸಾರ್ವಜನಿಕ ಬದುಕಿನಲ್ಲಿ ಮುಂದೆ ಬಂದು ಒಳ್ಳೆಯ ಹಾದಿಯಲ್ಲಿ ಬದುಕಿ ಬಾಳಬೇಕು ಎಂದು ಆಸೆ ಪಡತಕ್ಕ ನಮ್ಮಂತಹವರಿಗೆ ಮಾರ್ಗದರ್ಶಕರಾಗಿದ್ದರು. ಇವರ ನಿಧನದಿಂದ ನಮಗೆ ತುಂಬಲಾರದ ನಷ್ಟವುಂಟಾಗಿದೆ.

ಈ ಸದನ ಜೊತೆ ಗೂಡಿ ಎಲ್ಲಾ ಸದಸ್ಯರ ಜೊತೆ ಒಟ್ಟು ಗೂಡಿ ನಾನು ನನ್ನ ಶ್ರದ್ಧಾಂಜಲಿಯನ್ನು ದಿವಂಗತರಿಗೆ ಅರ್ಪಿಸುತ್ತೇನೆ ಮತ್ತುದ ಅವರ ಕುಟುಂಬಕ್ಕೆ ಈ ಸದನದ ಭಾವನೆಗಳನ್ನು ಒಂದು ನಿರ್ಣಯದ ಮೂಲಕ ತಿಳಿಸುತ್ತಿದ್ದೇವೆ ಮತ್ತು ತಾವು ಎಲ್ಲರೂ ಇಲ್ಲಿ ಏನು ಹೇಳಿದ್ದೀರಿ, ತಮ್ಮ ಭಾವನೆಗಳಿಗೆ ನಾನು ಸ್ಪಂದಿಸುತ್ತಾ ಮೃತರ ಗೌರವಾರ್ಥ ಯಾವುದೇ ಒಂದು ಕೆಲಸಗಳನ್ನು ಮುಂದೆ ನಡೆಸದೆ ನಾವು ಮೌನವನ್ನು ಆಚರಿಸಿ ಸಭೆಯನ್ನು ಮುಂದುಡುತ್ತಿದ್ದೇನೆ. ಎಲ್ಲಾ ಸದಸ್ಯರು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸಭೆಯ ದಿವಂಗತರ ಗೌರಾವಾರ್ಥ ಒಂದು ನಿಮಿಷದ ಮೌನವನ್ನು ಆಚರಿಸಿತು)

(ಸದನವು 4.33ಕ್ಕೆ ಮುಂದೂಡಿ ನಾಳೆ ಬೆಳಿಗ್ಗೆ 9.30 ಗಂಟೆಗೆ ಸೇರಲು ನಿರ್ಧರಿಸತು)

ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರೀಕ್ಷೆರಿ ಸಿರುವುದಿಲ್ಲವೆಂದು ಸೂಚಿಸುತ್ತದೆ.